# ಕನ್ನಡ - I

# KANNADA - I

## Part - I

1/2

ತರಗತಿ

STANDARD **X**

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2019

NT-151-1-KANNADA-10-AT-VOL.1

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**Prepared by :**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@asianetindia.com
Phone : 0471 - 2341883, Fax : 0471 - 2341869
First Edition : 2019
Printed at : KBPS, Kakkanad, Kochi-30

ಪ್ರೀತಿಯ ಮಕ್ಕಳೇ,

ಜ್ಞಾನವೆನ್ನುವುದು ಒಂದು ಸಾಗರ. ಅದು ಆಳವಾದುದು ಮತ್ತು ವಿಸ್ತಾರವಾದುದು. ಅದನ್ನು ಮೊಗೆದಷ್ಟು ಮುಗಿಯುವುದಿಲ್ಲ. ಅಲ್ಲಿ ವೈವಿಧ್ಯವಿದೆ. ಬದುಕನ್ನು ಸುಂದರವಾಗಿ ರೂಪಿಸುವುದಕ್ಕೆ ಅಗತ್ಯವಾದ ಪರಿಕರಗಳೆಲ್ಲ ಇವೆ.

ವ್ಯಕ್ತಿಯಿಂದ ವ್ಯಕ್ತಿಗೆ ಬದುಕು ಭಿನ್ನವಾಗಿರುತ್ತದೆ. ಅದನ್ನು ಸ್ವತಃ ತಿಳಿದುಕೊಂಡು ಸ್ವಂತ ನಿರ್ಧಾರಗಳಿಗೆ ರೂಪುನೀಡುವ ಜವಾಬ್ದಾರಿ ಪ್ರತಿಯೊಬ್ಬನಿಗೂ ಇದೆ. ಅಂತಹ ಜವಾಬ್ದಾರಿಯುತವಾದ ಹಾದಿಯಲ್ಲಿ ಸಾಗುತ್ತಿರುವವರು, ಸಾಗಬೇಕಾದವರು ನೀವು. ಆದ್ದರಿಂದಲೇ ಜ್ಞಾನಸಾಗರದ ತೀರದಲ್ಲಿ ನಿಮ್ಮನ್ನು ಅಧ್ಯಾಪಕರು ತಂದು ನಿಲ್ಲಿಸಿದ್ದಾರೆ. ಮುಂದಿನ ಆಯ್ಕೆ ನಿಮ್ಮದು.

ಭಾಷಾಜ್ಞಾನದ ವಿಚಾರದಲ್ಲಿ ಎರಡು ಮಾತಿಲ್ಲ. ಅದು ಅತ್ಯಗತ್ಯ. ಅಲ್ಲಿ ನೈಪುಣ್ಯವನ್ನು ಸಾಧಿಸಿದಷ್ಟೂ ಇತರ ವಿಷಯಗಳ ಕಲಿಕೆಗೆ ಅನುಕೂಲವಾಗುವುದರಲ್ಲಿ ಅನುಮಾನವಿಲ್ಲ.

ವೈವಿಧ್ಯಮಯವಾದ, ಸಂತೋಷದಾಯಕವಾದ ಜ್ಞಾನವನ್ನು ಸ್ವತಃ ನಿರ್ಮಾಣ ಮಾಡಿಕೊಳ್ಳುವತ್ತ ಸಾಗುವುದಕ್ಕೆ, ಯೋಗ್ಯವಾದ ಚಟುವಟಿಕೆಗಳನ್ನು ಮಾಡುವುದರ ಮೂಲಕ ಹೊಸಹೊಸ ವಿಚಾರಗಳ ಕಡೆಗೆ ಗಮನಹರಿಸುವುದಕ್ಕೆ ಅನುಕೂಲಕರವಾದ ಪಠ್ಯವಿಷಯಗಳನ್ನೊಳಗೊಂಡ ಕನ್ನಡಭಾಷಾ ಪಠ್ಯಪುಸ್ತಕವನ್ನು ನಿಮ್ಮ ಮುಂದಿಡಲಾಗಿದೆ.

ಭಾಷೆಯ ಮಾಧುರ್ಯವನ್ನು ಆಸ್ವಾದಿಸುತ್ತಾ ಜ್ಞಾನಾರ್ಜನೆ ಮಾಡುತ್ತಾ ಸಾಗುವಲ್ಲಿ ಈ ಪುಸ್ತಕ ನಿಮಗೆ ಉತ್ತಮ ಸಂಗಾತಿಯಾಗಲೆಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

ಡಾ. ಜೆ.ಪ್ರಸಾದ್
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# ಅನುಕ್ರಮಣಿಕೆ


**ಘಟಕ -1. ಕಾಡಿನ ಒಡಲು ........................................................ 5-25**

- ದೇವರು ರುಜು ಮಾಡಿದನು ............... ಕವನ ................. ಕುವೆಂಪು
- ವ್ಯಾಘ್ರಗೀತೆ ....................................... ಲಲಿತ ಪ್ರಬಂಧ ... ಎ.ಎನ್. ಮೂರ್ತಿರಾವ್
- ಬೆಟ್ಟದ ತಲೆಮುಟ್ಟಿದಾಗ ...................... ಪ್ರವಾಸ ಕಥನ ..... ಡಾ. ಉಪ್ಪಂಗಳ ರಾಮಭಟ್ಟ


**ಘಟಕ -2 ಬಾಳಬೆಳಕು ........................................................ 27-44**

- ವಚನಸಿರಿ ........................................... ವಚನಗಳು .......... ವಚನಕಾರರು
- ಮನಃಪರಿವರ್ತನೆ ................................ ಗೀತನಾಟಕ ......... ಪ್ರಭುಶಂಕರ
- ಕೃಷಿ-ಒಂದು ಜೀವನಮಾರ್ಗ .............. ಪ್ರಬಂಧ .............. ಪ್ರೊ. ಎಸ್.ಜಿ. ಸಿದ್ಧರಾಮಯ್ಯ

**ಘಟಕ 3. ನಾಡದೀಪ ........................................................ 45-66**

- ತೌಳವಮಾತೆ ....................................... ಕವನ ................. ಮಂಜೇಶ್ವರ ಗೋವಿಂದ ಪೈ
- ದುರ್ಗದ ದೊರೆ ................................. ಕಾದಂಬರಿ ........... ತ.ರಾ.ಸು
- ದಲಿತಬಂಧು ಕುದ್ಮುಲ್ ರಂಗರಾವ್.... ವ್ಯಕ್ತಿಪರಿಚಯ ...... ಲಕ್ಷ್ಮಣ ಕೊಡಸೆ

ಘಟಕ - 1



# ಕಾಡಿನ ಒಡಲು

# ಕಾ(ಪಾ)ಡು

– ಹರಿನಾರಾಯಣ ಮಾಡಾವು

'ಕಾಡು' ನಾನಾದರೂ ಕಾಡುವನು ಮಾನವನು
ಕಡಿದು ಬರಿದಾಗಿಸುವ ದುರುಳತನದವನು

ಕೊಡಲಿ ದಾಳಿಗೆ ಸಿಲುಕಿ ಬಡವಾದ ಒಡಲಿನಲಿ
ಕಂಗೆಡುವ ಸ್ಥಿತಿ ಬರಲು ನಾನೇನು ಕೊಡಲಿ?

ಪ್ರಾಣಿಪಕ್ಷಿಗಳ ಹಿತದಾಸರೆಯು ಮರೆಯಾಗಿ
ಕೊರತೆಯಲಿ ಮಳೆ ಸಹಿತ ದೂರವಾಗಿ....

ಹಸಿರು ಸಂಪದವಡಗಿ ಬಹಳ ಬರ ಬಂದಾಗ
ಪರಿಸರದ ಮಲಿನತೆಯು, ವಿಪುಲ ರೋಗ

ನರನ ಮನದಾಸೆಯದು ಮಿತಿಯಿರದೆ ಮೊರೆವಾಗ
ಅರಿವರಾರುಂಟು ಮರದ ಸ್ವರದಂತರಂಗ?

ಪೊಡವಿಯೊಡಲಿನ ಸಮತೆ ಕಡಿಮೆಯಾಗದೆಯಿರಲಿ
ಒಡೆಯನೊಲವಿನ ಕಡಲು.... ಕಾಪಾಡಲಿ



ಮೇಲಿನ ಕವನದ ಕುರಿತು ನಿಮ್ಮ ಅನಿಸಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.



# ದೇವರು ರುಜು ಮಾಡಿದನು!

– ಕುವೆಂಪು



ದೇವರು ರುಜು ಮಾಡಿದನು;
ರಸವಶನಾಗುತ ಕವಿ ಅದ ನೋಡಿದನು!

ಬಿತ್ತರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಾಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ
ಮೆರೆದಿರೆ ಜಲಸುಂದರಿ ತುಂಗೆ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು!

ನದಿ ಹರಿದಿತ್ತು; ಬನ ನಿಂತಿತ್ತು;
ಬಾನ್ ನೀಲಿಯ ನಗೆಬೀರಿತ್ತು.
ನಿರ್ಜನ ದೇಶದ ನೀರವ ಕಾಲಕೆ
ಖಗರವ ಪುಲಕಂ ತೋರಿತ್ತು.
ಹೂಬಿಸಿಲಲಿ ಮಿರುಗಿರೆ ನಿರಿವೊನಲು
ಮೊರೆದಿರೆ ಬಂಡೆಗಳಲಿ ನೀರ್ತೊದಲು
ರಂಜಿಸೆ ಇಕ್ಕೆಲದಲಿ ಹೊಮ್ಮಳಲು
ಸಿಬ್ಬಲುಗುಡ್ಡೆಯ ಹೊಳೆಯಲಿ ಮೀಯುತ
ಕವಿಮನ ನಾಕದಿ ನೆಲೆಸಿತ್ತು
ಮಧು ಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು!

ದೃಶ್ಯದಿಗಂತದಿನೊಮ್ಮೆಯೆ ಹೊಮ್ಮಿ
ಗಿರಿವನ ಪಟದಾಕಾಶದಲಿ
ತೇಲುತ ಬರಲ್ಕೆ ಬಲಾಕಪಂಕ್ತಿ
ಲೇಖನ ರೇಖಾನ್ಯಾಸದಲಿ
ಅವಾಙ್ಮಯ ಛಂದಃಪ್ರಾಸದಲಿ
ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು!



## ಕವಿಪರಿಚಯ

ಪ್ರಕೃತಿ ಸೌಂದರ್ಯದ ಮಡಿಲಾದ ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ವೆಂಕಟಪ್ಪ, ಸೀತಮ್ಮ ದಂಪತಿಯ ಸುಪುತ್ರರಾಗಿ ೧೯೦೪ನೇ ಇಸವಿ ಡಿಸೆಂಬರ್ ೨೯ನೇ ತಾರೀಕಿನಂದು **ಕುವೆಂಪು** ಜನಿಸಿದರು. ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಎಂಬುದು ಅವರ ಪೂರ್ಣ ಹೆಸರು. ಮಲೆನಾಡ ಕಾಡಿನ ಸೌಂದರ್ಯವನ್ನು ಕಂಡುಂಡು ಬೆಳೆದ ಅವರು ಮೈಸೂರಿನಲ್ಲಿ ತಮ್ಮ ಪ್ರೌಢಶಾಲಾ ಮತ್ತು ಉನ್ನತ ಶಿಕ್ಷಣವನ್ನು ಪಡೆದರು. ಬಳಿಕ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದರು. ತೊಂಬತ್ತು ವರುಷಗಳ ತುಂಬು ಬಾಳ್ವೆ ನಡೆಸಿದ ಕುವೆಂಪು ೧೯೯೪ನೇ ಇಸವಿ ನವೆಂಬರ್ ೧೧ನೇ ತಾರೀಕಿನಂದು ವಿಧಿವಶರಾದರು.

'ಶ್ರೀರಾಮಾಯಣ ದರ್ಶನಂ' ಎಂಬ ಮಹಾಕಾವ್ಯವು ಕುವೆಂಪುರವರು ಸಾಹಿತ್ಯಲೋಕಕ್ಕೆ ಸಮರ್ಪಿಸಿದ ಒಂದು ಅನರ್ಘ್ಯ ರತ್ನ. ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡಿತಿ ಎಂಬ ಬೃಹತ್ ಕಾದಂಬರಿಗಳು, ಕೊಳಲು, ಪಾಂಚಜನ್ಯ, ಪಕ್ಷಿಕಾಶಿ ಮುಂತಾದ ಕವನಸಂಕಲನಗಳು, ತಪೋನಂದನ, ರಸೋವೈಸಃ ಎಂಬ ವಿಮರ್ಶಾಲೇಖನ ಸಂಕಲನಗಳು, ನನ್ನ ದೇವರು ಮತ್ತು ಇತರ ಕತೆಗಳು ಎಂಬ ಕಥಾಸಂಕಲನ, ಅಮಲನ ಕತೆ, ಮೋಡಣ್ಣನ ತಮ್ಮ ಮುಂತಾದ ಮಕ್ಕಳ ಸಾಹಿತ್ಯಕೃತಿಗಳು, ಜಲಗಾರ, ಯಮನ ಸೋಲು ಮುಂತಾದ ನಾಟಕಗಳು, ನೆನಪಿನ ದೋಣಿಯಲ್ಲಿ ಎಂಬ ಆತ್ಮಕಥನ ಹೀಗೆ ಸರಿಸುಮಾರು ಎಪ್ಪತ್ತು ಸಾಹಿತ್ಯ ಕೃತಿಗಳನ್ನು ರಚಿಸಿ ಕುವೆಂಪುರವರು ಕನ್ನಡ ವಾಙ್ಮಯ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ.

ಹಲವಾರು ವಿಶ್ವವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್, ಅಖಿಲಭಾರತ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ರತ್ನ ಬಿರುದು, ರಾಷ್ಟ್ರಕವಿ ಪುರಸ್ಕಾರ ಮುಂತಾದ ಗೌರವಗಳಿಗೆ ಪಾತ್ರರಾದ ಕುವೆಂಪುರವರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿಗಳೂ ಲಭಿಸಿವೆ. ಇದಕ್ಕೆ ಕಲಶವಿಡುವಂತೆ ಅತ್ಯುನ್ನತ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿಯು ಅವರ 'ಶ್ರೀರಾಮಾಯಣ ದರ್ಶನಂ' ಕೃತಿಗೆ ಲಭಿಸಿದೆ. ಈ ಮೂಲಕ ಕನ್ನಡಕ್ಕೆ ಈ ಪ್ರಶಸ್ತಿಯ ಗೌರವವನ್ನು ಮೊದಲಿಗೆ ತಂದಿತ್ತ ಕೀರ್ತಿಯೂ ಅವರದಾಗಿದೆ. 'ದೇವರು ರುಜು ಮಾಡಿದನು' ಕವನವನ್ನು 'ಪಕ್ಷಿಕಾಶಿ' ಕವನ ಸಂಕಲನದಿಂದ ಆರಿಸಲಾಗಿದೆ.

### ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಜಲಸುಂದರಿ ತುಂಗೆ ಎಲ್ಲಿ ಮೆರೆಯುತ್ತಿದ್ದಳು?

2 ಕವಿಯ ಮನಸ್ಸು ನಾಕದಲ್ಲಿ ನೆಲೆಸಿದ ವಿಶಿಷ್ಟ ಸಂದರ್ಭ ಯಾವುದು?

3 ದೇವರ ರುಜುವಿನಂತೆ ಕವಿಗೆ ಯಾವುದು ಕಾಣಿಸಿತು?

### ವಿಂಗಡಿಸಿ ಬರೆಯಿರಿ.

ಕವನದ ಸಾಲುಗಳಲ್ಲಿ ಸಾಧ್ಯವಿರುವಲ್ಲೆಲ್ಲ ಪದವಿಂಗಡಣೆ ಮಾಡಿ ಬರೆಯಿರಿ.

ಉದಾ : ಬಿತ್ತರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಾಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ

ಬಿತ್ತರದ ಆಗಸ ಹಿನ್ನೆಲೆ ಆಗಿರೆ
ಪರ್ವತದ ಎತ್ತರ ಸಾಲಾಗಿ ಎಸೆದಿರೆ
ಕಿಕ್ಕಿರಿದ ಅಡವಿಗಳ ಅಂಚಿನ ನಡುವೆ

### ವಾಕ್ಯರಚಿಸಿರಿ.

ಕವನದ ಸಾಲುಗಳಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಪಟ್ಟಿ ಮಾಡಿರಿ. ಆ ಪದಗಳನ್ನು ಬಳಸಿ ಬೇರೆ ವಾಕ್ಯಗಳನ್ನು ರಚಿಸಿರಿ.

ಉದಾ :

- ದೇವರು ರುಜು ಮಾಡಿದನು
  ರಸವಶನಾಗುತ ಕವಿ ಅದ ನೋಡಿದನು
- ಕುಂಬಾರನು ಮಡಕೆಯನ್ನು ಮಾಡಿದನು.
  ರಮೇಶನು ಆಶ್ಚರ್ಯದಿಂದ ಅದನ್ನು ನೋಡಿದನು.

### ಆಸ್ವಾದನ ಟಿಪ್ಪಣಿ ಬರೆಯಿರಿ.

- ದೇವರು ರುಜು ಮಾಡಿದನು ಕವನದ ಆಸ್ವಾದನ ಟಿಪ್ಪಣಿ ಬರೆಯಿರಿ.

### ಗದ್ಯಭಾಗ ರಚಿಸಿರಿ.

ಕೆಳಗೆ ಕೊಡಲಾದ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಪದಗಳಿಗೆ ಸಮಾನ ಅರ್ಥವಿರುವ ಪದಗಳನ್ನು ಬಳಸಿ ಬೇರೊಂದು ಗದ್ಯಭಾಗವನ್ನು ರಚಿಸಿರಿ.

ರವಿಯು ತನ್ನ ಮುಂದಿದ್ದ ಕಡತಕ್ಕೆ ರುಜು ಹಾಕಿ ಕುರ್ಚಿಯಿಂದ ಎದ್ದು ಸಮಯ ನೋಡಿ ಬೆಚ್ಚಿದನು. ಗಂಟೆ ಆಗಲೇ ಏಳು ದಾಟಿತ್ತು. ಇಂದು ಮಗಳ ಹುಟ್ಟುಹಬ್ಬ. ಸಂಜೆ

ಬೇಗ ಮನೆಗೆ ಬರುತ್ತೇನೆ ಎಂದು ಮಗಳಿಗೆ ಹೇಳಿದ್ದು ನೆನಪಾಯಿತು. ಅವಸರದಿಂದ ಕಚೇರಿಯ ಹೊರಕ್ಕೆ ಬಂದು ಬಸ್ಸಿಗಾಗಿ ಕಾದು ನಿಂತಿದ್ದ ಜನರ ಸಾಲಿನಲ್ಲಿ ಸೇರಿಕೊಂಡನು. ಬಸ್ಸು ಹತ್ತಿ ಮನೆಗೆ ತಲುಪಿದನು. ಮನೆಯೊಳಗೆ ನೀರವತೆ ತುಂಬಿತ್ತು. ಅಲ್ಲೆಲ್ಲೂ ಮನೆಯವರ ಸುಳಿವಿರಲಿಲ್ಲ. ಆತಂಕದಿಂದ ರವಿಯ ಹೃದಯ ಡವಗುಟ್ಟತೊಡಗಿತು. ಇದ್ದಕ್ಕಿದ್ದಂತೆ ವಿದ್ಯುತ್ ದೀಪಗಳು ಝಗ್ಗನೆ ಬೆಳಗಿದವು. 'ಅಪ್ಪಾ!' ಎಂದು ಮಧುರವಾಗಿ ಮಗಳು ರವಿಯನ್ನು ಕರೆದಳು. ಆ ಧ್ವನಿ ಕೇಳಿ ಅವನು ಪುಲಕಗೊಂಡನು.

### ಕರ್ಮಧಾರಯ ಸಮಾಸ

- ಮುಂಜಾವಿನಲ್ಲಿ ತಂಗಾಳಿಯು ಬೀಸುತಿತ್ತು.

ಮೇಲೆ ನೀಡಲಾದ ವಾಕ್ಯದಲ್ಲಿ ಅಡಿಗೆರೆಯೆಳೆದ ತಂಗಾಳಿ ಎಂಬ ಪದವನ್ನು ತಂಪಾದ ಗಾಳಿ ಎಂದು ವಿಗ್ರಹಿಸಿ ಬರೆಯಬಹುದು. ಇಲ್ಲಿ ಪೂರ್ವಪದವು ವಿಶೇಷಣವಾಗಿದ್ದು ಉತ್ತರಪದವು ನಾಮಪದವಾಗಿರುತ್ತದೆ. ಇಂತಹ ಸಮಾಸವನ್ನು ಕರ್ಮಧಾರಯ ಸಮಾಸ ಎನ್ನಲಾಗುತ್ತದೆ.

ಕೆಳಗೆ ಕೊಡಲಾದ ವಾಕ್ಯಗಳಲ್ಲಿ ಅಡಿಗೆರೆಯೆಳೆದ ಪದಗಳ ವಿಗ್ರಹವಾಕ್ಯಗಳನ್ನು ಬರೆದು ಅವುಗಳಲ್ಲಿ ಕರ್ಮಧಾರಯ ಸಮಾಸವಾಗುವ ಪದಗಳನ್ನು ಗುರುತಿಸಿ ಅವುಗಳನ್ನು ಬಳಸಿ ಬೇರೆ ವಾಕ್ಯಗಳನ್ನು ರಚಿಸಿರಿ.

- ಅತಿವೃಷ್ಟಿಯಿಂದಾಗಿ ನಾಶನಷ್ಟಗಳನ್ನು ಅನುಭವಿಸಿದ ಜನರು ಬಿರುಗಾಳಿಯ ಹೊಡೆತದಿಂದ ಮತ್ತಷ್ಟು ತತ್ತರಿಸಿದರು.
- ಶಾಲಾ ಆವರಣದಲ್ಲಿ ಮಕ್ಕಳು ಬೆಳೆಸಿದ ಔಷಧೀಯ ಗುಣವುಳ್ಳ ಮರಗಿಡಬಳ್ಳಿಗಳು ಕಂಗೊಳಿಸುವುದನ್ನು ಕಂಡ ಊರವರು ಆನಂದಗೊಂಡರು.
- ಭಾರತದಲ್ಲಿ ಇತ್ತೀಚೆಗೆ ಹೆಬ್ಬುಲಿಗಳ ಸಂಖ್ಯೆ ಕ್ಷೀಣಿಸುತ್ತಾ ಬರುತ್ತಿದೆ.
- ಹುಣ್ಣಿಮೆಯ ದಿನ ಪ್ರಕೃತಿ ತಂಬೆಳಕಲ್ಲಿ ಮಿಂದೆದ್ದಂತೆ ಕಾಣಿಸುತ್ತಿತ್ತು.



### ಕವನ ಬರೆಯಿರಿ.

ಕೆಳಗೆ ಕೊಡಲಾದ ಕವನದ ಸಾಲುಗಳನ್ನು ಸಾಧ್ಯವಿರುವಷ್ಟು ಮುಂದುವರಿಸಿ ರಚಿಸಿರಿ. ಅನಂತರ ಅದನ್ನು ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿ ಶಾಲಾಬ್ಲಾಗ್‌ನಲ್ಲಿ ಪ್ರಕಟಿಸಿರಿ.

ಕಾಡ ಒಡಲ ಬೆಡಗಿನಲ್ಲಿ
ಕಲಕಲ ನದಿ ಹರಿಯುವಲ್ಲಿ
ಹಕ್ಕಿ ಹಾಡು ಮೊಳಗುವಲ್ಲಿ
ಚೆಲುವು ನಗೆಯ ಬೀರಿತು.



# ವ್ಯಾಘ್ರಗೀತೆ

– ಎ. ಎನ್. ಮೂರ್ತಿರಾವ್

"ಎಲೆ ಬೆಕ್ಕೆ ರೂಪಿನಿಂದಲೆ ಹುಲಿಯ ಜಾತಿಗೆ ಸೇರ್ದೆನೆಂದು ಗರ್ವಿಸಬೇಡ" ಎಂದು ಬರೆದ ಕವಿಯ ವಿಷಯದಲ್ಲಿ ನನಗೆ ಬಹಳ ಗೌರವವುಂಟು. ಆತ ಹುಲಿಯನ್ನು ಕೇವಲ ಹಿಂಸ್ರಪಶುವೆಂದು ತಿರಸ್ಕರಿಸಲಿಲ್ಲ. ಅದರ ಜಾತಿಗೆ ಸೇರುವುದು ಹೆಮ್ಮೆಯ ವಿಷಯವೆಂದು ಮನಗಂಡಿದ್ದನು. ಹುಲಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಉಂಟು. ಆದರೆ ನಿಷ್ಪಕ್ಷಪಾತದ ದೃಷ್ಟಿಯಿಂದ ನೋಡಿದರೆ ಅದರಲ್ಲಿ ತಪ್ಪೇನಿದೆ? ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಹುಲಿಯಲ್ಲಿ ಅದೊಂದು ದೊಡ್ಡ ಅಪರಾಧವೇ? ಅದು ಆಹಾರಕ್ಕಾಗಿ ಕೊಲ್ಲುವುದರಲ್ಲೇನೂ ತಪ್ಪಿಲ್ಲ; ಹಾಗೆ ಕೊಲ್ಲುವಾಗ ಯಾವುದಾದರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೇ ಅಥವಾ ಧರ್ಮಾಧರ್ಮಗಳ ಲೆಕ್ಕವನ್ನೇ ಇಡದೆ ಸ್ವಚ್ಛಂದದಿಂದ ವರ್ತಿಸುತ್ತದೆಯೇ ಎಂಬುದೇ ಮುಖ್ಯಪ್ರಶ್ನೆ.

"ಹುಲಿಗೆ ಧರ್ಮವೇನು ಬಂತು" ಎನ್ನಬಹುದು. ಇತರ ದೇಶಗಳಲ್ಲಿರುವ ಹುಲಿಗಳ ವಿಷಯ ಹೇಗೋ ನನಗೆ ತಿಳಿಯದು. ಆದರೆ ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಭಗವದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಆ ಭರತಭೂಮಿಯಲ್ಲಿ ಹುಲಿಗಳಾದರೂ ಅಧರ್ಮಕ್ಕೆಡೆಗೊಡುವುದುಂಟೆ? ಈಚೆಗೆ ನನ್ನ ಬಂಧು ಕೃಷ್ಣಮೂರ್ತಿ ತನ್ನ ವಂಶದವರೊಬ್ಬರ ಅನುಭವಕಥೆಯನ್ನು ಹೇಳಿದ. ಅದನ್ನು ಕೇಳಿದ ಮೇಲೆ ನನಗೆ ಹುಲಿಯ ಧರ್ಮಶ್ರದ್ಧೆಯ ಅರಿವಾಯಿತು.

ಕೃಷ್ಣಮೂರ್ತಿಯ ಅಜ್ಜಂದಿರು ತುಮಕೂರು ಜಿಲ್ಲೆಯ ಒಂದು ಹಳ್ಳಿಯವರು. ಅವರ ಹಿರಿಯರು ಸಣ್ಣದೊಂದು ಸಂಸ್ಥಾನದಲ್ಲಿ ಮಂತ್ರಿಯಾಗಿದ್ದು ತಮ್ಮ ರಾಜಭಕ್ತಿಗಾಗಿ ಹೆಸರು ಪಡೆದವರು. ನಮ್ಮ ಕಥಾನಾಯಕರ ಕಾಲಕ್ಕೆ ಮಂತ್ರಿತ್ವ ಹೋಗಿ ಕೇವಲ ಶಾನುಭೋಗಿಕೆ ಮಾತ್ರ ಉಳಿದಿತ್ತು. ಆದರೂ ಶಾನುಭೋಗರು ತಮ್ಮ ವಂಶದ ಕೀರ್ತಿಗೆ ಕುಂದು ತರದಂತೆ ಖಿರ್ದಿ ಪುಸ್ತಕವನ್ನು ನಿಷ್ಠೆಯಿಂದ ಕಾಪಾಡಿಕೊಂಡು, ಮಸಿಯ ಕಾಣಿಕೆಗಾಗಿ ರೈತರನ್ನು ಪೀಡಿಸದೆ, ದೇವರು ಕೊಟ್ಟಷ್ಟರಲ್ಲಿ ತೃಪ್ತಿಗೊಂಡು ಜೀವನ ನಡೆಸುತ್ತಿದ್ದರು. ಅವರ ಭಾಗಕ್ಕೆ ಖಿರ್ದಿ ಪುಸ್ತಕ ಕೇವಲ ಜೀವನದ ಆಧಾರವಲ್ಲ; ಅವರ ರಾಜಕೀಯ ಲಾಂಛನ.

ಒಂದು ಬಾರಿ ಅವರು ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣ ಕಟ್ಟಿ, ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಾಸು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ, ಆದರೂ ಬೆಳದಿಂಗಳ ದಿನ; 'ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು' ಎಂದುಕೊಂಡು ಬೇಗಬೇಗ ನಡೆದರು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಹಸಿವಿನ ಜೊತೆಗೆ ಭಯವೂ ಸೇರಿ ಅವರ ಕಾಲು ಮತ್ತಷ್ಟು ಚುರುಕಾಯಿತು.

ರಸ್ತೆಗೆ ಸ್ವಲ್ಪ ದೂರದಲ್ಲೇ ಇದ್ದ ಗುಹೆಯಲ್ಲಿ ಹುಲಿಯೊಂದು ಮಲಗಿತ್ತು. ದಿನವೆಲ್ಲಾ ನಿದ್ದೆಮಾಡಿ ಆಗತಾನೆ ಆಕಳಿಸುತ್ತ ಎದ್ದ ಹುಲಿಗೆ ತನ್ನ ಹೊಟ್ಟೆ ಬರಿದಾಗಿದೆಯೆಂದು ಭಾಸವಾಯಿತು. ವಿಧಿ ಆಹಾರಕ್ಕೆ ಏನನ್ನು ಒದಗಿಸುತ್ತದೋ ಎಂದು ಯೋಚಿಸುತ್ತಾ ಒಂದೆರಡು ಸಾರಿ ಮೈಮುರಿದು ಹೊರಟಿತು. ಬಂಡೆಗಳ ಮರೆಯಲ್ಲೇ ನಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಮಧುರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು. ಆ ಸುವಾಸನೆಯ ಜಾಡನ್ನೇ ಹಿಡಿದು ನಿಶ್ಶಬ್ದವಾಗಿ ನಡೆಯುತ್ತಾ ರಸ್ತೆಯ ಬಳಿಗೆ ಬಂದು ಶಾನುಭೋಗರನ್ನು ಕಂಡಿತು. ಅವರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ಹುಲಿಯ ಆನಂದಕ್ಕೆ ಕೊರತೆ ಒಂದಿತ್ತು; ಆ ಶಾನುಭೋಗರು ಹುಲಿಗೆ ಅಭಿಮುಖರಾಗಿರದೆ ಅದರ ಕಡೆಗೆ ಬೆನ್ನುತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೆ.

ಆದ್ದರಿಂದ ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು. ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ. ನಿಶ್ಶಬ್ದವಾಗಿ ಅವನ ಹಿಂದೆಯೇ ನಡೆದು, ಅನಂತರ ಅವನ ಮುಂಭಾಗಕ್ಕೆ ನೆಗೆದು, ಕೂಡಲೇ ತಿರುಗಿ ಅವನ ಮೇಲೆ ಬೀಳಬೇಕು. ತನ್ನ ಬಡಬಂಧುವಾದ ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು.

ಇತ್ತ ಶಾನುಭೋಗರಿಗೆ ಇದ್ದಕ್ಕಿದ್ದ ಹಾಗೆಯೇ ಮನಸ್ಸಿನಲ್ಲಿ ಅಳುಕು ಹುಟ್ಟಿತು. "ಪಂಚೇಂದ್ರಿಯಗಳಿಗೆ ಗೋಚರವಾಗದಿರುವಂಥ ಅಪಾಯವನ್ನು ಸೂಚಿಸುವ ಆರನೆಯ ಇಂದ್ರಿಯವೊಂದಿದೆ" ಎಂದು ಬಲ್ಲವರು ಹೇಳುತ್ತಾರೆ. ಶಾನುಭೋಗರಲ್ಲಿ ಆ ಇಂದ್ರಿಯ ಜಾಗೃತವಾಗಿ ಹುಲಿ ಬಂದದ್ದು ಅವರಿಗೆ ತಿಳಿಯಿತು. ಹುಲಿಯೇ ಆದರೂ ಅದು ಹಿಂದಿನಿಂದ

ಮೇಲೆ ಬೀಳುವುದಿಲ್ಲವೆಂದು ಶಾನುಭೋಗರು ಬಲ್ಲರು. ಹುಲಿಗೆ ಹೊಳೆದ ಯೋಚನೆಯೇ ಅವರಿಗೂ ಹೊಳೆಯಿತು. ಹುಲಿ ಹತ್ತಿರ ಬಂದು ನೆಗೆಯಿತು. ಅದು ತಮ್ಮ ತಲೆಯ ಮೇಲೆ ಬರುವ ವೇಳೆಗೆ ಸರಿಯಾಗಿ ಶಾನುಭೋಗರು ಸ್ವಲ್ಪ ಬಾಗಿದರು. ಹುಲಿ ನೆಲಕ್ಕೆ ಇಳಿದು ತಮ್ಮ ಕಡೆಗೆ ತಿರುಗುವುದರೊಳಗೆ ಅವರೂ ಹಿಂತಿರುಗಿ ಬಂದ ದಾರಿಯಲ್ಲೇ ಪುನಃ ನಡೆದರು. ಹುಲಿ ಕತ್ತೆತ್ತಿ ನೋಡಿದರೆ ಶಾನುಭೋಗರು ಮತ್ತೆ ತನ್ನ ಕಡೆಗೆ ಬೆನ್ನುತಿರುಗಿಸಿದ್ದಾರೆ!

ಹುಲಿಯ ಮುಖ ಪೆಚ್ಚಾಯಿತು. ಆದರೆ ಶಾನುಭೋಗರ ವಿಷಯದಲ್ಲಿ ಮೆಚ್ಚಿಕೆಯೂ ಆಯಿತು. ತನಗೆ ತಕ್ಕ ಎದುರಾಳಿಯೇ ಸಿಕ್ಕಿದನೆಂಬ ಮೆಚ್ಚಿಕೆ. ತಿಂದರೆ ಇಂಥವನನ್ನೇ ತಿನ್ನಬೇಕು ಎಂದುಕೊಂಡು ಮತ್ತೊಂದು ಬಾರಿ ನೆಗೆಯಿತು. ಈ ಸಲವೂ, ಹುಲಿಗೆ ಕಂಡದ್ದು ಶಾನುಭೋಗರ ಬೆನ್ನೇ. ಆದಕ್ಕೆ ಒಂದು ಕಡೆ ಹಸಿವು, ಮತ್ತೊಂದು ಕಡೆ 'ತನ್ನ ಸ್ವಾಭಿಮಾನಕ್ಕೆ ಇಂಥ ಧಕ್ಕೆ ಬಂತಲ್ಲಾ' ಎಂಬ ಯೋಚನೆ. 'ನಾಳೆ ಇತರ ವ್ಯಾಘ್ರಗಳೆದುರಿಗೆ ತನ್ನ ಗೌರವ ಎಷ್ಟಕ್ಕೆ ನಿಂತೀತು, ಮೇಲೆ ಬಿದ್ದೇ ಬಿಡಲೆ' ಎಂಬ ಯೋಚನೆ ಅದರ ಮನಸ್ಸಿನಲ್ಲಿ ಹೊಳೆದುಹೋಯಿತು. ಕ್ಷಣಕಾಲ ಅದರ ಮನಸ್ಸಿನಲ್ಲಿ ಗೊಂದಲ.

ಆದರೆ, ಆ ಗೊಂದಲ ಕ್ಷಣಕಾಲಕ್ಕಿಂತಲೂ ಹೆಚ್ಚಾಗಿ ನಿಲ್ಲಲಿಲ್ಲ. ಅದು ಸದ್ವಂಶದಲ್ಲಿ ಜನಿಸಿದ ಹುಲಿ. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ" ಎಂದು ಆ ಹಸು ಆಹ್ವಾನ ಕೊಟ್ಟಾಗ ತನ್ನ ಅಜ್ಜ ಬಾಯಿ ಚಪ್ಪರಿಸಿಕೊಂಡು ಹಸುವನ್ನು ತಿನ್ನಬಹುದಾಗಿತ್ತು. ಆದರೂ ಆ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನಲೊಲ್ಲದೆ ಪ್ರಾಣಬಿಡಲಿಲ್ಲವೇ? ಆ ಪವಿತ್ರ ಕಥೆ ಸುವರ್ಣಾಕ್ಷರದಲ್ಲಿ ಲಿಖಿತವಾಗಿ ಇಂದಿಗೂ ಹುಲಿಗಳಿಗೂ ಹಸುಗಳಿಗೂ ಆದರ್ಶವಾಗಿಲ್ಲವೇ? ಅಂಥ ಹುಲಿಯ ಮೊಮ್ಮಗನಾಗಿ ಹುಟ್ಟಿ ತಾನು ಅಧರ್ಮಕ್ಕೆ ಕೈಹಾಕುವುದೇ? ಹುಲಿಗೆ ಭಗವದ್ಗೀತೆ ನೆನಪಿಗೆ ಬಂತು; ಸ್ವಧರ್ಮೇ ನಿಧನಂ ಶ್ರೇಯಃ, ಬೈಬಲ್ ನೆನಪಿಗೆ ಬಂದು 'ಸೈತಾನ ಹಿಂತಿರುಗು' ಎಂದುಕೊಂಡಿತು.

ಆ ಪಾಪದ ಯೋಚನೆಯನ್ನು ಹೊರದೂಡಿ ಮತ್ತೆ ಶಾನುಭೋಗರ ಮುಂಭಾಗಕ್ಕೆ ನೆಗೆಯಿತು. ಕತ್ತೆತ್ತಿದರೆ ಶಾನುಭೋಗರು ಮತ್ತೆ ತಿರುಗಿದ್ದಾರೆ. ಹುಲಿಗೆ ಅವರ ಬೆನ್ನು ಹೊರತು ಮತ್ತೇನೂ ಕಾಣಲೊಲ್ಲದು. ಈ ಸ್ಪರ್ಧೆ ಐದಾರು ಸಾರಿ ನಡೆಯುವುದರೊಳಗೆ ಇಬ್ಬರ ವೇಗವೂ ಸಲಸಲಕ್ಕೂ ಹೆಚ್ಚಿತು. ಈ ಶಾನುಭೋಗರಿಗೆ ನಡೆಯುವುದು ಸಾಧ್ಯವಿರಲಿಲ್ಲ. ನಿಂತ ಕಡೆಯಲ್ಲೇ ಹುಲಿಯ ವೇಗಕ್ಕೆ ಸರಿಯಾಗಿ ಚಾಚೂ ತಪ್ಪದಂತೆ ತಮ್ಮ ವೇಗವನ್ನೂ ಹೊಂದಿಸಿಕೊಂಡು ಕುಲಾಲಚಕ್ರದಂತೆ ತಿರುಗುತ್ತಿದ್ದರು. ಒಂದು ಕ್ಷಣವಾದರೂ ಹುಲಿಗೆ ಅವರ ಮುಖದರ್ಶನವಾಗಲಿಲ್ಲ. ಆದರೆ ಈ ದೊಂಬರಾಟವನ್ನು ಎಷ್ಟು ಕಾಲ ನಡೆಸಲು ಸಾಧ್ಯ! ಶಾನುಭೋಗರ ತಲೆಸುತ್ತಲಾರಂಭಿಸಿತು.

ಈ ವಿಪತ್ತಿನ ಸನ್ನಿವೇಶದಲ್ಲಿ ಅವರಿಗೆ ತಮ್ಮ ಖಿರ್ದಿ ಪುಸ್ತಕದ ಯೋಚನೆ ಬಂತು. ಹುಲಿಯ ಪಂಜಾದಿಂದ ಒಂದೇಟು ಬಿದ್ದರೆ ಸಾಕು – ಮುಂದೆ ಯಾವುದರ ಅರಿವೂ ಉಳಿಯುವುದಿಲ್ಲ. ನೋವೇನಿದ್ದರೂ ಒಂದೇ ಒಂದು ಕ್ಷಣದ ಮಾತು. 'ಮಡಿಯಬೇಕಾದರೆ ಮಾಡಿಯೇ ಮಡಿಯುತ್ತೇನೆ' ಎಂದು ನಿಶ್ಚಯಿಸಿದರು. ಆದರೆ ಮಾಡುವುದಾದರೂ ಏನನ್ನು? ಅವರಲ್ಲಿ ಆಯುಧವಿರಲಿಲ್ಲ. ಖಿರ್ದಿ ಪುಸ್ತಕ ಶಾನುಭೋಗರ ಬ್ರಹ್ಮಾಸ್ತ್ರ, ಅದನ್ನೇ ಉಪಯೋಗಿಸಬೇಕು. ಆದರೆ ಅದು ಹುಲಿಯ ಮೇಲೇನು ಫಲಿಸೀತು! ಅದನ್ನು

ಪ್ರಯೋಗಿಸಿದ್ದರಿಂದ ಹುಲಿ ಸಾಯುವುದಂತಿರಲಿ, ಅದರ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ. ಆದರೂ ಕ್ಷಣಕಾಲಕ್ಕೆ ಹುಲಿ ಅಪ್ರತಿಭವಾದರೆ, ಅದರ ಗಮನ ಸ್ವಲ್ಪ ಚಲಿಸಿದರೆ, ಅಷ್ಟರಲ್ಲಿ ಸಮೀಪದ ಮರಕ್ಕೆ ಹಾರಿ ಮೇಲಕ್ಕೇರಬಹುದೆಂಬ ಹುಚ್ಚು ಆಸೆ, ಅಂತೂ ಮನುಷ್ಯ ಪ್ರಯತ್ನದಲ್ಲಿರುವುದನ್ನೆಲ್ಲಾ ಮಾಡಿಬಿಡಬೇಕು, ಅದರ ಮೇಲೆ – ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ!

ಇತ್ತ ಹುಲಿಗೂ ವಿಪರೀತ ಆಯಾಸ. ಖಿರ್ದಿ ಪುಸ್ತಕ ಅದರ ಮುಖಕ್ಕೆ ಬಂದು ಬಡಿದಾಗ ಹುಲಿಗೆ ಪೆಟ್ಟೇನೂ ಆಗಲಿಲ್ಲ, ಆಶ್ಚರ್ಯವಾಯಿತು. ಬಳಲಿಕೆಯಿಂದ ಜಡವಾಗಿದ್ದೇ ಮನಸ್ಸಿಗೆ ಪರಿಸ್ಥಿತಿಯ ಅರಿವಾಗಲು ಅರೆ ನಿಮಿಷ ಹಿಡಿಯಿತು. ಆ ಅರೆ ನಿಮಿಷದಲ್ಲಿ ಶಾನುಭೋಗರು “ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು” ಎನ್ನುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆಗೆ ಧಾವಿಸಿದರು. ಆದರೆ ದೇವರ ರಕ್ಷಣಾ ವ್ಯವಸ್ಥೆ ಬೇರೆ ಇತ್ತು. ಮರಕ್ಕೆ ಕೆಲವು ಅಡಿ ದೂರದಲ್ಲಿ ನೆಲದಿಂದ ಮೇಲೆದ್ದುಕೊಂಡಿದ್ದ ಕಲ್ಲನ್ನು ಎಡವಿ ಶಾನುಭೋಗರು ಬಿದ್ದರು. ಮೊದಲೇ ದಣಿವಾಗಿತ್ತು. ಬಿದ್ದ ಪೆಟ್ಟಿಗೆ ಪ್ರಜ್ಞೆ ತಪ್ಪಿತು.

ಕೆಲವು ನಿಮಿಷಗಳಾದ ಮೇಲೆ ಮೂರ್ಛೆ ತಿಳಿಯಿತು. ಆದರೂ ಆಗ ಅವರಲ್ಲಿ ಯಾವುದೊಂದು ಇಂದ್ರಿಯವೂ ಚುರುಕಾಗಿ ಕೆಲಸ ಮಾಡುತ್ತಿರಲಿಲ್ಲ. ಮನಸ್ಸು ಅಸ್ಪಷ್ಟ ಸ್ಥಿತಿಯಲ್ಲಿತ್ತು; ಕಣ್ಣೂ ಮಂಜುಮಂಜು, ಎಷ್ಟು ಹೊತ್ತು ಆ ಸ್ಥಿತಿಯಲ್ಲಿದ್ದರೋ ಅವರಿಗಂತೂ ತಿಳಿಯದು. ಎಚ್ಚೆತ್ತಾಗ ಅವರ ಬಳಿಯಲ್ಲಿ ನಾಲ್ಕೈದು ಜನ ನಿಂತಿದ್ದರು. ತಮ್ಮ ಮುಖವೆಲ್ಲಾ ಒದ್ದೆಯಾಗಿತ್ತು. ಇನ್ನೂ ಯಾರೋ ನೀರು ಚಿಮುಕಿಸುತ್ತಲೇ ಇದ್ದರು.

ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದದ್ದು ಇಷ್ಟು; ಚಿಕ್ಕನಾಯಕನ ಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳಬೆಳಕಿನಲ್ಲಿ ಗಾಡಿಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂತಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರದಾರಿಯಿದೆ ಎನ್ನುವಾಗ ಎತ್ತುಗಳು ಏನು ಮಾಡಿದರೂ ಮುಂದೆ ಹೋಗದೆ ಕಣಿ ಹಾಕಿಕೊಂಡವು. ಅದೇ ವೇಳೆಗೆ ಎದೆ ನಡುಗುವಂತೆ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು. ಆದರೆ ರೈತರ ಮಾತು ಕೇಳಿಬಂದ ಮೇಲೆ ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು. ಗಾಡಿಯವರು ಐದು ಜನವಿದ್ದರೂ ಎಷ್ಟೇ ಆಗಲಿ ಹುಲಿಯೆಂದರೆ ಭಯವಲ್ಲವೇ! ಸ್ವಲ್ಪ ಹೊತ್ತು ಗಾಡಿಯ ಬಳಿಯಲ್ಲೇ ನಿಂತು ನೋಡಿದರು. ಮತ್ತೆ ಗರ್ಜನೆ ಕೇಳಲಿಲ್ಲ. ಅನಂತರ ಅವರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದುವರಿದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

ಮೊದಲೇ ಹೇಳಿದಂತೆ ಶಾನುಭೋಗರು ಗಟ್ಟಿಮನಸ್ಸಿನವರು. ಬೇಗ ಚೇತರಿಸಿಕೊಂಡೆದ್ದು ನಡೆದ ಸಂಗತಿಯನ್ನೆಲ್ಲಾ ನೆನಪಿಗೆ ತಂದುಕೊಂಡರು. ಮೈಕೈ ಸ್ವಲ್ಪ ನಡುಗುತ್ತಿತ್ತೇ ಹೊರತು ಅವರಿಗೆ ಮೈಯಲ್ಲಿ ಗಾಯವೇನೂ ಆಗಿರಲಿಲ್ಲ. ಹುಲಿಯ ಭಯವೇನೊ ಕಳೆದಿತ್ತು. ಖಿರ್ದಿ ಪುಸ್ತಕವನ್ನೂ ಮತ್ತೆ ಪಡೆದು ಭದ್ರಮಾಡಿಕೊಂಡದ್ದಾಯಿತು. ಆದರೆ ಅವರ ಮನಸ್ಸನ್ನೆಲ್ಲಾ

ವಿಸ್ಮಯ ಆವರಿಸಿತ್ತು. ತಾವು ಉಳಿದದ್ದು ಹೇಗೆ? ನಿಸ್ಸಹಾಯರಾಗಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾಗ ಹುಲಿ ತಮ್ಮನ್ನು ಎಳೆದುಕೊಂಡು ಹೋಗಲಿಲ್ಲವೇಕೆ? ಸ್ವಲ್ಪ ಹೊತ್ತು ಯೋಚಿಸಿ ಗಾಡಿಯವರನ್ನು ಕೇಳಿದರು. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?" ಎಂದು. ಇಲ್ಲ, ಅವರು ಬಿದ್ದಿದ್ದದ್ದು ಬೆನ್ನು ಮೇಲಾಗಿ. ಶಾನುಭೋಗರ ಸಮಸ್ಯೆಗೆ ಉತ್ತರ ದೊರೆತಂತಾಯಿತು. ಕೊನೆಯವರೆಗೂ ಆ ಪ್ರಾಣಿ ತನ್ನ ಕುಲಧರ್ಮವನ್ನು ಪಾಲಿಸಿಕೊಂಡೇ ಬಂದಿತ್ತು! ಉದಾರ ಹೃದಯರಾದ ಶಾನುಭೋಗರ ಬಾಯಿಯಿಂದ "ಭಲೇ" ಎಂಬ ಮೆಚ್ಚಿಕೆಯ ಮಾತು ಹೊರಟಿತು. ಸಂದರ್ಭವನ್ನರಿಯದೆ, "ಈ ಶಾನುಭೋಗರಿಗೆ ಹುಚ್ಚು ಹಿಡಿಯಿತೋ" ಎನ್ನುವಂತೆ ನೋಡುತ್ತಿದ್ದ ಗಾಡಿಯವರಿಗೆ ಅಂದಿನ ಕಥೆಯನ್ನೆಲ್ಲಾ ಹೇಳಿದರು.

ಶಾನುಭೋಗರು "ಕುಡಿದ ನೀರು ಅಲುಗದ ಹಾಗೆ" ಎನ್ನಲಾಗದಿದ್ದರೂ ಜೀವ ಸಹಿತ ಮನೆ ಸೇರಿಕೊಂಡರು. ರಸದೂಟವನ್ನು ಮಾಡಿದರು. "ಹುಲಿ ಈಗ ಎಷ್ಟು ಹಸಿದಿರಬೇಕು" ಎಂಬ ಯೋಚನೆ ಬಂದಾಗ ಅವರ ವದನಾರವಿಂದದಲ್ಲಿ ಮುಗುಳ್ನಗೆ ಮೂಡಿತು; ಊಟದ ರುಚಿ ಇಮ್ಮಡಿಯಾಯಿತು. ಅವರಿಗೆ ಅರೆ ನಿಮಿಷದ ಅವಕಾಶವನ್ನು ಒದಗಿಸಿಕೊಟ್ಟು ಪ್ರಾಣವನ್ನು ಕಾಪಾಡಿದ ಆ ಖಿರ್ದಿ ಪುಸ್ತಕ ಎಂದಿನಂತೆ ತನ್ನ ಜೀರ್ಣವಸ್ತ್ರದ ಹೊದಿಕೆಯಲ್ಲಿ ತೊಲೆಯಲ್ಲಿ ವಿಶ್ರಾಂತಿ ಪಡೆಯುತ್ತಿತ್ತು. ಶಾನುಭೋಗರ ದೃಷ್ಟಿಯು ಅನಂತವಾತ್ಸಲ್ಯದಿಂದ, ಕೃತಜ್ಞತೆಯಿಂದ ಆ ಕಡೆಗೆ ಹೊರಳಿತು.

ಆ ಶಾನುಭೋಗರಂತೂ ಈಗ ಇಲ್ಲ. ಆದರೆ ಖಿರ್ದಿ ಪುಸ್ತಕ ಇಂದಿಗೂ ಭದ್ರವಾಗಿದೆ. ದೇವರ ಮಂದಾಸನದ ಮೇಲೆ ಮಂಡಿಸಿ ಶಾನುಭೋಗರ ಸಂತತಿಯವರಿಂದ ಈಗಲೂ ಪೂಜೆಯನ್ನು ಕೈಗೊಳ್ಳುತ್ತಿದೆ. ಅವರೆಲ್ಲರ ಕೃತಜ್ಞತೆಯೂ ಅದಕ್ಕೆ ಸಂದಿದೆ. ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ, ಹುಲಿಯ ಧರ್ಮಶ್ರದ್ಧೆಯಿಂದ. ಆ ಗುಣವನ್ನು ಹಾಡಿ ಹೊಗಳುವ ಭಾಗ್ಯ ನನ್ನ ಪಾಲಿಗೆ ಬಂದಿದೆ.



## ಲೇಖಕರ ಪರಿಚಯ

ಬಯಲು ಸೀಮೆ ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳಿನಲ್ಲಿ ಕ್ರಿ.ಶ. ೧೯೦೦ನೇ ಇಸವಿ ಜೂನ್ ೧೬ರಂದು ಎ. ಸುಬ್ಬರಾವ್ ಮತ್ತು ಪುಟ್ಟಮ್ಮ ದಂಪತಿಯ ಮಗನಾಗಿ **ಎ.ಎನ್. ಮೂರ್ತಿರಾವ್** ಜನಿಸಿದರು. ಅಕ್ಕಿಹೆಬ್ಬಾಳು ನರಸಿಂಹಮೂರ್ತಿ ರಾವ್ ಎಂಬುದು ಇವರ ಹೆಸರಿನ ಪೂರ್ಣರೂಪ.

ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಪಡೆದ ಎ.ಎನ್. ಮೂರ್ತಿರಾಯರು ಉನ್ನತಶಿಕ್ಷಣವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಡೆಸಿ ಬಂಗಾರದ ಪದಕದೊಂದಿಗೆ ವಿಜೇತರಾದರು. ಮುಂದೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ದುಡಿದರು. ಮೈಸೂರು ಆಕಾಶವಾಣಿ ನಿಲಯನಿರ್ದೇಶಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಕಾರ್ಯವೆಸಗಿದ ಇವರು

೧೦೩ ವರ್ಷಗಳ ಕಾಲ ಬದುಕಿದ ಶತಾಯುಷಿ ಸಾಹಿತಿ. ೨೦೦೩ನೇ ಇಸವಿ ಆಗಸ್ಟ್ ೨೩ರಂದು ಇವರು ನಿಧನರಾದರು.

ಹಗಲುಗನಸುಗಳು, ಅಲೆಯುವ ಮನ, ಮಿನುಗು – ಮಿಂಚು (ಪ್ರಬಂಧ ಸಂಕಲನ), ಆಷಾಢಭೂತಿ, ಚಂಡಮಾರುತ (ಅನುವಾದಿತ ನಾಟಕಗಳು), ಸಂಜೆಗಣ್ಣಿನ ಹಿನ್ನೋಟ (ಆತ್ಮಕಥನ), ಅಪರವಯಸ್ಕನ ಅಮೇರಿಕಾ ಯಾತ್ರೆ (ಪ್ರವಾಸ ಸಾಹಿತ್ಯ), ದೇವರು (ವೈಚಾರಿಕ ಕೃತಿ) ಮುಂತಾದವು ಇವರ ಪ್ರಧಾನ ಕೃತಿಗಳು. 'ಶತಾಯುಷಿ' ಎಂಬ ಅಭಿನಂದನ ಗ್ರಂಥವನ್ನು ಇವರಿಗೆ ಸಲ್ಲಿಸಲಾಗಿದೆ.

ಕೈವಾರದಲ್ಲಿ ನಡೆದ ೫೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್. ಪುರಸ್ಕಾರ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಶಂಬಾ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ ಮುಂತಾದವು ಅವರಿಗೆ ಸಂದ ಗೌರವ, ಪ್ರಶಸ್ತಿಗಳು.

'ವ್ಯಾಘ್ರಗೀತೆ' ಲಲಿತ ಪ್ರಬಂಧವನ್ನು 'ಅಲೆಯುವ ಮನ' ಪುಸ್ತಕದಿಂದ ಆರಿಸಲಾಗಿದೆ.

**ವಿಶದೀಕರಣ**

- ಇರಸಾಲು – ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಖಜಾನೆಗೆ ಸಲ್ಲಿಸುವುದು.
- ಕುಲಾಲ ಚಕ್ರ – ಮಡಕೆ ಮಾಡಲು ಕುಂಬಾರನು ಬಳಸುವ ಚಕ್ರ.
- ಮಸಿಕಾಣಿಕೆ – ಕಂದಾಯ ವಸೂಲಿ ಸಂದರ್ಭದಲ್ಲಿ ಶ್ಯಾನುಭೋಗರು ರೈತರಿಂದ ಪಡೆಯುತ್ತಿದ್ದ ಕಿರುಕಾಣಿಕೆ.



**ಉತ್ತರಿಸಿರಿ**

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಶಾನುಭೋಗರು ಮನೆಗೆ ಮರಳಲು ತಡವಾದುದಕ್ಕೆ ಕಾರಣವೇನು?

2 ಹುಲಿಗೆ ಪರಮಾನಂದವಾದುದು ಯಾವಾಗ?

3 ಹುಲಿಯು ಶಾನುಭೋಗರನ್ನು ಹಿಂದಿನಿಂದ ಯಾಕೆ ಆಕ್ರಮಿಸಲಿಲ್ಲ?

4 ಗಾಡಿಯಲ್ಲಿ ಬಂದವರು ಹುಲಿಯನ್ನು ಹೇಗೆ ಓಡಿಸಿದರು?

### ಅನುಕ್ರಮವಾಗಿ ಬರೆಯಿರಿ

- ವ್ಯಾಘ್ರಗೀತೆ ಪಾಠದ ಪ್ರಧಾನ ಘಟನೆಗಳನ್ನು ಆಯ್ದು ಅನುಕ್ರಮವಾಗಿ ಬರೆಯಿರಿ.

### ವಿಮರ್ಶಾ ಲೇಖನ ಬರೆಯಿರಿ

- 'ಹುಲಿಯೆಂದರೆ ಕ್ರೂರ ಪ್ರಾಣಿ. ಕೊಂದು ತಿನ್ನುವುದೊಂದೇ ಅದರ ಸ್ವಭಾವ' – ಈ ಸಾಮಾನ್ಯ ಅಭಿಪ್ರಾಯಕ್ಕಿಂತ ಭಿನ್ನವಾಗಿ ವ್ಯಾಘ್ರಗೀತೆ ಪಾಠದಲ್ಲಿ ಹುಲಿಯ ಪಾತ್ರ ಹೇಗೆ ನಿರೂಪಿತವಾಗಿದೆ? ಈ ಕುರಿತು ವಿಮರ್ಶಾಲೇಖನ ಬರೆಯಿರಿ.

### ಟಿಪ್ಪಣಿ ಬರೆಯಿರಿ

- ಕಾಡು ಪ್ರಾಣಿಗಳು ನಾಡಿಗಿಳಿಯುವುದರ ಪರಿಣಾಮವನ್ನು ಟಿಪ್ಪಣಿಯಾಗಿ ಬರೆಯಿರಿ.

### ಕರಪತ್ರ ರಚಿಸಿರಿ.

- ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್‌ಲಕೋಟೆ, ಬಾಟಲಿ ಮತ್ತಿತರ ತ್ಯಾಜ್ಯವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡುತ್ತಿರುವುದರಿಂದ ಪ್ರಕೃತಿ ಮಲಿನಗೊಳ್ಳುತ್ತಿದೆ. ಈ ಕುರಿತು ಜನಜಾಗೃತಿ ಮೂಡಿಸಲು ಅಗತ್ಯವಾದ ಕರಪತ್ರ ರಚಿಸಿರಿ.

### ಗದ್ಯಭಾಗ ರಚಿಸಿರಿ

ಕೆಳಗೆ ನೀಡಲಾದ ಗದ್ಯಭಾಗದಲ್ಲಿ ಅಡಿಗೆರೆಯೆಳೆದ ದ್ವಿರುಕ್ತಿ ಪದಗಳನ್ನು ಗಮನಿಸಿರಿ. ಅವುಗಳನ್ನು ಉಪಯೋಗಿಸಿ ಬೇರೊಂದು ಗದ್ಯಭಾಗವನ್ನು ರಚಿಸಿರಿ.

ಶಾಲೆಯಿಂದ ಹೊರಟಾಗ ತಡವಾದುದರಿಂದ ಜಮೀಲ ಮತ್ತು ರೇಷ್ಮ ಮನೆಯ ಕಡೆಗೆ ಬೇಗಬೇಗ ನಡೆದರು. ಥಕ್ಕನೆ ದುಂಡುದುಂಡಾಗಿ ಮೈಕೈತುಂಬಿಕೊಂಡಿದ್ದ ಮಗುವೊಂದು ರಸ್ತೆಯಲ್ಲಿ ಆಟವಾಡುವುದು ಕಾಣಿಸಿತು. ಎದುರುಗಡೆಯಿಂದ ವಾಹನ ಬರುವುದರ ಗೊಡವೆಯಿಲ್ಲದ ಮಗುವನ್ನು ಕಂಡು ಓಡೋಡಿ ಹೋಗಿ ಎತ್ತಿಕೊಂಡರು. ಅಪರಿಚಿತರನ್ನು ಕಂಡ ಮಗು ಮೆಲ್ಲಮೆಲ್ಲನೆ ಅಳತೊಡಗಿತು, ಸ್ವಲ್ಪ ಕಳೆದಾಗ ಅಳು ಜೋರುಜೋರಾಯಿತು. ಅಮ್ಮ ಬರುವುದರೊಳಗೆ ಮಗುವನ್ನು ಸಮಾಧಾನಪಡಿಸಲು ಪ್ರಯತ್ನಿಸಿದ ಗೆಳತಿಯರಿಗೆ ಸಾಕುಸಾಕಾಯಿತು.

NT-151-3-KANNADA-10-AT-VOL.1



### ವಾಕ್ಯಗಳನ್ನು ರಚಿಸಿರಿ

ಕೆಳಗೆ ಕೊಡಲಾದ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ವಿಂಗಡಿಸಿ ಅವುಗಳನ್ನು ಉಪಯೋಗಿಸಿಕೊಂಡು ಬೇರೆ ವಾಕ್ಯಗಳನ್ನು ಬರೆಯಿರಿ.

ಉದಾ : ಪಂಚೇಂದ್ರಿಯಗಳ ಮೂಲಕ ಪ್ರಪಂಚದ ಜ್ಞಾನವು ನಮಗೆ ಲಭಿಸುತ್ತದೆ.

ಪಂಚ ಇಂದ್ರಿಯಗಳಲ್ಲಿ ಒಂದಾದ ಚರ್ಮವು ಸ್ಪರ್ಶಜ್ಞಾನವನ್ನು ನೀಡುತ್ತದೆ.

- ಶ್ರೀರಾಮನು ತಾಟಕಿಯನ್ನು ಕೊಲ್ಲಲು ಹಿಂಜರಿದಾಗ ಗುರುಗಳಾದ ವಿಶ್ವಾಮಿತ್ರರು ಧರ್ಮಾಧರ್ಮಗಳ ವಿವೇಚನೆ ಮಾಡುವ ಸಮಯ ಇದಲ್ಲ ಎಂದರು.
- ನಾಯಿಗಳ ಘ್ರಾಣೇಂದ್ರಿಯವು ತುಂಬಾ ಸೂಕ್ಷ್ಮವಾಗಿರುತ್ತದೆ.
- ಬ್ರಹ್ಮಾಸ್ತ್ರವನ್ನು ಸರಿಗಟ್ಟುವ ಅಸ್ತ್ರ ಯಾವುದೂ ಇಲ್ಲ ಎಂಬ ಮಾತು ಲೋಕಪ್ರಸಿದ್ಧವಾಗಿದೆ.
- ಶ್ರೀಕೃಷ್ಣದೇವರಾಯನ ಕಾಲದ ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲಾಗಿದೆ.

### ಸಂಧಿ ತಿಳಿಯಿರಿ

- ದಿಗಂತದಲ್ಲಿ ಸಾಲಾಗಿ ಹಾರುತ್ತಿರುವ ಹಕ್ಕಿಗಳನ್ನು ಕಂಡ ಮಗು ಕೇಕೆ ಹಾಕಿ ನಕ್ಕಿತು.

  ಮೇಲಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಪದವನ್ನು 'ದಿಕ್ + ಅಂತ' ಎಂದು ವಿಂಗಡಿಸಲಾಗುತ್ತದೆ. ಇಲ್ಲಿ ಸಂಧಿಯಾದಾಗ ಪೂರ್ವಪದದ ಕೊನೆಯ 'ಕ' ಎಂಬ ಅಕ್ಷರಕ್ಕೆ 'ಗ' ಅಕ್ಷರವು ಆದೇಶವಾಗಿ ಬರುತ್ತದೆ. ಈ ರೀತಿಯ ಸಂಧಿಕಾರ್ಯಕ್ಕೆ ಜಶ್ತ್ವಸಂಧಿ ಎಂದು ಹೆಸರು. ಜಶ್ತ್ವ ಸಂಧಿಯಲ್ಲಿ ಪೂರ್ವಪದದ ಕೊನೆಯಲ್ಲಿ ಬರುವ ಕ, ಚ, ಟ, ತ, ಪ-ಗಳಿಗೆ ಗ, ಜ, ಡ, ದ, ಬ-ಗಳು ಆದೇಶವಾಗಿ ಬರುತ್ತವೆ. ಅಜಂತ, ಷಡಾನನ, ಸದಾಚಾರ, ಅಬ್ಧಿ ಇತ್ಯಾದಿ ಪದಗಳು ಜಶ್ತ್ವಸಂಧಿಗೆ ಉದಾಹರಣೆಗಳಾಗಿವೆ. ಈ ಪದಗಳ ಸಂಧಿ ವಿಂಗಡಿಸಿ ಬರೆಯಿರಿ. ಜಶ್ತ್ವ ಸಂಧಿಯಾಗುವ ಇತರ ಪದಗಳನ್ನು ಪಾಠಭಾಗದಿಂದ ಸಂಗ್ರಹಿಸಿ ಬರೆಯಿರಿ.



# ಬೆಟ್ಟದ ತಲೆಮುಟ್ಟಿದಾಗ

– ಡಾ. ಉಪ್ಪಂಗಳ ರಾಮಭಟ್ಟ

**ಕೊ**ಡಗಿನ ಕೋಟೆಬೆಟ್ಟ ರಮಣೀಯ ಪ್ರದೇಶ. ಒಮ್ಮೆ ನೋಡಹೋದರೆ ಮತ್ತೆ ಹಿಂದಿರುಗಲು ಮನ ಒಲ್ಲದು. ನಡುಹಗಲಲ್ಲೂ ಬೆಳದಿಂಗಳ ಸೊಗವೀಯುವ ತಂಪಾದ ಹವೆಯನ್ನು ಅಲ್ಲಿಗೆ ಹೋಗಿಯೇ ನೋಡಬೇಕೆಂದು ಮಿತ್ರರೆಲ್ಲಾ ಪುಸಲಾಯಿಸಿದ್ದರು. ಇನ್ನೇನು, ಕೊಡಗಿಗೂ ಬಂದಾಗಿದೆ. ನನಗಲ್ಲಿನ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವ ಹಂಬಲ ಬೇರೆ. ಆ ಬೆಟ್ಟರಾಯನ ಕರೆ ದಿನದಿಂದ ದಿನಕ್ಕೆ ತೀವ್ರವಾಗತೊಡಗಿತು. ಕೂಗಿ ಕರೆದರೆ ಶಿವನೇ "ಓ" ಎಂಬನಂತೆ. ಮತ್ತೆ ನನಗೆ ಅನ್ನದಿರಲಾಗುತ್ತದೆಯೇ? ನನ್ನ ಸಹವಾಸಿ, ಅನುಭವಿ ಮಿತ್ರ (ವಿಷ್ಣುಭಟ್ಟ)ರನ್ನು ನನ್ನ ಸಹಾಯಮಾರ್ಗದರ್ಶನಗಳಿಗಾಗಿ ಕೇಳಿಕೊಂಡೆ. ನಾನು ಈ ಪ್ರದೇಶಕ್ಕೆ ಅಪರಿಚಿತನಾದ್ದರಿಂದ ಹಾಹೂ ಎನ್ನವಷ್ಟರಲ್ಲಿ ಹುತ್ತರಿಯ ಬಿಡುವೂ ಬಂತು. ಮತ್ತೆ ಅಂದೇ ನಾವು, ನನ್ನನ್ನು ಕೂಗಿ ಕರೆದ ಕೋಟೆಬೆಟ್ಟರಾಯನ ಭೇಟಿ ಮಾಡುವುದೆಂದು ತೀರ್ಮಾನಿಸಿದೆವು.

ಅದು ನಿರ್ಜನ ಪ್ರದೇಶ; ಸಮೀಪದಲ್ಲಿ ಮನೆಗಳು ದುರ್ಲಭ. ಮಧ್ಯಾಹ್ನದ ಊಟ, ಅದಕ್ಕೆ ಮೊದಲಿನ ಯಾ ನಂತರದ ಉಪಾಹಾರದ ವಸ್ತುಗಳನ್ನು ಒಟ್ಟಿಗೇ ಹಿಡಕೊಳ್ಳಬೇಕೆಂದು ಮಿತ್ರರು ಸೂಚಿಸಿದಂತೆ ಹಳೆಗಾಲದ ಪಯಣಿಗರನ್ನು ನೆನಪಿಸಿಕೊಂಡು ನಸುಕಿಗೇ ಎದ್ದು ಪಾದಯಾತ್ರೆಗೆ ಸಿದ್ಧರಾದೆವು. ಮಾದಾಪುರದಿಂದ ದಾರಿಯುದ್ದವನ್ನಳೆಯತೊಡಗಿದ ನಾವು ಅಲ್ಲಿಂದ ಉತ್ತರಕ್ಕೆ ಗರವಾಲೆಗೆ ಹೋಗುವ ರಾಜಮಾರ್ಗದಲ್ಲೇ ಸುಮಾರು ನಾಲ್ಕು ಮೈಲುಗಳಷ್ಟು

ಸಾಗಿದೆವು. ಮಾರ್ಗದ ಇಕ್ಕಡೆಗಳಲ್ಲೂ ನೀಳ್ದು ನಿಂತ ಮರಗಳ ಕಾಡು. ಕಾಡಿನೊಳಗೆ ಕಾಫಿ, ನಿಂಬೆ, ಕಿತ್ತಳೆಗಳ ತೋಟ, ಮರಗಳೋ ಒಂದರೊಡನೊಂದು ಎತ್ತರದಲ್ಲಿ ಮತ್ಸರಿಸುವಂತೆ ಮುಗಿಲೆತ್ತರಕ್ಕೇರಿವೆ. ಈ ತಂಪಿನ ದೃಶ್ಯ ಸೊಂಪಾದ ಗಾಳಿ ನಮ್ಮ ನಡೆಯ ಆಯಾಸವನ್ನು ತೋರಗೊಡುತ್ತಿರಲಿಲ್ಲ. ಮತ್ತೆ ರಾಜಮಾರ್ಗವನ್ನು ತೊರೆದು ಗುಡ್ಡವನ್ನೇರತೊಡಗಿದೆವು. ಏರಿಏರಿ ದಣಿದರೂ ಮುಗಿಯಲಿಲ್ಲ, ಏರುತ್ತಾ ಸಾಗಿದೆವು. ಅಲ್ಲಲ್ಲಿ ಗತಿಹೀನರಂತೆ ಅಡ್ಡ ಬಿದ್ದ ಮರದ ದಿಮ್ಮಿಗಳು, ಹಿಂದಿದ್ದ ದಟ್ಟ ಮರಗಳನ್ನು ಕಡಿದುಳಿದ ಕುತ್ತಿಗಳು ತಮ್ಮ ಚಿಂತಾಜನಕ ಪರಿಸ್ಥಿತಿಯನ್ನು ಸಾರುತ್ತಿದ್ದವು. ಸೌದೆಗಾಗತಕ್ಕ ಎಷ್ಟೋ ಮರಗಳು ಬಿದ್ದು ಕುಂಬಾಗುತ್ತವೆ ಅನ್ನಿಸಿತು ನನಗೆ. ಮತ್ತೆ ಮುಂದುವರಿದಾಗ ದಾರಿಯುದ್ದಕ್ಕೂ ಸೂಕ್ಷ್ಮ ನೂಲುಗಳಲ್ಲಿ ನೇಲುವ ಜಾಲರಿಗಳಂತೆ ಕಂಬಳಿ ಹುಳಗಳ ಜೋಲಾಟ ಎಲ್ಲೆಲ್ಲೂ ವ್ಯಾಪಿಸಿಗೊಂಡಿರುವ ದೃಶ್ಯ ಸರ್ಕಸ್ಸಿನಲ್ಲಿ ನೇತಾಡುವವರನ್ನು ನೆನಪಿಸುತ್ತಿತ್ತು. ಮುಟ್ಟಿದರೆ ಮೈತುರಿಸಿ ದಡಿಕೆಯೇಳುವುದು. ಇವನ್ನು ತಪ್ಪಿಸಿ ದಾರಿ ನಡೆಯುವುದೇ ಕಷ್ಟವಾಗತೊಡಗಿತು. ಆದರೂ ಪರಮಾನ್ನದೂಟದೆಡೆಯಲ್ಲಿ ಬಂದ ಕಲ್ಲುಗಳನ್ನು ನುಂಗಿಕೊಳ್ಳುವಂತೆ ಸಹಿಸಿಕೊಂಡು ಮುಂದುವರಿದೆವು.

ಅಷ್ಟರಲ್ಲಿ ನಮ್ಮ ಕಾಲ್ದಾರಿಗೆ ಅಡ್ಡಲಾಗಿ ಜುಳುಜುಳು ನಿನಾದದಿಂದ ಹರಿಯುವ ತೊರೆಯೊಂದು ಅಷ್ಟು ಎತ್ತರದ ಗುಡ್ಡದಲ್ಲಿ ನಮಗೆದುರಾಯಿತು. ಶಿಲಾತಲದಲ್ಲಿ ಕುಳಿತು ಚಿಕ್ಕ ಉಪಾಹಾರ ಮುಗಿಸಿದೆವು. ಆ ತಂಪು ನೀರು ಐಸ್ ವಾಟರನ್ನು ನೆನಪಿಸಿತು. ಅಲ್ಲೇ ಯಾರೋ ಬೆಂಕಿ ಉರಿಸಿ ಅಡಿಗೆ ಮಾಡಿದ ಕುರುಹುಗಳು, ಬುಟ್ಟಿ ಹೆಣೆದ ಅವಶೇಷಗಳು ಕಂಡವು. ಆದರೆ ನಾವು ನಮ್ಮ ಗುರಿ ತಲುಪಿ ಹಿಂದಿರುಗಿಯೂ ಒಂದೇ ನರಹುಳವನ್ನು ಆ ದಾರಿಯಲ್ಲಿ ಕಾಣಲಿಲ್ಲ. ಸುತ್ತೆಲ್ಲಾ ಈಚಲಿನ ಗಿಡದಂತಹ ಗಿಡಗಳು ದಟ್ಟವಾಗಿ ವ್ಯಾಪಿಸಿವೆ. ಇವನ್ನೇ ಇಲ್ಲಿ ಕಸಬರಿಕೆಯಾಗಿ ಉಪಯೋಗಿಸುತ್ತಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಾದರೆ ಅಡಿಕೆ ಮರದ ಸೋಗೆ ಅಥವಾ ತೆಂಗಿನ ಮಡಲಿನ ಕಡ್ಡಿಯಿಂದ ಅದನ್ನು ತಯಾರಿಸುವ ರೂಢಿ ಅಷ್ಟೆ. ಕಾಡಿಲ್ಲದಲ್ಲಿ ಗುಡ್ಡದ ಮೇಲೆಲ್ಲಾ ಈ ಸಸ್ಯ ಮತ್ತು ಸಾಂಬ್ರಾಣಿ ತರಹದ ಇನ್ನೊಂದು ಕಾಡು ಸಸಿ ದಟ್ಟವಾಗಿ ಬೆಳೆದುದೇ ಈ ಗುಡ್ಡವಿಡೀ ಹಚ್ಚಹಸುರಾಗಿ ಕಾಣಲು ಕಾರಣ; ಏನೆನ್ನಲಿ? ಇವು ದನಗಳ ಮೇವಿಗೂ ಆಗವು. ಇಂತಹ ನಿರುಪಯುಕ್ತ ಸಸ್ಯ ದೂರಕ್ಕೆ ಚಂದವಾಗಿ ಕಂಡರೇನು? ನಿಷ್ಪ್ರಯೋಜನವಲ್ಲವೇ? ಚಂದವಾಗಿ ಕಾಣುವ ಹೆಚ್ಚಿನ ವಸ್ತುಗಳು ಹೀಗೆಯೇ? ಎಂದು ಪ್ರಶ್ನಿಸಿತು ಮನಸ್ಸು. ಮತ್ತೆ ನಮ್ಮ ನಡೆ ಮುಂದುವರಿಯಿತು. ಅದೋ ಎಡಕ್ಕೆ ಎತ್ತರವಾದ ಬೆಟ್ಟ. ಅದೇ ಹಾರಂಗಲ್ಲು ಬೆಟ್ಟ. ಕೋಟೆಬೆಟ್ಟ ಅದಕ್ಕಿಂತ ಆಚೆ ಎಂದರು ಮಿತ್ರರು. ಮತ್ತೆ ಮುಂದುವರಿದಾಗ ಬೆಟ್ಟದ ತಗ್ಗು ಭಾಗಗಳಲ್ಲಿ ಅಲ್ಲಲ್ಲಿ ಕಾಡು ತೊರೆಗಳು ಎದುರಾದವು.

ಜೀರುಂಡೆಗಳ ದನಿ ಕಿವಿಗೆ ಗಡಚಿಕ್ಕುತ್ತಿತ್ತು. ಅದೋ ಮುಟ್ಟಿಯೇ ಮುಟ್ಟಿದೆವು. ಕೋಟೆಬೆಟ್ಟದ ಪಾದಮೂಲ! ಅದಕ್ಕೆ ಏರಲು ಒಂದೇ ದಾರಿ. ಬಾಕಿ ಸುತ್ತಲೂ ಕಡಿದಾದ ಕಗ್ಗಲ್ಲ ಗೋಡೆಯಂತಹ ರಚನೆಯಿರುವುದರಿಂದಲೇ ಕೋಟೆಯ ಬೆಟ್ಟವೆಂದು ಹೆಸರಾಗಿರಬೇಕೆಂದುಕೊಂಡೆ ಮನಸ್ಸಿನಲ್ಲಿ. ಮೇಲೇರಿದಂತೆ ಕೆಳನೋಡಿದರೆ ತಲೆತಿರುಗುವಷ್ಟು ಆಳ. ಏರುತ್ತಾ ಕಾಲು ಸೋತರೂ ತಲಪಲಿಲ್ಲ. ಮತ್ತೆ ಸಾಧಾರಣ ಮಧ್ಯದಷ್ಟೆತ್ತರಕ್ಕೆ ತಲಪಿದಾಗ

ಸ್ವಲ್ಪ ಸಮತಟ್ಟಾದ ಪ್ರದೇಶ. ಹಲವಾರು ದನಗಳು ತಂಬೆಳಕ ತಂಗಾಳಿಯ ತಣ್ಣೆಳಲಲ್ಲಿ ನಿಶ್ಚಿಂತೆಯಿಂದ ಆ ಬೆಟ್ಟದ ಹಸುಗೂಸುಗಳಂತೆ ಕಣ್ಮುಚ್ಚಿ ಮೆಲುಕಾಡುತ್ತಾ ನಿದ್ರಿಸುವ ಭಂಗಿಯನ್ನು ನೋಡಿದರೆ ಅಲ್ಲೇ ಇರುವ ಗುಡಿಯ ದೇವನನ್ನು ಧ್ಯಾನಿಸುತ್ತಿವೆಯೋ ಅನ್ನಿಸುತ್ತಿತ್ತು. ನಮಗೆ ಅದು ಅಪರೂಪವಾದ ವಿಹಾರವಾದರೆ ಅವಕ್ಕೆ ನಿತ್ಯ ಆಹಾರದ ವಿಹಾರವಾಗಿತ್ತು ಅದು. ಸುಯ್ಯನೇ ಬೀಸುವ ಎತ್ತರದ ಆ ಗಾಳಿ ಒಮ್ಮೊಮ್ಮೆ ನಮ್ಮನ್ನು ಮಾಲಿಸುತ್ತಿತ್ತು. ಗುಡಿಯನ್ನು ಕಂಡೊಡನೆ ಕೈಲಾಸದ ಶಿವನ ನೆಲೆಯನ್ನೇ ಅದು ಜ್ಞಾಪಿಸುತ್ತಿತ್ತು.


ತಲೆಯೆತ್ತಿ ನಿಂತಿರುವ ಆ ಗುಡಿ ಪೂರ್ಣ ಕಗ್ಗಲ್ಲಿನ ಚಪ್ಪಡಿಯದೇ. ನಾಜೂಕಿಲ್ಲದಿದ್ದರೂ ಆ ರಚನೆ ಗಾಳಿಮಳೆಗಳ ಹೊಡೆತಕ್ಕೆ ಆ ಜಾಗಕ್ಕೆ ಅವಶ್ಯವೆ. ಶಿಲ್ಪ ಸಂಸ್ಕಾರವಿಲ್ಲದ ರಚನೆ, ಶಿವಲಿಂಗವಿಲ್ಲದಿದ್ದರೂ ಹೋದ ಯಾತ್ರಿಕರಿಗೆ ಬೇಕಾದಂತೆ ಅಡಿಗೆ ಮಾಡಿ ಊಟ ಮಾಡಿಕೊಳ್ಳಲು ಕೊಪ್ಪರಿಗೆ, ಸಟ್ಟುಗ, ಚೆಂಬು, ಕೊಡಪಾನ ಎಲ್ಲಾ ಇದ್ದವು. ಬಾಗಿಲೇ ಇಲ್ಲದ ಆ ಗುಡಿಯಲ್ಲಿ ನಮ್ಮನ್ನು ನೋಡಲು ಯಾರೂ ಬಾರದೆ ಎಷ್ಟೋ ದಿನಗಳಾದುವೆಂದು ಬೇಸರದಿಂದ ತೂಕಡಿಸಿ ಕಲೆಗೊಂಡ ಅವು ಸಾರಿ ಹೇಳುತ್ತಿದ್ದುವು. ಗುಡಿಯಿಂದ ನಾಲ್ಕು ಮಾರು ದೂರದಲ್ಲೇ ಒಂದು ನೀರ ಚಿಲುಮೆ, ಮೇದ ದನಗಳಿಗೂ ಹೋದ ಯಾತ್ರಿಕರಿಗೂ ಹೊಟ್ಟೆಗೆ ತಂಪೀಯುವ ಆ ಗುಡಿಯ ದೇವನ ವರವದು. ಶಿವನಿಗೆರಗಿ ಅವನ ಪ್ರಸಾದವೆಂಬಂತೆ ನಮ್ಮ ಉಪಾಹಾರವನ್ನಲ್ಲಿ ಮುಗಿಸಿ ಕಲ್ಲು ಬಂಡೆಯ ಮೇಲೆ ವಿಶ್ರಮಿಸುತ್ತಾ ಪ್ರಕೃತಿಯ ರಮ್ಯ ದೃಶ್ಯಗಳಿಗೆ ಕಣ್ಣನ್ನು ಮಾರಿದೆವು.

ಎತ್ತೆತ್ತಲೂ ಗುಡ್ಡಗಳು. ಚಿಕ್ಕ ದೊಡ್ಡ ಹಲವಾರು ಬೆಟ್ಟಗುಡ್ಡಗಳು ಸಭೆಗೂಡಿದಂತಿತ್ತು ಆ ದೃಶ್ಯ. ಆದರ ಅಧ್ಯಕ್ಷ ಕೋಟೆಬೆಟ್ಟವಾದರೆ ಅದರ ಸಹಧರ್ಮಿಣಿ ಸಮೀಪದ ಹಾರಂಗಲ್ಲು ಬೆಟ್ಟ ಅನ್ನಿಸಿತು. ಎಲ್ಲೋ ಕಾಣುವ ಕೆಲವು ನುಣ್ಣನೆಯ ಬೆಟ್ಟಗಳು ಬತ್ತದ ರಾಶಿಗಳಂತೆ ಕಾಣಿಸುತ್ತಿದ್ದುವು. ಸಾಲಾಗಿ ಕುಳಿತ ಗುಡ್ಡಗಳಲ್ಲಿ ಅಲ್ಲಲ್ಲಿ ಚೌಕಳಿಯಂತಹ ತಗ್ಗುಗಳು, ಚೆನ್ನೆಮಣೆಯ ರಚನೆಗಳನ್ನು ನೆನಪಿಸುತ್ತಿದ್ದವು. ದೂರದ ಗುಡ್ಡದ ಏರುತಗ್ಗುಗಳಲ್ಲಿ ಕೊಂಚಕಾಡು, ಎಲ್ಲೋ ಒಂದೆರಡು ಕಡೆ ಮಾತ್ರ ಸಪೂರವಾದ ಬಯಲು ಅಲ್ಲಿನ ನಿರ್ಜನತೆಯನ್ನು ತೋರಿಸುತ್ತಿತ್ತು. ಎಲ್ಲಿ ನೋಡಿದರೂ ಹಸಿರು ದೃಶ್ಯ, ತಂಗಾಳಿ. ಆ ಅನುಭವ ಯಾವುದೋ ಅವ್ಯಕ್ತ ಲೋಕದ ಅನುಭವಗಳನ್ನು ನೀಡುತ್ತಿತ್ತು. ಒಮ್ಮೊಮ್ಮೆ ನಾನೆಷ್ಟು ಎತ್ತರಕ್ಕೇರಿದೆನೆಂದು ಹೆಮ್ಮೆಯಾದರೂ, ಆ ಬೆಟ್ಟದ ಎದುರು ನಾನೊಂದು ಹುಳವಲ್ಲವೇ ಎಂದು ಸಿಗ್ಗಾಯಿತು. ಇನ್ನೂ ಬೆಟ್ಟದ ತುದಿಯನ್ನು ನಾವು ಏರಿರಲಿಲ್ಲ. ಮತ್ತೆ ಮುಂದುವರಿದೆವು. ಆ ಹಸಿರು ಸಸಿಗಳೆಡೆಯಲ್ಲಿ ಎಡವುತ್ತಾ ಮೇಲಮೇಲಕ್ಕೇರಿ ತುದಿ ತಲಪಿದಾಗ ಸಮಾಧಾನದ ನಿಟ್ಟುಸಿರು ತಾನೇ ಹೊರಬಂತು. ಅದೋ ಅಲ್ಲೂ ಎಮ್ಮೆದನಗಳು. ೪೬೦೦ ಅಡಿಗಳಷ್ಟು ಎತ್ತರಕ್ಕೂ ವಿಹರಿಸುವ ಉತ್ಸಾಹ ಈ ಮೂಕ ಪ್ರಾಣಿಗಳಿಗೆ. ಅವುಗಳಿಗೂ ಅಲ್ಲಿ ವಿಹರಿಸುವುದೆಂದರೆ ಆನಂದವಿರಲೇಬೇಕು. ಇಲ್ಲವಾದರೆ ಬೆಟ್ಟಕ್ಕೇರದೇನೇ ಸಾಕಷ್ಟು ಮೇವಿರುವಾಗ ಅಲ್ಲಿಗೇಕೇರಬೇಕು? ಅಲ್ಲಿ ನಿಂತು ನೋಡುವುದೇ ಒಂದು ಹೊಟ್ಟೆ ತುಂಬುವ ಕೆಲಸ. ಮೇಯಬೇಕಾಗಿಲ್ಲ. ಬೆಟ್ಟರಾಯನ ತಲೆಚಿಪ್ಪಿನಂತಿರುವ ಹಾಸುಗಲ್ಲಿನ ಕೋಡನ್ನೇರಿ ಸಿಂಹಾವಲೋಕನ ಮಾಡಿದೆ. ಎಷ್ಟೋ ಮೈಲು ದೂರದ ಸೋಮವಾರಪೇಟೆ ಬೆಂಕಿಪೆಟ್ಟಿಗೆಗಳನ್ನು ಹರಗಿಟ್ಟಂತೆ ಬಹಳ ಚಿಕ್ಕದಾಗಿ

ಕಂಗೊಳಿಸಿತು. ಅತಿ ದೂರದಲ್ಲಿರುವ ಬಸವನ ಬೆನ್ನಿನಂತಹ ಗುಡ್ಡವೊಂದು ಇಲ್ಲಿರುವ ಶಿವನ ವಾಹನ ತಾನೆಂದು ತೋರಿಸುವಂತಿತ್ತು. ಕಣ್ಣು ತಲಪುವಷ್ಟೂ ದೂರಕ್ಕೆ ವೃತ್ತಾಕಾರವಾಗಿ ರಚಿತವಾದ ಗೋಡೆಯಂತೆ ಬೆಟ್ಟಗಳ ಸಾಲು ಮೆರೆದಿತ್ತು. ಆ ಉನ್ನತ ಶಿಖರದ ತಂಗಾಳಿಗೆ ಮೈಯೊಡ್ಡಿ ಆಕಾಶ ಹಿಡಿವೆನೆಂದು ಕೈಚಾಚಿದರೆ ಅದೆಲ್ಲಿ? ದೂರದಿಂದ ನೋಡುವಾಗ ಆಗಸವನ್ನು ಹೊತ್ತ ಬಲ್ಗಂಬದಂತಿದ್ದ, ಆದರೆ ಮೇಲೇರಿದಾಗ ಆಗಸ ಇನ್ನೂ ಎತ್ತರ ಏರಬೇಕೇ? ಬೆಟ್ಟವೇ ನಮ್ಮ ಕಣ್ಣನ್ನು ವಂಚಿಸುವಾಗ ಇತರರಿಂದ ನಾವು ವಂಚಿತರಾಗುವಲ್ಲಿ ವಿಶೇಷವೇನು?

ಮತ್ತೆ ಪ್ರದಕ್ಷಿಣವಾಗಿ ಆ ಕಡಿದು ಬೆಟ್ಟದ ಮೈಯಲ್ಲಿ ಇಳಿಯತೊಡಗಿದೆವು. ಗೋಡೆಯ ಮೈಯಂತೆ ನೇರಾದ ಆ ತಳದಲ್ಲಿ ಸ್ವಲ್ಪ ಕಾಲುಜಾರಿದರೂ ಪ್ರಪಾತಕ್ಕೆ ಬೀಳಬೇಕು. ಬದಿಗೆ ಸರಿದು ನೋಡಿದರೆ ಎಷ್ಟೋ ಸಾವಿರ ಅಡಿ ಕೆಳಗಿರುವ ದಟ್ಟಕಾಡಿನ ಎತ್ತರದ ಮರಗಳೂ ದೂರದಲ್ಲಿ ಮೇಯುತ್ತಿದ್ದ ದನಗಳೂ ಅತಿ ಚಿಕ್ಕವಾಗಿ ತೋರುತ್ತಿದ್ದುವು. ದನಗಳಂತೂ ಉಣ್ಣೆಗಳಂತೆ ಚುಕ್ಕಿಗಳಂತೆ ಕಾಣುತ್ತಿದ್ದುವು. ನಾನಂತೂ ಚಾಪಲ್ಯದಿಂದ ಬದಿಗೆ ಸರಿದು ನೋಡಿದರೆ ಮಿತ್ರರು ಹುಡುಗಾಟಿಕೆಯಿಂದ ಬೆಟ್ಟರಾಯನಿಗೆ ಬಲಿಯಾಗಬೇಡಿರೆಂದು ಎಚ್ಚರಿಸಿದಾಗ ನನ್ನ ಭಯ ಇಮ್ಮಡಿಸಿತ್ತು. ಅಲ್ಲಲ್ಲಿ ಬೆಟ್ಟದ ಮೈಯ್ಯ ತಗ್ಗುಗಳಲ್ಲಿ ಕಾಡು, ಅಲ್ಲಿ ಚಿಮ್ಮಿ ಜಿನುಗುವ ನೀರು ಹರಿಯುತ್ತಿತ್ತು. 'ಹಾ ಎಷ್ಟೊಂದು ನೀರು ವ್ಯರ್ಥವಾಗುತ್ತಿದೆ! ಇಷ್ಟು ಎತ್ತರದಲ್ಲಿ ಯಾರೂ ಕೃಷಿ ಮಾಡುವವರೇ ಇಲ್ಲವೇ' ಅನ್ನಿಸಿತು. ಹಾಸು ಕಗ್ಗಲ್ಲ ಮೇಲೆ ನೀರು ತೊಟ್ಟಿಕ್ಕುವ ದೃಶ್ಯ, ಈ ತಂಪಿನಲ್ಲೂ ಬೆಟ್ಟರಾಯನಿಗೆ ಸೆಕೆಯಾಗಿ ಬೆವರಿದೆಯೇ ಎಂದು ಭ್ರಮೆ ಹುಟ್ಟಿಸುತ್ತಿತ್ತು. ಎಷ್ಟು ಇಳಿದರೂ ಮುಗಿಯದು. ಇಳಿಯುತ್ತಾ ನಿಂತು ಮೇಲೆ ನೋಡಿದರೆ 'ಹೋ ಎಷ್ಟು ಎತ್ತರದಿಂದ ಕೆಳಗೆ ತಲುಪಿದೆವು' ಅನ್ನಿಸಿದರೂ ಕೆಳ ನೋಡಿದರೆ ಇನ್ನೂ ಪಾತಾಳದ ಆಳ ಬಾಕಿಯಿತ್ತು. ಒಂದು ಬದಿಯಲ್ಲಿ ಕೋಟೆಯ ಮೇಲೆ ಕೋಟೆ ಕಟ್ಟಿದಂತೆ ನೀಳ್ದ ಕಲ್ಲ ರಾಶಿ ಕಾಣುತ್ತಿತ್ತು. ಇಳಿಯುತ್ತಾ ಬಂದು ಏರಿದ ದಾರಿಯನ್ನೇ ಹಿಡಿದು ತಳಕ್ಕೆ ತಲುಪಿ ಆ ಬೆಟ್ಟರಾಯನ ಹಿರಿಮೆಗೆ ತಲೆಬಾಗಿ ಮುಂದುವರಿದೆವು.

ಹೋಗುವಾಗ ನಮಗಿದ್ದ ಹುರುಪು ಅರ್ಧಾಂಶಕ್ಕಿಳಿದಿತ್ತು. ಕಾಲ ಸ್ನಾಯುಗಳು ಮುಷ್ಕರದಿಂದ ಮುನ್ನಡೆಯುವುದೇ ಮುಗ್ಗಟ್ಟಾದಾಗ ಉನ್ನತಿಗೇರಲಿರುವ ಕಷ್ಟದ ಮನವರಿಕೆಯಾಯಿತು. ಮತ್ತೆ ಮುಂದುವರಿದಾಗ ದಾರಿಯುದ್ದಕ್ಕೂ ನೆಲ್ಲಿಮರಗಳು. ದಂಡಾಪೂಪದಂತೆ ಒಂದರೊಡನೊಂದು ಪೋಣಿಸಿ ಗೊಂಚಲಾಗಿ ಗೆಲ್ಲಿನುದ್ದಕ್ಕೂ ಅಂಟಿನಿಂದ ನೆಲ್ಲಿಕಾಯಿಗಳನ್ನು ನೋಡಿ ಮನಸ್ಸು ಕೇಳದು. ಸವಿದು ನೀರ್ಗುಡಿದು ಅತ್ತಿತ್ತ ಸೇರಿ ಸಾಧಾರಣ ೧೬ ಮೈಲುಗಳಷ್ಟು ಪಾದಯಾತ್ರೆ ಮಾಡಿ ನಿವಾಸವನ್ನು ತಲುಪಿದಾಗ ಸುಸ್ತೋಸುಸ್ತು! ಕಷ್ಟಪಟ್ಟರೆ ಇಷ್ಟವಲ್ಲವೇ? ಪ್ರಕೃತಿಯ ಆ ಹಿರಿಯ ಕಾಣಿಕೆಯೆದುರು ನಮ್ಮ ಶ್ರಮ ತಿಲಮಾತ್ರವೂ ಅನ್ನಿಸಲಿಲ್ಲ. ಮತ್ತೆ ಕನಸಿನಲ್ಲೂ ಅದೇ ದೃಶ್ಯ, ಮರುಕಳಿಸಿದಾಗ ಆ ಪಿಕ್‌ನಿಕ್ ವಿಹಾರದ ಸಾರ್ಥಕತೆ ಮನವರಿಕೆಯಾಗದಿರಲಿಲ್ಲ.



## ಲೇಖಕರ ಪರಿಚಯ

ಡಾ। ಉಪ್ಪಂಗಳ ರಾಮಭಟ್ಟರು ಕಾಸರಗೋಡು ಜಿಲ್ಲೆಯ ಕುಂಬ್ಡಾಜೆ ಗ್ರಾಮದ ಉಪ್ಪಂಗಳ ಪರಮೇಶ್ವರ ಭಟ್ಟ ಮತ್ತು ಲಕ್ಷ್ಮಿ ದಂಪತಿಯ ಪುತ್ರನಾಗಿ ೧೯೪೦ ಫೆಬ್ರವರಿ ೬ರಂದು ಜನಿಸಿದರು. ಶಾಲಾ ಶಿಕ್ಷಣವನ್ನು ಹುಟ್ಟೂರಲ್ಲಿ ಪಡೆದ ಇವರು ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಕನ್ನಡ ವಿಭಾಗದಲ್ಲಿ ವ್ಯಾಸಂಗ ಮಾಡಿ ಕಲ್ಲಿಕೋಟೆ ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್‌ನೊಂದಿಗೆ ಉತ್ತೀರ್ಣರಾದರು. ಮೈಸೂರು ವಿಶ್ವವಿದ್ಯಾಲಯದಿಂದ ಪಿ.ಎಚ್‌ಡಿ. ಪದವಿ ಗಳಿಸಿದರು.

ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಉಪನ್ಯಾಸಕರಾಗಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿ ಸಂಶೋಧನ ಮಾರ್ಗದರ್ಶಕರಾಗಿ ಇವರು ಕಾರ್ಯನಿರ್ವಹಿಸಿದ್ದಾರೆ. ಅಕಲಂಕ ಎಂಬ ಹೆಸರಿನಲ್ಲಿ ಪ್ರಕಾಶನ ಸಂಸ್ಥೆಯನ್ನು ಹುಟ್ಟುಹಾಕಿ ಅನೇಕ ಕೃತಿಗಳನ್ನು ಪ್ರಕಟಿಸಿ ಆಮೂಲಕ ಕನ್ನಡ ಸಾಹಿತ್ಯ ಸೇವೆಯನ್ನು ಮಾಡುತ್ತಿದ್ದಾರೆ.

ಮಾನಸ, ಅಂತರಂಗ, ಪಂಚವಟಿ, ಗಡಿನಾಡು ಕಾಸರಗೋಡು, ಕರ್ನಾಟಕ ಶಬ್ದಾನುಶಾಸನ ವಿವೇಚನೆ, ಸಂಚಾರ ಸಂಪುಟ, ನೆಲಸಂಪಗೆ, ಪುಕ್ಕದೊಳಗಿನ ಹಕ್ಕಿ ಮುಂತಾದವು ಉಪ್ಪಂಗಳ ರಾಮಭಟ್ಟರ ಪ್ರಮುಖ ಕೃತಿಗಳು. ಇವರ ಸಾಹಿತ್ಯ ಸೇವೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಹಾ.ಮಾ.ನಾ. ದತ್ತಿ ಪ್ರಶಸ್ತಿ, ಅತ್ತಿಮಬ್ಬೆ ಪ್ರತಿಷ್ಠಾನ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಮಾಸ್ತಿ ಕಥಾಪ್ರಶಸ್ತಿ ಲಭಿಸಿವೆ.

'ಬೆಟ್ಟದ ತಲೆ ಮುಟ್ಟಿದಾಗ' ಪಾಠವನ್ನು 'ಸಂಚಾರ ಸಂಪುಟ' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಲೇಖಕರು ಮತ್ತು ಅವರ ಮಿತ್ರರು ಪಾದಯಾತ್ರೆಗೆ ಹೇಗೆ ಸಿದ್ಧರಾದರು?

2 ಕೋಟೆಬೆಟ್ಟವನ್ನೇರುವ ದಾರಿಯ ಪರಿಸರ ಹೇಗಿತ್ತು?

3 ಗುಡಿಯ ಸಮೀಪದ ಕಲ್ಲುಬಂಡೆಯಲ್ಲಿ ಕುಳಿತಾಗ ಕಂಡ ದೃಶ್ಯವನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ?

### ಸಮರ್ಥಿಸಿ ಬರೆಯಿರಿ.

- 'ಬೆಟ್ಟದ ತಲೆ ಮುಟ್ಟಿದಾಗ' - ಪಾಠದಲ್ಲಿ ನಿಮಗೆ ಇಷ್ಟವಾದ ಪ್ರಕೃತಿ ವರ್ಣನೆಯ ಭಾಗವನ್ನು ಗುರುತಿಸಿ ಏಕೆ ಇಷ್ಟವಾಯಿತೆಂದು ಸಮರ್ಥಿಸಿ ಬರೆಯಿರಿ.



## ಪತ್ರಬರೆಯಿರಿ

- ನೀವು ಕೈಗೊಂಡ ವಿಹಾರ ಯಾತ್ರೆಯ ಅನುಭವಗಳ ಕುರಿತು ಗೆಳೆಯ/ಗೆಳತಿಗೆ ಪತ್ರಬರೆಯಿರಿ.



## ವರ್ಣಿಸಿ ಬರೆಯಿರಿ

- ನೀವು ಕಂಡ ಸೂರ್ಯಾಸ್ತಮಾನದ ಸುಂದರ ದೃಶ್ಯಗಳನ್ನು ವರ್ಣಿಸಿ ಬರೆಯಿರಿ.



## ವಾಕ್ಯಗಳನ್ನು ರಚಿಸಿರಿ

ಕೆಳಗೆ ಕೊಡಲಾದ ವಾಕ್ಯಗಳಲ್ಲಿ ಅಡಿಗೆರೆ ಎಳೆದ ನುಡಿಗಟ್ಟುಗಳ ಅರ್ಥ ತಿಳಿದುಕೊಂಡು ಅವುಗಳನ್ನು ಬಳಸಿ ಸ್ವಂತವಾಕ್ಯಗಳನ್ನು ರಚಿಸಿರಿ.

- ಆಸಕ್ತಿದಾಯಕವಾದ ಟಿ.ವಿ. ಧಾರಾವಾಹಿ ನೋಡುತ್ತಿದ್ದಾಗ ಮಧ್ಯೆ ಮಧ್ಯೆ ಬಂದ ಜಾಹೀರಾತುಗಳು ಪರಮಾನ್ನದೂಟದೆಡೆಯಲ್ಲಿ ಬಂದ ಕಲ್ಲಾಯಿತು.
- ಅಮ್ಮನ ನಡಿಗೆಯ ವೇಗಕ್ಕೆ ನಡೆಯಲಾರದ ಹುಡುಗನಿಗೆ ಅಮ್ಮನ ಹಿಂದೆ ಓಡಿ ಓಡಿ ಕಾಲುಸೋತುಹೋಯಿತು.
- ಬಸ್ಸುನೌಕರರ ಮಿಂಚಿನ ಮುಷ್ಕರದಿಂದಾಗಿ ಮಕ್ಕಳು ಶಾಲೆಯಿಂದ ಮನೆಗೆ ದಾರಿಯುದ್ದವನ್ನಳೆಯುತ್ತಾ ಸಾಗಿದರು.
- ಬೇಕಲಕೋಟೆಯಲ್ಲಿ ನಿಂತು ಅಗಾಧ ಜಲರಾಶಿಯನ್ನು ನೋಡಿದಾಗ ಆ ಸೌಂದರ್ಯಕ್ಕೆ ನಮ್ಮ ಕಣ್ಣನ್ನು ಮಾರಿದೆವು.
- ಜಾದೂಗಾರರು ತಮ್ಮ ಕೈಚಳಕದಿಂದ ನೋಡುಗರ ಕಣ್ಣನ್ನು ವಂಚಿಸಿ ಮಾಯಾಲೋಕವನ್ನು ಸೃಷ್ಟಿಸಿ ಬಿಡುತ್ತಾರೆ.

## ಪ್ರಬಂಧ ಬರೆಯಿರಿ

- ಕೊಡಗಿನ ಕೋಟೆಬೆಟ್ಟ ರಮಣೀಯ ಪ್ರದೇಶ. ನಡುಹಗಲಲ್ಲೂ ಬೆಳದಿಂಗಳ ಸೊಗವೀಯುವ ತಂಪಾದ ಹವೆಯನ್ನು ಅಲ್ಲಿಗೆ ಹೋಗಿಯೇ ನೋಡಬೇಕು. ಕಾಫಿ,





ನಿಂಬೆ, ಕಿತ್ತಳೆಗಳ ತೋಟ; ಮರಗಳು ಒಂದರೊಡನೊಂದು ಎತ್ತರದಲ್ಲಿ ಸ್ಪರ್ಧಿಸುವಂತೆ ಮುಗಿಲೆತ್ತರಕ್ಕೇರಿವೆ......


ಇಂತಹ ಸುಂದರ ಭೂಪ್ರಕೃತಿಯು ಭೂಕುಸಿತದಂತಹ ಪ್ರಾಕೃತಿಕ ದುರಂತದಿಂದ






ಸ್ಮಶಾನ ಸದೃಶವಾಗುತ್ತದೆ. ಇದಕ್ಕೆ ಕಾರಣ ಮತ್ತು ಪರಿಹಾರಗಳ ಕುರಿತು ವಿಚಾರ ಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧವೊಂದನ್ನು ಬರೆಯಿರಿ.

NT-151-4-KANNADA-10-AT-VOL.1





## ಘಟಕ - 2



# ಬಾಳಬೆಳಕು

# ನಿತಿನ್‌ನ ನಿರ್ಧಾರ

ನಿತಿನ್ ಹೈಸ್ಕೂಲಿನಲ್ಲಿ ಓದುತ್ತಿದ್ದ. ಅಥ್ಲೆಟಿಕ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ. ಅವನಿಗೆ ಕಾತರವೋ ಕಾತರ. ಅವನ ತಂದೆ ತಾಯಿ ಸ್ಟ್ಯಾಂಡಿನಲ್ಲಿ ನಿಂತು ನೋಡುತ್ತಿದ್ದರು. ಅವನು ಓಡಿದ. ಮೊದಲ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದುಕೊಂಡ. ಜನರೆಲ್ಲ "ಹೋ ಹೋ" ಎಂದು ಪ್ರಶಂಸಿಸಿದರು. ತುಂಬ ಸಂತೋಷವಾಯಿತು ನಿತಿನ್‌ಗೆ. ಅನಂತರ ಎರಡನೇ ಸ್ಪರ್ಧೆ. ಅದರಲ್ಲೂ ಅವನೇ ಮೊದಲು. ಇನ್ನೇನು ಗುರಿ ಮುಟ್ಟಿಯೇಬಿಟ್ಟ..... ಥಕ್ಕನೆ ನಿಂತುಬಿಟ್ಟ. ಟ್ರ್ಯಾಕಿನಿಂದ ಸರಿದುಬಿಟ್ಟ. ಅಪ್ಪ ಅಮ್ಮ ಮೃದುವಾಗಿ ಕೇಳಿದರು "ಏಕಪ್ಪ ಹೀಗೆ ಮಾಡಿದೆ ನಿತಿನ್?" ನಿತಿನ್ ಹೇಳಿದ : "ಅಮ್ಮಾ, ಅಪ್ಪಾ, ನನಗಾಗಲೇ ಒಂದು ಮೆಡಲ್ ಬಂದಿದೆಯಲ್ಲ. ಆದರೆ ನನ್ನ ಸ್ನೇಹಿತ ಸಂತೋಷನಿಗೆ ಒಂದೂ ಮೆಡಲ್ ಬಂದಿಲ್ಲ. ಅದಕ್ಕೆ ಅವನಿಗೆ ಸಿಗಲಿ ಅಂತ" ನಿತಿನ್‌ನ ತಂದೆತಾಯಿಯರ ಕಣ್ಣುಗಳು ಹನಿಗೂಡಿದವು. ಅವನನ್ನು ಬಾಚಿ ತಬ್ಬಿಕೊಂಡರು.



ಮೇಲೆ ನೀಡಿದ ಘಟನೆಗೆ ಸಂಬಂಧಿಸಿ ನಿಮ್ಮ ಅನಿಸಿಕೆಯನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ವಚನಸಿರಿ

ಒರತೆಗಳ ಕಂಡಿಂತು ಕೆಲರೀ ಬಾವಿಯ ತೋಡೆಂಬರು
ಅರವಟಿಗೆ ಛತ್ರವು ತಮ್ಮದೆಂಬರು
ಎಲೆ ಪಯಿರ್ಬೆದದಿರೆ, ಸುರಿವ ಮಳೆ ಸುರಿಸದಿದ್ದಡೆ
ಅವರೇತರಲ್ಲಿ ನೀಡುವರಯ್ಯಾ । ರಾಮನಾಥ॥ ॥೧॥

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ! ರಾಮನಾಥ॥ ॥೨॥

– ***ಜೇಡರ ದಾಸಿಮಯ್ಯ***

ಸಾರಸಜ್ಜನರ ಸಂಗವ ಮಾಡುವುದು
ದೂರ ದುರ್ಜನರ ಸಂಗ ಬೇಡವಯ್ಯಾ
ಆವ ಹಾವಾದಡೇನು? ವಿಷವೊಂದೆ
ಅಂತವರ ಸಂಗ ಬೇಡವಯ್ಯಾ
ಅಂತರಂಗ ಶುದ್ಧವಿಲ್ಲದವರ ಸಂಗವು
ಸಿಂಗಿ, ಕಾಳಕೂಟ ವಿಷವೊ ಕೂಡಲಸಂಗಮದೇವಯ್ಯಾ ॥೩॥

ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ?
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿತನದ ಕೇಡು
ಮನದ ಕೋಪ ತನ್ನ ಅರಿವಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡುವುದೆ ಕೂಡಲಸಂಗಮದೇವಾ ॥೪॥

– **ಬಸವಣ್ಣ**



ಈಳೆ ನಿಂಬೆ ಮಾವು ಮಾದಲಕೆ
ಹುಳಿ ನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿ ನೀರನೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯಾನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ
ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವು ಒಂದೆ
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿ ಬೇರಾಗಿಹ ಹಾಗೆ,
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು?
ತನ್ನ ಪರಿ ಬೇರೆ ॥೫॥

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು ॥೬॥

**– ಅಕ್ಕಮಹಾದೇವಿ**

# ಕವಿಪರಿಚಯ

### ಜೇಡರ ದಾಸಿಮಯ್ಯ

ಜೇಡರ ದಾಸಿಮಯ್ಯ ೧೧ನೇ ಶತಮಾನದಲ್ಲಿ ಬದುಕಿದ್ದ ಪ್ರಸಿದ್ಧ ವಚನಕಾರರು. ಇವರ ಹುಟ್ಟೂರು ಗುಲ್ಬರ್ಗ ಜಿಲ್ಲೆಯ ಮುದನೂರು (ಮುದೇನೂರು). ತಂದೆ ರಾಮಯ್ಯ, ತಾಯಿ ಶಂಕರಮ್ಮ. 'ರಾಮನಾಥ' ಎಂಬ ಅಂಕಿತದೊಂದಿಗೆ ವಚನಗಳನ್ನು ರಚಿಸಿದ ಇವರು 'ಆದ್ಯ ವಚನಕಾರರು' ಎಂದು ಪ್ರಸಿದ್ಧರಾಗಿದ್ದಾರೆ.

### ಬಸವಣ್ಣ

ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿದ್ದ ವಚನಕಾರರು. ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದ ಇವರ ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಕಲಚುರಿ ರಾಜವಂಶದ ಬಿಜ್ಜಳನ ಆಸ್ಥಾನದಲ್ಲಿ ಆಶ್ರಯಪಡೆದಿದ್ದ ಇವರು ವಿವಿಧ ವಿಷಯಗಳ ಕುರಿತು ವಚನಗಳನ್ನು ರಚನೆ ಮಾಡಿ, ಕನ್ನಡ ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. 'ಕೂಡಲ ಸಂಗಮದೇವ' ಇವರ ವಚನಗಳ ಅಂಕಿತವಾಗಿದೆ.

### ಅಕ್ಕಮಹಾದೇವಿ

ಸುಮಾರು ಹನ್ನೆರಡನೇ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯ ಸಮೀಪದ ಉಡುತಡಿ ಗ್ರಾಮದ ನಿರ್ಮಲ ಮತ್ತು ಸುಮತಿ ದಂಪತಿಯರ ಪುತ್ರಿಯಾಗಿ ಅಕ್ಕಮಹಾದೇವಿ ಜನಿಸಿದರು. ಪರಮ ಶಿವಭಕ್ತೆಯಾಗಿದ್ದ ಇವರ ಆರಾಧ್ಯದೈವ ಚೆನ್ನಮಲ್ಲಿಕಾರ್ಜುನ. ಇದೇ ಅಂಕಿತವನ್ನಿಟ್ಟು ಇವರು ಹಲವಾರು ವಚನಗಳನ್ನು ರಚಿಸಿದ್ದಾರೆ.



### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. 'ತಾನು ನೀಡುವೆನೆಂಬ' ಮಾನವನ ಅಹಂಕಾರವನ್ನು ದಾಸಿಮಯ್ಯನು ಹೇಗೆ ಟೀಕಿಸಿದ್ದಾನೆ?
2. ದುರ್ಜನರ ಸಹವಾಸದಿಂದ ದೂರವಿರಬೇಕೆಂದು ಬಸವಣ್ಣ ಹೇಳಲು ಕಾರಣವೇನು ?
3. ಪರಮಾತ್ಮನು ಬೇರೆ ಬೇರೆ ವಸ್ತುಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಪ್ರಕಟಗೊಳ್ಳುತ್ತಾನೆ ಎಂಬುದನ್ನು ಅಕ್ಕಮಹಾದೇವಿಯು ಪ್ರಕೃತಿಯ ಯಾವೆಲ್ಲಾ ನಿದರ್ಶನಗಳ ಮೂಲಕ ನಿರೂಪಿಸಿದ್ದಾರೆ?
4. ಕೋಪವು ಮನುಷ್ಯನನ್ನು ಹೇಗೆ ಹಾಳು ಮಾಡುತ್ತದೆ?
5. ಲೋಕದೊಳಗೆ ಹುಟ್ಟಿ ಬಂದ ಬಳಿಕ ಸ್ತುತಿ ನಿಂದೆಗಳು ಸಹಜ ಎಂಬುದಕ್ಕೆ ಅಕ್ಕಮಹಾದೇವಿ ನೀಡಿರುವ ಸಮರ್ಥನೆಯೇನು?



### ಪದವಿಂಗಡಿಸಿರಿ

ಕೆಳಗೆ ನೀಡಲಾದ ವಚನದ ಸಾಲುಗಳನ್ನು ವಿಂಗಡಿಸಿ ಬರೆಯಿರಿ.

ಉದಾ : ಮೃಗಗಳಿಗಂಜಿದಡೆಂತಯ್ಯಾ?
ಮೃಗಗಳಿಗೆ + ಅಂಜಿದಡೆ + ಎಂತಯ್ಯಾ

1. ಪಯಿರೈದದಿರೆ
2. ನೀರನೆರೆದವರಾರಯ್ಯಾ
3. ಪರಿಮಳದುದಕವನೆರೆದವರಾರಯ್ಯಾ
4. ಕೂಡಿಕೊಂಡಿರ್ದಡೇನು



### ಆಶಯ ಬರೆಯಿರಿ

- ಜೇಡರ ದಾಸಿಮಯ್ಯನವರ ವಚನಗಳ ಆಶಯವನ್ನು ಬರೆಯಿರಿ.



### ಹೋಲಿಸಿ ಬರೆಯಿರಿ

- ಅಕ್ಕಮಹಾದೇವಿಯರ "ಬೆಟ್ಟದ ಮೇಲೊಂದು ಮನೆಯನು ಮಾಡಿ..." ವಚನವನ್ನು ಈ ಕೆಳಗಿನ ವಿಜಯದಾಸರ ಕೀರ್ತನೆಯೊಂದಿಗೆ ಹೋಲಿಸಿ ಬರೆಯಿರಿ.

ಇನಿತಾದರೂ ನಿನಗೆ ಮತಿಯಿಲ್ಲವೇ ಮನವೆ ।
ಹೀನಾಯ ಮಾಡದಿರು ಪರದೋಷಗಳನೆಣಿಸಿ ।
ಅವನ ಬಯ್ಯುವೆ ಯಾಕೆ ಅವನ್ಯಾರು ನೀನ್ಯಾರು ।
ಅವನ ಪಾಪಕೆ ನೀನು ಭಾಗಿಯಾದೆ ।
ಅವನು ಉತ್ತಮನಾದರವನು ಬದುಕಿದ ಕಾಣೊ
ಆವ ಪುಣ್ಯ ಮಾಡಿದರೆ ಅವನ ಕುಲ ಉದ್ಧಾರ ॥
ನಿನ್ನ ಗತಿ ಮಾರ್ಗಕ್ಕೆ ಅವ ನಡೆದು ಬರುವನೇ
ನಿನ್ನಿಂದ ಪರಲೋಕ ಅವನಿಗೆ ಉಂಟೆ ।
ನಿನ್ನೊಳಗೆ ನೀ ತಿಳಿದು ಶ್ರೀ ವಿಜಯವಿಟ್ಠಲನ
ಸನ್ನುತಿಸಿ ಭವರೋಗವನು ಕಳೆದುಕೊಳ್ಳಯ್ಯ ॥

# ಮನಃಪರಿವರ್ತನೆ



– ಪ್ರಭುಶಂಕರ

**(ಸಂಜೆ ನಿಧಾನವಾಗಿ ಇಳಿಯುತ್ತಿದೆ. ಗುಹೆ ಮುಂದೆ ಅಂಗುಲೀಮಾಲ ಇಬ್ಬರು ಅನುಚರರೊಡನೆ ಕುಳಿತಿದ್ದಾನೆ. ನರಕವೇ ಮೈದಳೆದಂತೆ ರೂಪ, ನರರೆಲುಬಿನಿಂದ ಮಾಡಿದ ಕಿರೀಟವಿದೆ. ಕೈಬೆರಳುಗಳ ಮಾಲೆ ಕತ್ತಿನಲ್ಲಿ ಜೋಲಾಡುತ್ತಿದೆ. ಹಿರಿಯ ಇಬ್ಬಾಯ ಕತ್ತಿಯನ್ನು ಒಮ್ಮೆ ಅತ್ತ, ಒಮ್ಮೆ ಇತ್ತ ಬೀಸುತ್ತಿದ್ದಾನೆ.)**

ಅಂಗುಲೀಮಾಲ : ಮಹಾನವಮಿ! ಗೆಲ್ಲುತಾಯಿಯೆ ಗೆಲ್ಲು!
ಪಸೇನದಿಯ ರಾಜಶಿರ ದಾಸವಾಳದಪೂಜೆ ಸಲ್ಲುವುದು
ನಿನ್ನ ಪಾದಕೆ ನಾಳೆ. ಇನ್ನೆನಿತೆನಿತೋ ರಾಜ ಮಕುಟಗಳ
ಮಣಿಕಾಂತಿ ನಿನ್ನಡಿಯ ಬಾನನ್ನು
ಇಂದ್ರಧನುವಿನೊಲು ಸಿಂಗರಿಸಲಿದೆ. ಇರು ತಾಯಿ
ಒಂದಿರುಳು. ಬಳಿಕ ಮಾರಣಹೋಮ. ಹಳೆಯ ಅಂ-
ಗುಲಿಮಾಲೆ ಬೇಸರವಾಯಿತು ನನಗೆ. ಹೊಚ್ಚಹೊಸ
ಅಂಗುಲೀಮಾಲನಾಗುವೆ ನಾಳೆ.

(ಇದ್ದಕ್ಕಿದ್ದಂತೆಯೇ ಎದ್ದುನಿಂತು ಬೆರಳು ತೋರಿಸಿ) ಏಕಾಕ್ಷ, ನೋಡದೋ, ಯಾವುದೋ ನರಪ್ರಾಣಿ ಇತ್ತಲೇ ಬರುತಲಿದೆ.

ಏಕಾಕ್ಷ : ಅಹುದೊಡೆಯ.

ಅಂಗುಲೀಮಾಲ : ನಿಲ್ ಅಲ್ಲೆ, ಓ ಮನುಜ, ಅಲ್ಲೆ ನಿಲ್.

ಬುದ್ಧ : ನಿಂತೆ ಇರುವೆನು ನಾನು. ನೀನಿನ್ನು ನಿಂತಿಲ್ಲ
(ಎಂದು ಹೇಳಿ ನಡೆಯುತ್ತಲೇ ಇರುವನು. ಅಂಗುಲೀಮಾಲ ಕೆರಳಿ ಬುದ್ಧನಮೇಲೆ ಏರಿ ಬರುತ್ತಾನೆ. ಅವನ ಅನುಚರರೂ ಅವನನ್ನು ಹಿಂಬಾಲಿಸುತ್ತಾರೆ)

NT-151-5-KANNADA-10-AT-VOL.1

ಅಂಗುಲೀಮಾಲ : ಅಂಗುಲೀಮಾಲನಿಗೆ ಪಡಿನುಡಿದು ಬದುಕಿರುವ
ಶೂರನೊಬ್ಬನು ಇಲ್ಲ ಎಂಬರಿವು ಇಲ್ಲದಿಹ
ಓ ಕುನ್ನಿ, ಸಾವೆ ಶಿಕ್ಷೆಯೊ ನಿನಗೆ!
(ಕತ್ತಿಯನ್ನೆತ್ತಿ ಬುದ್ಧನನ್ನು ತೀರ ಸಮೀಪಿಸಿದಾಗ ಬುದ್ಧ ತಲೆಯೆತ್ತಿ ನೋಡುತ್ತಾನೆ. ಅಂಗುಲೀಮಾಲನ ಕಣ್ಣು ಬುದ್ಧನ ಕಣ್ಣುಗಳನ್ನು ದಿಟ್ಟಿಸಿ ನೋಡುತ್ತದೆ. ಒಡನೆಯೇ ಕೈಯ ಕತ್ತಿ ಕೆಳಗೆ ಬೀಳುತ್ತದೆ. ಎರಡೂ ಕೈಗಳಿಂದ ಹಿಂಬಾಲಕರನ್ನು ತಡೆಯುತ್ತಾನೆ)

ಬುದ್ಧ : ಓ ನೀನೆ ಅಂಗುಲೀಮಾಲ? ನಿನ್ನನೇ
ಅರಸುತ್ತ ನಡೆದು ಬಂದುದು ನಾನು.

ಅಂಗುಲೀಮಾಲ : (ಕಕ್ಕಾಬಿಕ್ಕಿಯಾಗಿ)
ಯಾರು ನೀ ಸನ್ಯಾಸಿ?
ನಿನ್ನ ಕಣ್ಣುಗಳಲ್ಲಿ ಕಡಲುಗಳು ಉರುಳುತಿವೆ,
ಕಾಣದಿಹ ಯಾವುದೋ ಲೋಕಗಳು ಅರಳುತಿವೆ!

ಬುದ್ಧ : ಎಲ್ಲವೂ ಬಯಲ ಭ್ರಾಂತಿಯು ಕಂದ.

ಅಂಗುಲೀಮಾಲ : ಕಂದ - ಕಂದ! ಹೊಸತೆನಗೆ ಈ ಮಾತಿನಂದ!

ಬುದ್ಧ : ಹೊಸತು ಹಳತೆಲ್ಲವೂ ಮತ್ತೆ ಭ್ರಾಂತಿಯು ಕಂದ!

ಅಂಗುಲೀಮಾಲ : ಯಾರು ನೀ ಸನ್ಯಾಸಿ? ಹೊಚ್ಚಹೊಸ ಅನುಭವವ
ನೀಡುತಿಹೆ ನೀನಾರು? ನನ್ನ ಖಡ್ಗದ ಕಾಳಿ
ಕೊಲೆಗಳಿಗೆಯಲ್ಲೆಂದು ಮುಷ್ಟಿಪೀಠವನುಳಿದು
ಧರೆಗುರುಳಿ ಹೊರಳಿದುದ ಕಾಣೆ ನಾ! ಇದೆ ಮೊದಲ್
ಹೇಳು, ಓ ಸನ್ಯಾಸಿ, ಮಂತ್ರ ವಿದ್ಯೆಯನರಿತ
ಮಾಟಗಾರನೊ ನೀನು?...

ಬುದ್ಧ : ದಿಟ ಕಂದ, ಪ್ರೇಮ ಮಂತ್ರವ ಜಪಿಪ ಒಲುಮೆ ಸಾಧಕ ನಾನು!

ಅಂಗುಲೀಮಾಲ : ಕವಡು ನುಡಿಯ ನುಡಿಯದಿರು ಓ ಭಿಕ್ಷು,
ನಿನ್ನ ಬಯಕೆಯು ನನಗೆ! ನಿನ್ನ ಕೈ ಬೆರಳುಗಳ ಬಯಕೆಯ್ಯೆ!

ಬುದ್ಧ : (ಎರಡೂ ಕೈಗಳನ್ನು ಮುಂದೆ ಚಾಚಿ)
ಇದೊ ನನ್ನ ಕೈಬೆರಳ್, ಕೊಂಡು ನಲಿಯೈ ಕಂದ.
ಅದನು ನೀಡುವ ಬಯಕೆ ಇಂದೆನ್ನ ಬಗೆಯಂದ!
ಕೊಳ್ ಕಂದ. ಹಳೆಯ ಅಂಗುಲೀಮಾಲೆ ಬೇಸರಾ-
ಯಿತು ನಿನಗೆ. ಇದೊ ಹೊಸತು ಕೈಬೆರಳ್, ಕೊಳ್ ಇದನ್.

ಅಂಗುಲೀಮಾಲ : ಸಾಕು ಓ ಸಂನ್ಯಾಸಿ, ನುಡಿಯ ಮಂಜನು ಇನ್ನು
ನನ್ನ ಮೇಲೆಸೆಯದಿರು, ಎಸೆದು ಮೂದಲಿಸದಿರು.

ಬಂದ ಕಾರ್ಯವನುಸಿರು, ಉಸುರಿ ನಡೆ ಉಸಿರಿನೊಡನೆ

ಬುದ್ಧ : ಇದುವರೆಗೆ ಗೆದ್ದಿರುವ ರಾಜ್ಯವೆಲ್ಲವ ಮೀರಿ–
ದೊಂದು ರಾಜ್ಯವ ನೀನು ಗೆಲ್ಲಬೇಕಾಗಬಹುದು.
ಅದನು ತೋರಿಸಲೆಂದೆ ನಾ ಬಂದೆ.

ಅಂಗುಲೀಮಾಲ : ರಾಜ್ಯವೇ? ಎಲ್ಲವನು ಮೀರಿರುವ ರಾಜ್ಯವೇ?
ನಾ ಕಾಣದಿರುವೊಂದು ರಾಜ್ಯವೇ? ಉತ್ತರಕೆ
ದಕ್ಷಿಣಕೆ ಪೂರ್ವ ಪಶ್ಚಿಮಗಳಿಗೆ ದಿಗ್ವಿಜಯ
ಯಾತ್ರೆಯನು ಮುಗಿಸಿ ಬಂದಿಹೆ ನಾನು! ನನ್ನ ಭಯ–
ವಾಳದಿಹ ನೆಲವುಂಟೆ ಓ ಭಿಕ್ಷು?

ಬುದ್ಧ : ಇದೆ ಕಂದ.

ಅಂಗುಲೀಮಾಲ : ದಾರಿತೋರುವೆಯೇನು?

ಬುದ್ಧ : ಅದಕೆಂದೆ ನಾ ಬಂದೆ.

ಅಂಗುಲೀಮಾಲ : ನಾ ಬಲ್ಲೆ! ನಾ ಬಲ್ಲೆ! ಅದಕೆ ನಾ ಕೇಳ್ದೆನೈ
ಮಂತ್ರ ವಿದ್ಯೆಯನರಿತ ಮಾಟಗಾರನೊ ನೀನು!
ತ್ವರೆಮಾಡು, ಸನ್ಯಾಸಿ, ಎಲ್ಲಿಹುದು ಆ ರಾಜ್ಯ?

ಬುದ್ಧ : ತೋರಿಸುವೆನೈ ಗೆಳೆಯ, ಅಂಗುಲೀಮಾಲ,
ನಾ ಪೇಳ್ವ ಕಜ್ಜವದು ಸಾಧ್ಯವೇ ನಿನಗೆ?

ಅಂಗುಲೀಮಾಲ : ಸಾಧ್ಯವೆ! ನುಡಿವುದಾರೊಡನೆಂದು ಅರಿವಿರಲಿ ಸನ್ಯಾಸಿ.
ಅಂಗುಲೀಮಾಲನಲಿ ಕವಲು ನುಡಿಗೆಡೆಯಿಲ್ಲ.

ಬುದ್ಧ : ವೈಭವದ ರಾಜ್ಯವನು ಗೆಲ್ಲಹೋಗುವ ಮುನ್ನ
ಗೆಲ್ಲಬೇಕು ನೀನು ನಿನ್ನ!

ಅಂಗುಲೀಮಾಲ : ಗೆಲ್ಲಬೇಕು ನನ್ನ ನಾನು! ಅರ್ಥವಿಲ್ಲದ ಮಾತು!
ಅಂಗುಲೀಮಾಲನೀ ಸಮಯಕ್ಕೆ ಮೌಲ್ಯವಿದೆ.
ಈಗ ಪೇಳ್ ಸನ್ಯಾಸಿ, ರಾಜರಿಂ
ಸೇವೆಯನು ಕೈಕೊಳುವ ನಾನಾರಿಗಾಳ್?

ಬುದ್ಧ : ರಾಜಸೇವೆಯ ಕೊಂಡು ಹಿರಿಯನಾಗುವೆಯೆಂದು
ಚೋದಿಸುವ ಮನದಾಶಾಪಿಶಾಚಕ್ಕೆ,
ಅದು ಕುಣಿಸಿದೊಲು ಕುಣಿವ ಮರುಳೊ ನೀನ್!

ಏಕಾಕ್ಷ : (ಬುದ್ಧನನ್ನು ಹೊಡೆಯಹೋಗುತ್ತಾ)
ಏಯ್ ತಿರುಕ, ನಮ್ಮೊಡೆಯನನು ಮರುಳೆನುವ
ನಿನ್ನ ಬೆನ್ನೆಲುಬಿಗೇನೋ ಬಂದಿದೆ ಹೊತ್ತು!

ಅಂಗುಲೀಮಾಲ : (ಅವನನ್ನು ತಡೆದು)

ಏಕಾಕ್ಷ ನಿಲ್, ಬಲಿದಾಸ...
(ಕಣ್ಣಸನ್ನೆ ಮಾಡುತ್ತಾನೆ)
ನಾ ಕರೆವವರೆವಿಗೂ ಗುಹೆಯಲಿರಿ.
(ಇಬ್ಬರೂ ತಲೆತಗ್ಗಿಸಿ ನಡೆಯುತ್ತಾರೆ. ಅವರು
ಮರೆಯಾದನಂತರ ಬುದ್ಧನ ಕಡೆಗೆ ತಿರುಗಿ)
ನನ್ನೆದೆಯ ಕಲಕಿದೆಯೊ ಸನ್ಯಾಸಿ; ಕವಿಯುತಿದೆ
ಮಂಕೊಂದು ಮತಿಯನ್ನು ಹಿರಿರಾಜ್ಯವಿಹುದೆಂದೆ.
ದಾರಿತೋರುವೆನೆಂದೆ, ನನ್ನನಾ ಗೆಲ್ಲಲೇಬೇಕೆಂದೆ.
ಮನದಾಸೆಗಾಳೆಂದೆ. ಅದು ಕುಣಿಸಿದೊಲು ಕುಣಿವ
ಮರುಳು ನಾನೆನುತಿರುವೆ. ನನ್ನ ಧೈರ್ಯದ ಭೂಮಿ
ಕಾಲಡಿಯೆ ಕುಸಿಯುತಿದೆ. ನೀನೆನ್ನ ನೋಡದಿರು,
ಸನ್ಯಾಸಿ, ನೋಡಿ ಎದೆ ಕಲಕದಿರು.
ನನ್ನ ಕಂಡಂಜದವ ನೀನೊಬ್ಬನೇ ಭಿಕ್ಷು.
ಕೊಲ್ಲದುಳಿಸುವ ಬಗೆಯನಾಂತೆ ನಾ
ಕಂಡು ನಿನ್ನೊಬ್ಬನನೆ!
(ಹಾಗೆ ಹೇಳುತ್ತಾ ತಲೆ ತಗ್ಗಿಸುತ್ತಾನೆ. ಬುದ್ಧ ನಿಧಾನವಾಗಿ
ಮುಂದುವರಿದು ಆತನನ್ನು ಅಪ್ಪಿಕೊಳ್ಳುತ್ತಾನೆ)

ಅಂಗುಲೀಮಾಲ : ಆವುದೀ ಶೀತಲ ಸುಖಸ್ಪರ್ಶ!
ಉಕ್ಕುತಿದೆ ಎದೆಹರ್ಷ!
ನಾ ಬಳಲಿ ಬಂದುದು ಎದೆಗಪ್ಪಿ ನಲಿವಂದು
ನನ್ನ ತಾಯ್, ನನ್ನೆದೆಯು ಹೀರಿದಾ ಮುದವನ್ನು
ಮೀರಿದಾ ಈ ಸೊದೆಯ ಹರ್ಷವನು ಸೂಸುವೀ
ಮಾತೆ ಯಾರ್? ಒಲುಮೆ ಬತ್ತಿದ ಎದೆಯ ಮರಳಿನಲಿ
ಪ್ರೇಮವನು ಸಿಂಚಿಸುವ ಈ ಪುಣ್ಯತೀರ್ಥನಾರ್?

ಬುದ್ಧ : ತಲೆಯೆತ್ತು ಓ ಕಂದ

ಅಂಗುಲೀಮಾಲ : ತಲೆಯೆತ್ತಲಾರೆ ನಾ. ಎತ್ತಲಾರೆನು ತಲೆಯ.
ನಿನ್ನ ಕರುಣಾಗಂಗೆ ಕಣ್ಣಿನಿಂ ಧುಮುಕುತಿರೆ
ಮುಡಿಯೊಡ್ಡಿ ತಡೆವ ಬಲವಿನಿತಿಲ್ಲವೈ ತಂದೆ.
ಪುಡಿಗಯ್ಯದಿರು ಅಯ್ಯೊ ನನ್ನನಿತು ಶಕ್ತಿಯನು!
(ಬುದ್ಧನ ಕಾಲಬಳಿ ಕುಸಿಯುತ್ತಾನೆ. ಬುದ್ಧದೇವ
ಅಂಗುಲೀಮಾಲನನ್ನು ಬಿಟ್ಟು ಸ್ವಲ್ಪ ದೂರದಲ್ಲಿ ನಿಲ್ಲುತ್ತಾನೆ)

ಬುದ್ಧ : ಸಾಕು ಈ ದೌರ್ಬಲ್ಯ! ಏಳು ಅಂಗುಲೀಮಾಲ,

ನೀನೆಂದು ಕಾಣದಿಹ ರಾಜ್ಯವನು ಸಾಧಿಸಲು
ಎದ್ದೇಳು!

ಅಂಗುಲೀಮಾಲ : (ನಿಧಾನವಾಗಿ ಎದ್ದು ಬುದ್ಧನ ಮುಂದೆ ಕೈಜೋಡಿಸಿ)
ಮರೆಮಾಚದಿರು ಇನ್ನು, ನೀನಾರು ಪೇಳಯ್ಯ.
ನಾಡಾಡಿ ಸನ್ಯಾಸಿ ನೀನಲ್ತು. ಕ್ಷಣದಲ್ಲಿ ನನ್ನೆದೆಯ
ಒಳಪೊಕ್ಕು ಅರಸಾಗಿ ಆಳುತಿಹ ನೀನಾರು?

ಬುದ್ಧ : ದಿಟಕು ನಾಡಾಡಿ ನಾ! ಇಂದು ಈ ಊರಿನಲಿ
ನಾಳೆ ಬೇರೊಂದರಲಿ ಭಿಕ್ಷೆ ಬೇಡುತ ಅಲೆವ
ಬುದ್ಧನೆಂಬರು ನನ್ನ.

ಅಂಗುಲೀಮಾಲ : ಬುದ್ಧದೇವನೆ ನೀನು!
(ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡು)
ಕೊಂದೆಯೋ ನೀನೆನ್ನ ಶಾಕ್ಯಮುನಿ,
ನೀ ಕೊಂದೆ ರಾಜರಾಜರು ನನ್ನ ಕಾಣಲೆಂತಂಜಿದರೊ,
ಅಂತೆ ಅಂಜಿದೆ ನಾನು ನಿನ್ನ ನೋಟವನು.
ಏಕಿಲ್ಲಿಗೈತಂದೆ? ಓ ತಂದೆ, ಪೇಳೇಕೆನ್ನ ಕೊಂದೆ?
ಇದುವರೆಗು ನಿದ್ರಿಸಿದ ನನ್ನ ಹೃದಯಕೆ ನಿನ್ನ
ಕರುಣೆ ಕಡೆಗೋಲಿಟ್ಟು ಮಥಿಸುತಿಹೆ ಏಕೆ?
ನಡೆ ತಂದೆ, ಕೃಪೆಯಿಟ್ಟು ನಡೆ ಈಗ ಇಲ್ಲಿಂದೆ.

ಬುದ್ಧ : (ಅಂಗುಲೀಮಾಲನನ್ನು ಸಮೀಪಿಸಿ, ಅವನ ಎದೆಯನ್ನು
ಮೃದುವಾಗಿ ನೇವರಿಸುತ್ತಾ)
ಶಾಂತನಾಗೆಲೆ ಕಂದ,
ತುಸು ಮುಂಚೆ, ಸಂಜೆಗತ್ತಲೆ ಕವಿವ ಹೊತ್ತಿನಲಿ
ತಮವು ಜಗವೆಲ್ಲವನು ತುತ್ತುಗೊಂಡುದೊ ಎಂಬ
ಭ್ರಾಂತಿ ಮೂಡಿದುದಲ್ತೆ? ಇದೊ ಈಗ ಈ ಜಗದ
ನೀರವ ಧ್ಯಾನದಲಿ ವಿಶ್ವಮನದಂಚಲದಿ
ಉದಯಿಸುತ್ತಿದೆ ಕಂದ, ಘನವಿಪಿನ ನೈರಾಶ್ಯ-
ದಂಧತೆಯ ಸೀಳುತಲಿ ಶಾಂತಿ ಶಶಿ. ಅಂತೆಯೇ
ನಿರ್ವಾಣ ಶಾಂತಿ ಚಂದ್ರೋದಯವು. ಮೂಡಲದು
ಎದೆತುಂಬ ಬೆಳಕು; ಬೆಳಕೋ ಬೆಳಕು. ಮಿಂಚಿನುಳಿ
ಘಟ್ಟಿಸಲು ಹೃದಯ ಗ್ರಂಥಿಗಳೆಲ್ಲ ಗಳಿಗೆಯಲಿ
ಪುಡಿಯಾಗಿ ಸ್ವಚ್ಛಂದ ಛಂದದಲಿ ನರ್ತಿಪುದು
ನಿನ್ನಿರವು. ಸ್ವಾತಂತ್ರ್ಯವೇ ಅದರ ಬೆಳಕಿನೊಡಲು.
ಪಡೆ ಕಂದ; ಪಡೆದು ನಲಿ ಶಾಂತಿಯನು!

ಅಂಗುಲೀಮಾಲ : ಪಥವಾವುದೈ ತಂದೆ. ಎಂತು ಪಡೆಯುವೆನದನು?

ಬುದ್ಧ : ಏಳು ನಡೆ,
(ಅಂಗುಲೀಮಾಲನ ಕೈ ಹಿಡಿದು)
ಮುಂದೆ ನಡೆಯುವೆ ನಾನು. ಹಿಂದೆ ನೀನೈತರುವೆ;
ನಡೆ ಕಂದ, ದಾರಿ ಕಾಂಬುದು ನಿನಗೆ. ನಿನ್ನದೇ
ಮನೆಯಹುದು, ಆ ಶಾಂತಿಯರಮನೆಯು.
ಸಂತಸದಿ ಮನೆಯೊಡೆಯ ತನ್ನ ಮನೆಗೆ ಹೊಗುವಂತೆ
ನೀ ನಡೆವೆ ಎದೆಯ ಶಾಂತಿಯ ಗೃಹಕೆ.

ಅಂಗುಲೀಮಾಲ : ಈಗಲೇ....? ಇಂತೆಯೇ....?

ಬುದ್ಧ : ಈಗಲೇ, ಇಂತೆಯೇ. ಒಂದೆ ಪರಿವರ್ತನೆಯು.
ಕಿತ್ತೆಸೆಯೊ ಅಂಗುಲೀಮಾಲೆಯನು,
ಆ ಕರ್ಮಪಾಶವನು. ಮೇಣದಂತೆ ಮಕುಟವನು, ಮೃತ್ಯುವಿನ
ತೊತ್ತುತನದಪಮಾನ ಚಿಹ್ನೆಯನು!
(ಬುದ್ಧನ ಕಡೆಯೇ ದಿಟ್ಟಿಸುತ್ತಾ ಅಂಗುಲೀಮಾಲ ತನಗರಿವಿಲ್ಲದೆಯೇ ಮಾಲೆ ಮಕುಟಗಳನ್ನು ಕಳಚುತ್ತಾನೆ. ಹಾಗೆ ಮಾಡುವಾಗ ಅವನ ಮುಖ ಅತೀವವಾದ ಯಾತನೆಯನ್ನು ಆ ಬಳಿಕ ಸಮಾಧಾನದ ಭಾವವನ್ನು ತಳೆಯುತ್ತದೆ)

ಅಂಗುಲೀಮಾಲ : ಹಗುರಾಯಿತು ಎದೆ
ತುಂಬುತ್ತಿದೆ ಸೊದೆ
ನನ್ನೀ ಜೀವನ ಕಣ ಕಣವನ್ನು,
(ಬುದ್ಧ ಮುಂದೆ ಹೋಗುತ್ತಾನೆ. ಅಂಗುಲೀಮಾಲ
ಮಂತ್ರಮುಗ್ಧನಂತೆ ಹಿಂಬಾಲಿಸುವನು)



## ಲೇಖಕರ ಪರಿಚಯ

ಕನ್ನಡದ ಪ್ರಸಿದ್ಧ ಸಾಹಿತಿಗಳಲ್ಲಿ ಒಬ್ಬರಾದ **ಪ್ರಭುಶಂಕರ**ರು ತಾ ೧೫-೦೨-೧೯೨೯ರಂದು ಚಾಮರಾಜನಗರದಲ್ಲಿ ಜನಿಸಿದರು. ತಂದೆ ಕರಿಬಸಪ್ಪ, ತಾಯಿ ರುದ್ರಮ್ಮ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡದಲ್ಲಿ ಭಾವಗೀತೆ ಎಂಬ ಅವರ ಮಹಾಪ್ರಬಂಧಕ್ಕೆ ಗೌರವ ಡಾಕ್ಟರೇಟ್ ಲಭಿಸಿದೆ. ಆಮ್ರಪಾಲಿ, ಅಂಗುಲೀಮಾಲ, ಸುಜಾತ, ಗಾಳಿಯೆಂಬ ಕುದುರೆ ಏರಿ ಎಂಬ ನಾಟಕಗಳನ್ನು ರಚಿಸಿದ್ದಾರೆ. 'ಅಮೇರಿಕಾದಲ್ಲಿ ನಾನು ಮತ್ತು ಶಾಂತಿ' ಎಂಬ ಪ್ರವಾಸ ಕಥನಕ್ಕೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ಶ್ರೀಯುತರು ೦೯.೦೪.೨೦೧೮ ರಂದು ಮೈಸೂರಿನಲ್ಲಿ ವಿಧಿವಶರಾದರು.

ಪ್ರಕೃತ 'ಮನಃಪರಿವರ್ತನೆ' ಗೀತನಾಟಕ ಅವರ 'ಬುದ್ಧ ನಾಟಕ ಚಕ್ರ' ಕೃತಿಯ 'ಅಂಗುಲೀಮಾಲ' ನಾಟಕದಿಂದ ಸಂಗ್ರಹಿಸಿದ ಭಾಗವಾಗಿದೆ.

## ಉತ್ತರಿಸಿರಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಅಂಗುಲೀಮಾಲನ ದೃಷ್ಟಿಯಲ್ಲಿ ಬುದ್ಧನಿಗೆ ಯಾವುದರ ಅರಿವಿಲ್ಲ?
2. ಅಂಗುಲೀಮಾಲನಿಗೆ ಬುದ್ಧನ ಯಾವ ಮಾತು ಹೊಸತಾಗಿ ಕಂಡಿತು?
3. ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲೀಮಾಲನು ತನ್ನಲ್ಲೇ ಹೇಳಿಕೊಂಡ ಮಾತುಗಳೇನು?
4. ಅಂಗುಲೀಮಾಲನು ಬುದ್ಧನಲ್ಲಿ ಏನೆಂದು ಅರಿಕೆ ಮಾಡಿಕೊಂಡನು?

## ಪಾತ್ರಚಿತ್ರಣ ಮಾಡಿರಿ

- ಅಂಗುಲೀಮಾಲನ ಪಾತ್ರಚಿತ್ರಣ ಮಾಡಿರಿ.

## ರೂಪಾಂತರಿಸಿರಿ

- 'ಮನಃಪರಿವರ್ತನೆ' ಗೀತನಾಟಕವನ್ನು ಕಥೆಯಾಗಿ ರೂಪಾಂತರಿಸಿ, ಅದಕ್ಕೆ ಸೂಕ್ತವಾದ ಇನ್ನೊಂದು ಶೀರ್ಷಿಕೆ ನೀಡಿರಿ.

## ಟಿಪ್ಪಣಿ ಬರೆಯಿರಿ

- 'ಕತ್ತಿ ಹಿಡಿದು ಏರಿ ಬಂದ ಅಂಗುಲೀಮಾಲನನ್ನು ನಿರಾಯುಧನಾಗಿ ಎದುರಿಸಿ ನಿಂತ ಬುದ್ಧನು ಪ್ರೀತಿಯಿಂದ ಸೋಲಿಸುತ್ತಾನೆ' – ಈ ಹಿನ್ನೆಲೆಯಲ್ಲಿ 'ಹಿಂಸೆಯನ್ನು ಅಹಿಂಸೆಯಿಂದ ಮಣಿಸಬಹುದು' – ಎಂಬ ವಿಷಯದ ಕುರಿತು ಟಿಪ್ಪಣಿಯನ್ನು ಬರೆಯಿರಿ.

### ಅಲಂಕಾರ ಗುರುತಿಸಿರಿ.

- ಕರುಣೆಕಡೆಗೋಲು – ಕರುಣೆಯೆಂಬ ಕಡೆಗೋಲು
- ಶಾಂತಿಶಶಿ – ಶಾಂತಿಯೆಂಬ ಶಶಿ

ಕರುಣೆಕಡೆಗೋಲು ಎಂಬಲ್ಲಿ ಕರುಣೆಯನ್ನು ಕಡೆಗೋಲು ಎಂದೂ ಶಾಂತಿಶಶಿ ಎಂಬಲ್ಲಿ ಶಾಂತಿಯನ್ನು ಶಶಿ ಎಂದೂ ಹೇಳಲಾಗಿದೆ. ಕರುಣೆ ಮತ್ತು ಕಡೆಗೋಲು ಹಾಗೂ ಶಾಂತಿ ಮತ್ತು ಶಶಿಯನ್ನು ಅಭೇದವಾಗಿ ವರ್ಣಿಸಲಾಗಿದೆ. ಇಂತಹ ವರ್ಣನೆಯಿರುವ ಪ್ರಯೋಗಗಳನ್ನು ರೂಪಕ ಅಲಂಕಾರ ಎಂದು ನೀವು ತಿಳಿದಿರುವಿರಿ.

ಪಾಠದಲ್ಲಿ ಬಂದ ರೂಪಕ ಅಲಂಕಾರಕ್ಕೆ ಉದಾಹರಣೆಯಾಗಿರುವ ಪದಗಳನ್ನು ಗುರುತಿಸಿ ಬರೆಯಿರಿ.



# ಕೃಷಿ – ಒಂದು ಜೀವನಮಾರ್ಗ

– ಡಾ. ಎಸ್.ಜಿ. ಸಿದ್ಧರಾಮಯ್ಯ

**ಭಾ**ರತ ಕೃಷಿ ಪ್ರಧಾನವಾದ ದೇಶವೆಂಬುದು ಹಿಂದೆ ಇದ್ದ ಖ್ಯಾತಿ. ಈಗ ಈ ಖ್ಯಾತಿ ಬಹುತೇಕ ಕಳೆದುಹೋಗಿದೆ. ಅದರಲ್ಲೂ ಜಾಗತೀಕರಣದ ಮಾಯಾಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಗತಿಯಲ್ಲಿ ಕೃಷಿಯೆಂಬುದು ಕೈಸುಟ್ಟುಕೊಳ್ಳುವ ಕರ್ಮಕಾಂಡವಾಗಿದೆ. ಕೃಷಿ ಕಾಯಕವನ್ನು ಬಿಡಲೂ ಆಗದ, ಕಟ್ಟಿಕೊಳ್ಳಲೂ ಆಗದ ಸಂದಿಗ್ಧದಲ್ಲಿ ರೈತನ ಬದುಕು ಡೋಲಾಯಮಾನವಾಗಿದೆ. ಇದಕ್ಕೆ ಕೇವಲ ಜಾಗತೀಕರಣದ ವಿದ್ಯಮಾನಗಳು ಮಾತ್ರ ಕಾರಣವಲ್ಲ; ಇದಕ್ಕೂ ಮುನ್ನ ಹಸಿರು ಕ್ರಾಂತಿಯ ಯೋಜನೆ ಕೃಷಿ ನೆಲವನ್ನು ಬಂಜೆಯಾಗಿಸುವಲ್ಲಿ ಸಾಕಷ್ಟು ಪಾತ್ರ ವಹಿಸಿದೆ. ಅಧಿಕ ಇಳುವರಿಯ ಮೋಹಕ್ಕೆ ಬಿದ್ದು ಕೃಷಿಯನ್ನು ಕೈಗಾರಿಕೋದ್ಯಮಿಗಳ ಕೈಗೊಂಬೆಯಾಗಿಸುವಲ್ಲಿ ನಮ್ಮ ಆಧುನಿಕ ಕೃಷಿಪಂಡಿತರು ತುಂಬಾ ಯಶಸ್ವಿಯಾಗಿದ್ದಾರೆ. ಆಧುನಿಕ ಕೃಷಿಯ ಪರಿಣಾಮವಾಗಿ ಪಶುಪಾಲನೆ ನಾಶವಾಯಿತು. ಕೃಷಿಗೆ ಅಂಟಿಕೊಂಡಂತೆ ಗ್ರಾಮಸಂಸ್ಕೃತಿಯನ್ನು ಸಮೃದ್ಧಗೊಳಿಸುತ್ತಿದ್ದ ಗುಡಿಕೈಗಾರಿಕೆಗಳು ನಾಶವಾದವು. ನೆಲದ ಜೀವಸತ್ವ ಹಾಳಾಯಿತು. ನಿಸರ್ಗದ ಜೀವಸರಪಳಿ ಸಾಕಷ್ಟು ಹಾನಿಗೀಡಾಯಿತು. ಗುಂಡು ತೋಪುಗಳು ಇಲ್ಲವಾದವು. ಕೆರೆಕಟ್ಟೆ, ಕುಂಟೆ, ತಲಪರಿಗೆಗಳು ಕಣ್ಮರೆಯಾದವು. ಇವುಗಳು ಕೇವಲ ನೀರು ಸಂಗ್ರಹಣ ತಾಣಗಳಾಗಿ ಇರಲಿಲ್ಲ. ಜೀವ ಸಂಕುಲಗಳ ಬದುಕಿನ ಜೀವನಾಡಿಗಳಾಗಿದ್ದವು. ಇವೆಲ್ಲವನ್ನೂ ಪ್ರಗತಿಯೆನ್ನುವುದಾದರೆ ಇಂಥ ಪ್ರಗತಿಯನ್ನು ನಿಸರ್ಗ ವಿರೋಧಿಯೆನ್ನದೆ ವಿಧಿಯಿಲ್ಲ.

ನಮ್ಮ ಜನಪದರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿದ್ದ

ಕಸುಬಾಗಿರಲಿಲ್ಲ. ನಿಸರ್ಗಧರ್ಮವನ್ನು ಗೌರವಿಸಿದಂತೆ ಕಟ್ಟಿಕೊಂಡ ಕಾಯಕವಾಗಿತ್ತು. ಆದ್ದರಿಂದಲೇ ಸಾವಿರಾರು ವರ್ಷಗಳಿಂದ ಕೃಷಿಯನ್ನು ಜೀವನ ಧರ್ಮವಾಗಿಸಿಕೊಂಡು ಬಂದಿದ್ದ ನಮ್ಮ ಜನಪದಕ್ಕೆ ಕೃಷಿ ಒಂದು ನೆಲಮೂಲ ವಿಜ್ಞಾನವಾಗಿತ್ತು; ಭೂಮಿ, ಬಿಸಿಲು, ಮಳೆ ಹಾಗೂ ಋತುಗತಿಗಳಿಗೆ ಹೊಂದಿಕೊಂಡಂತೆ ಅರಳಿ ರೂಪುಗೊಂಡ ಅನುಭವದ ಅರಿವಾಗಿತ್ತು. ಇಂಥ ಅರಿವು ಅರ್ಥಾತ್ ನೆಲಮೂಲ ವಿಜ್ಞಾನ ಇಂದು ಕಳೆದುಹೋಗುತ್ತಿದೆ. ಆಧುನಿಕ ಕೃಷಿಪಂಡಿತರ ಹಾಗೂ ಕೃಷಿಯಾಧಾರಿತ ಕೈಗಾರಿಕೋದ್ಯಮಿಗಳ ಹುನ್ನಾರದಲ್ಲಿ ಅದು ಕಡೆಗಣನೆಗೆ ಒಳಗಾಯಿತು. ಬೃಹತ್ತಿನ ಭ್ರಮೆಯಲ್ಲಿ ಕನಸು ಕಂಡ ನಮ್ಮ ರಾಜಕೀಯ, ಆರ್ಥಿಕ ನೀತಿ ಈ ನೆಲಮೂಲ ಜ್ಞಾನವನ್ನು ಸಂಪೂರ್ಣವಾಗಿ ಉಪೇಕ್ಷಿಸಿತು. ಅಧಿಕ ಇಳುವರಿಗೆ ಮೋಹಿತನಾದ ರೈತ ಕೈಗಾರಿಕೋದ್ಯಮಿಗಳ ತಾಳಕ್ಕೆ ಹೆಜ್ಜೆಹಾಕಿದ. ಭೂ ಅಭಿವೃದ್ಧಿಯ ಹೆಸರಿನ ಬ್ಯಾಂಕುಗಳು ರೈತನ ಭೂಮಿಕಾಣಿಕೆಯನ್ನು ಅಡವಿಟ್ಟುಕೊಂಡು ಸಾಲಕೊಟ್ಟವು. ಸಾಲ ಪಡೆದ ರೈತ ಬೋರು ಕೊರೆಸಿದ, ತಂತಿಬೇಲಿ ಹಾಕಿದ. ಸಿಕ್ಕ ನೀರಿಗೆ ಸಂಭ್ರಮಿಸಿದ. ಒಂದು ಬೋರು ಹೋಗಿ ನೂರಾರು, ಸಾವಿರಾರು ಆಗಿ ಅಂತರ್ಜಲ ಮಟ್ಟ ಪಾತಾಳಕ್ಕಿಳಿಯಿತು. ಕುಡಿಯುವ ನೀರಿಗೆ ತತ್ವಾರವಾದ ದುಸ್ಥಿತಿಯನ್ನು ರೈತ ತನ್ನ ಮನೆಬಾಗಿಲಿಗೆ ಆಹ್ವಾನಿಸಿದ. ಸಾಲಕೊಟ್ಟ ಬ್ಯಾಂಕುಗಳು ಬಡ್ಡಿಗೆ ಬಡ್ಡಿ ಸೇರಿಸಿ ಅದನ್ನು ಅಸಲಾಗಿ ಪರಿವರ್ತಿಸಿ ಸುಸ್ತಿಯ ಸುಳಿಗೆ ಸಿಕ್ಕಿಸಿ ರೈತನನ್ನು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿದುವು. ಹಿಂದೆ ಎಂಥ ಬರದಲ್ಲೂ ರೈತ ತನ್ನ ಆತ್ಮವಿಶ್ವಾಸ ಕಳೆದುಕೊಂಡಿರಲಿಲ್ಲ. ಸಾಲ ತೀರಿಸಲಾರದ್ದಕ್ಕೆ ಸಾವಿಗೆ ಶರಣಾಗುವ ದುರ್ಬಲ ಮನಸ್ಥಿತಿಗೆ ಎಂದೂ ಈ ಪ್ರಮಾಣದಲ್ಲಿ ಇಳಿದಿರಲಿಲ್ಲ. ಇಂದು ನಮ್ಮ ಹಳ್ಳಿಗಳಲ್ಲಿ ಉಳಿದಿರುವವರು ಮುದುಕರು, ಕೈಲಾಗದವರು ಹಾಗೂ ಮಕ್ಕಳು. ಇವರ ಜೊತೆಗೆ ಕಳ್ಳುಬಳ್ಳಿಯ ಮೋಹಕ್ಕೆ ಬಿಡಲಾರದ ಬಂಧದಲ್ಲಿ ಅಲ್ಲಿಯೇ ಉಳಿದಿರುವವರು. ಹಬ್ಬಹರಿದಿನಗಳ ಸಂಭ್ರಮದಲ್ಲಿ ಪಾಲ್ಗೊಳ್ಳಲು ಮಾತ್ರ ನಗರಕ್ಕೆ ಹೋದ ಹುಡುಗರು ಹಳ್ಳಿಗಳಿಗೆ ಬರುತ್ತಿದ್ದಾರೆ. ಮಿಕ್ಕಂತೆ ಹಳ್ಳಿಗಳ ಬೀದಿಗಳು ಬಿಕೋ ಎನ್ನುತ್ತಿವೆ. ಕೃಷಿಕಾಯಕದಿಂದ ದೂರವಾಗುತ್ತಿರುವ ಹಳ್ಳಿಗಳ ಭೂಮಿಯನ್ನು ನಗರದ ಭೂ ಮಾಫಿಯಾ ಜಗತ್ತು ಕಬಳಿಸುತ್ತಿದೆ. ಇಂಥ ದಾರುಣತೆಯ ನಡುವೆ ಅಲ್ಲೊಬ್ಬ ಇಲ್ಲೊಬ್ಬ ಹಠಮುನಿಯಂತೆ ನೆಲಮೂಲ ಜ್ಞಾನಕ್ಕೆ ನಿಷ್ಠನಾಗಿ ಕೃಷಿಕಾಯಕದಲ್ಲಿ ತತ್ಪರನಾಗಿದ್ದಾನೆ.

ಇಂದು ದೇಸಿ ಜ್ಞಾನಕ್ಕೆ ಪೂರಕವಾಗುವ ಮೂರು ಬಗೆಯ ಕೃಷಿಪದ್ಧತಿಗಳು ನಮ್ಮ ನಡುವೆ ಬಳಕೆಯಲ್ಲಿವೆ. ಸಾಂಪ್ರದಾಯಿಕ ಕೃಷಿಪದ್ಧತಿ; ಸಾವಯವ ಕೃಷಿಪದ್ಧತಿ; ಸಹಜ ಕೃಷಿಪದ್ಧತಿ; ಮೇಲುನೋಟಕ್ಕೆ ಈ ಮೂರೂ ಮಾದರಿಗಳು ಭಿನ್ನ ಎಂಬಂತೆ ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ; ಭೂಮಿಯ ಜೈವಿಕ ಸತ್ವವನ್ನು ನಾಶಮಾಡದೆ ಉತ್ತು ಬಿತ್ತಿ ಬೆಳೆ ತೆಗೆಯುವುದು ಮತ್ತು ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನಪ್ರಯೋಗದಲ್ಲಿ ವ್ಯವಸಾಯ ಮಾಡುವುದು. ದುರಾಸೆಗೆ ಬಲಿಯಾಗದೇ ನಿರಾಸೆಯ ಕೂಪಕ್ಕೂ ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಈ ಮೂರೂ ಕೃಷಿ ಪದ್ಧತಿಗಳು ನೆಲಕ್ಕೆ ವಿಷ ಉಣ್ಣಿಸುವ ದ್ರೋಹ ಚಿಂತನೆಗೆ ಎಂದೂ ತೊಡಗಿದವುಗಳಲ್ಲ. ನೆಲ, ಜಲ, ಹವಾಮಾನಗಳ ಲಭ್ಯತೆಯನ್ನು ಅರಿತು ಕೃಷಿಜ್ಞಾನವನ್ನು ಬಳಸಿಕೊಂಡವು ಹಾಗೂ

ಬೆಳೆಸಿಕೊಂಡವು. ಇದರ ಜೊತೆಗೆ ಸ್ಥಳೀಯ ಪ್ರಾಕೃತಿಕ ಲಭ್ಯತೆಯನ್ನು ನಾಶವಾಗದ ಪರಿಯಲ್ಲಿ ಕೃಷಿಗೆ ಪೂರಕವಾಗಿ ದುಡಿಸಿಕೊಂಡವು. ಈ ಎಲ್ಲ ಸಮಾನಾಂಶಗಳನ್ನು ಗಮನಿಸಿದರೆ ಇವುಗಳನ್ನು ಸರಳವಾಗಿ ಜೈವಿಕ ಕೃಷಿಪದ್ಧತಿಗಳೆಂದು ಕರೆಯಬಹುದು. ಈ ಮೂರೂ ಪದ್ಧತಿಗಳಲ್ಲಿ ಸ್ಥಳೀಯ ಜ್ಞಾನ ಪ್ರಧಾನವಾಗಿ ಬಿಂಬಿತವಾಗುವುದರಿಂದ ದೇಸಿ ಜೈವಿಕ ಕೃಷಿ ಪದ್ಧತಿಗಳೆಂದು ಸಾಮಾನ್ಯೀಕರಿಸಬಹುದು. ಅಲ್ಲದೆ ಈ ಮೂರು ವಿಧಾನಗಳನ್ನು ಪ್ರತ್ಯೇಕ ಜ್ಞಾನ ಮಾರ್ಗಗಳಾಗಿ ಕಾಣದೆ ಪರಸ್ಪರ ಬಳಕೆಯ ಪೂರಕ ಮಾದರಿಗಳಾಗಿ ಸ್ವೀಕರಿಸುವ ಅಗತ್ಯವೂ ಇದೆ. ಹಾಗಾದಾಗ ಮಾತ್ರ ನೆಲಮೂಲ ಜ್ಞಾನದ ಬಳಕೆಯ ಹೊಸತನಕ್ಕೆ ಅವಕಾಶಗಳನ್ನು ಕಲ್ಪಿಸುವುದು, ಹೊಸ ಹೊಸ ಆವಿಷ್ಕಾರಗಳು ಈ ಜೈವಿಕ ಕೃಷಿಪದ್ಧತಿಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ. ದಿಕ್ಕುತಪ್ಪಿರುವ ಕೃಷಿ ಬದುಕಿಗೆ ಒಂದು ನಿರ್ದಿಷ್ಟವೂ ಅತಿರೇಕಗಳ ಅವಾಂತರವೂ ಇಲ್ಲದ ತಿಳುವಳಿಕೆಯನ್ನು ನೀಡುವುದು ಇದರಿಂದ ಸಾಧ್ಯವಾಗುತ್ತದೆ. ಇಲ್ಲಿ ದುರಾಸೆಯಿಂದ ಭ್ರಮೆಗಳ ಬೆನ್ನುಹತ್ತುವ ಪ್ರಮೇಯವಿಲ್ಲ. ವಸ್ತುಸ್ಥಿತಿ ಅರಿವಿನಲ್ಲಿ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಧ್ಯಮ ಮಾರ್ಗದ ಜೀವನವಿಧಾನ ಇದಾಗಿದೆ. ಮಧ್ಯಮ ಮಾರ್ಗವೆಂಬುದು ಮಧ್ಯಮ ವರ್ಗದ ಜೀವನ ಮಾರ್ಗವಲ್ಲ. ನಿಸರ್ಗಧರ್ಮಕ್ಕೆ ಎರವಾಗದಂತೆ ಬದುಕನ್ನು ಅರಿಯುವ; ಬದುಕನ್ನು ಬಾಳುವ ಜೀವನ ಮಾರ್ಗ. ತಾನೂ ಬದುಕಿ ಜೀವಜಗತ್ತನ್ನೂ ಬದುಕಿಸುವಂತೆ ತನ್ನ ನಡೆಯನ್ನು ನಿಯಂತ್ರಿಸಿಕೊಳ್ಳುವ ಜೀವನಮಾರ್ಗ. ಇಂಥ ಒಂದು ಜೀವನ ಮಾರ್ಗಕ್ಕೆ ಸದಾ ಹಂಬಲಿಸುವ ಜನಪದ ಇಂದಿಗೂ ನಮ್ಮ ನಡುವೆ ಇದೆ. ಅವರ ಎದೆಯಾಳದಲ್ಲಿ ಈ ಮೂರೂ ಕೃಷಿ ಪದ್ಧತಿಗಳ ಪಾರಂಪರಿಕ ಅನುಭವ ಜ್ಞಾನ ನೆನಪಾಗಿ ನೆಲದ ಕರ್ಮರೂಪಿ ಪ್ರಾತ್ಯಕ್ಷಿಕೆಯಾಗಿ ಮರುಭೂಮಿಯಲ್ಲಿನ ಓಯಸಿಸ್‌ಗಳಂತೆ ಇನ್ನೂ ಜೀವಂತವಿವೆ. ಅವುಗಳನ್ನು ಸಂಗ್ರಹಿಸಿ ಉಳಿಸುವ ಹಾಗೂ ಆಸಕ್ತ ರೈತ ಪ್ರಜೆಗಳಿಗೆ ಒದಗಿಸಬೇಕಾದ ಅಗತ್ಯವಿದೆ.

## ಲೇಖಕರ ಪರಿಚಯ



ಸಾಹಿತಿ, ಚಿಂತಕ **ಡಾ. ಎಸ್.ಜಿ. ಸಿದ್ಧರಾಮಯ್ಯ**ನವರು ದಿನಾಂಕ ೧೯-೧೧-೧೯೪೬ ರಂದು ಚಿಕ್ಕನಾಯಕನ ಹಳ್ಳಿಯಲ್ಲಿ ಜನಿಸಿದರು. ಕಾಡುವ ಬೇಲಿಹೂ, ಸೊಲ್ಲು ಫಲವಾಗಿ, ಮರುಜೀವಣಿ ಇತ್ಯಾದಿ ಕವನ ಸಂಕಲನಗಳನ್ನು ರಚಿಸಿದ್ದಾರೆ. ಅಂಬಿಗರ ಚೌಡಯ್ಯ ಇವರ ಅಧ್ಯಯನ ಕೃತಿ. ಸಾಲಾವಳಿ, ನಿಶ್ಶಬ್ದದ ಹಾಡು, ಯಡೆಕುಂಟಿಗೆಣೆ ಸಾಲು ಮುಂತಾದ ವಿಮರ್ಶಾಕೃತಿಗಳನ್ನು ರಚಿಸಿದ್ದಾರೆ. ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪು.ತಿ.ನ. ಕಾವ್ಯ ಪ್ರಶಸ್ತಿ ಇವರಿಗೆ ಸಂದಿದೆ. ಪ್ರೊ. ಸಿದ್ಧ ರಾಮಯ್ಯ ಕರ್ನಾಟಕ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಅಲ್ಲಿಗೆ ಹೋದರೂ ಇಲ್ಲಿಯ ಚಿಂತೆ ಎಂಬುದು ಅವರ ಲಂಡನ್ ಪ್ರವಾಸಕಥನ.

ಪ್ರಸ್ತುತ ಗದ್ಯಭಾಗವನ್ನು ಮಲ್ಲಿಕಾರ್ಜುನ ಹೊಸಪಾಳ್ಯ ಸಂಪಾದಿಸಿದ 'ಈ ನೆಲದ ಬದುಕು' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

### ಉತ್ತರಿಸಿರಿ.

1. ಆಧುನಿಕ ಕೃಷಿಪದ್ಧತಿಯ ದುಷ್ಪರಿಣಾಮಗಳೇನು?
2. ಕೃಷಿಯ ಬಗ್ಗೆ ಜನಪದರ ದೃಷ್ಟಿಕೋನವೇನು?
3. ಕೃಷಿಕನು ಅಧಿಕ ಇಳುವರಿಗೆ ಮೋಹಿತನಾದುದರ ಪರಿಣಾಮವೇನು?
4. ದೇಸಿ ಜ್ಞಾನಕ್ಕೆ ಪೂರಕವಾದ ಕೃಷಿಪದ್ಧತಿಯ ಮೂಲ ಆಶಯಗಳೇನು?

### ಮನವಿಪತ್ರ ಬರೆಯಿರಿ.

- ನಿಮ್ಮ ಶಾಲಾ ತರಕಾರಿ ತೋಟಕ್ಕೆ ಸಾವಯವ ಗೊಬ್ಬರ ಮಂಜೂರು ಮಾಡುವಂತೆ ಕೃಷಿ ಅಧಿಕಾರಿಗೆ ಒಂದು ಮನವಿಪತ್ರ ಬರೆಯಿರಿ.

### ಟಿಪ್ಪಣಿ ಬರೆಯಿರಿ

- 'ಜೈವಿಕ ಕೃಷಿ ಪದ್ಧತಿಗಳು ನೆಲಕ್ಕೆ ವಿಷ ಉಣ್ಣಿಸುವ ದ್ರೋಹ ಚಿಂತನೆಗೆ ಎಂದೂ ತೊಡಗಿದವುಗಳಲ್ಲ' – ಈ ಮಾತಿನ ಹಿನ್ನಲೆಯಲ್ಲಿ ಜೈವಿಕ ಕೃಷಿ ಪದ್ಧತಿಯ ಮಹತ್ವದ ಕುರಿತು ಟಿಪ್ಪಣಿ ಬರೆಯಿರಿ.

### ಲಿಖಿತ ಭಾಷಣ ತಯಾರಿಸಿರಿ.

- 'ಕೃಷಿರಂಗವು ಎದುರಿಸುತ್ತಿರುವ ಸಮಸ್ಯೆಗಳು'ಎಂಬ ವಿಷಯದ ಕುರಿತು ಲಿಖಿತ ಭಾಷಣವನ್ನು ತಯಾರಿಸಿ, ತರಗತಿಯಲ್ಲಿ ಮಂಡಿಸಿರಿ.

### ವಾಕ್ಯರಚಿಸಿರಿ

ಕೆಳಗೆ ಕೊಡಲಾದ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಬಳಸಿ ಬೇರೆ ವಾಕ್ಯ ರಚಿಸಿರಿ.

- ಶ್ರೀಮಂತರ ತಾಳಕ್ಕೆ ಹೆಜ್ಜೆ ಹಾಕುವ ಅಧಿಕಾರಿಗಳು ಪ್ರಾಮಾಣಿಕರಾಗಿರುವುದಿಲ್ಲ.
- ಲಂಚದ ದುರಾಸೆಗೆ ಬಲಿಯಾದ ವ್ಯಕ್ತಿಗಳು ಒಂದಲ್ಲ ಒಂದು ದಿನ ಶಿಕ್ಷೆಗೆ ಗುರಿಯಾಗುವುದು ನಿಶ್ಚಿತ.
- 'ನಗರ ಜೀವನದಲ್ಲಿ ಮಾತ್ರ ಸುಖವಿದೆ' ಎಂಬ ಭ್ರಮೆಯ ಬೆನ್ನು ಹತ್ತಿದವರಿಗೆ ನಿರಾಶೆ ಕಾದಿದೆ!

### ಸಮಾಸ ಗುರುತಿಸಿರಿ

ಕೃಷಿ–ಒಂದು ಜೀವನಮಾರ್ಗ ಎಂಬ ಗದ್ಯಭಾಗದಲ್ಲಿರುವ ಈ ಕೆಳಗಿನ ಪದಗಳು ತತ್ಪುರುಷ ಸಮಾಸಕ್ಕೆ ಉದಾಹರಣೆಗಳಾಗಿವೆ.

ಕೃಷಿಯಲ್ಲಿ ಪಂಡಿತ - ಕೃಷಿಪಂಡಿತ

ಮನೆಯ ಬಾಗಿಲಿಗೆ - ಮನೆಬಾಗಿಲಿಗೆ

ಕೆಳಗೆ ಕೊಡಲಾದ ಗದ್ಯಭಾಗದಿಂದ ತತ್ಪುರುಷ ಸಮಾಸವಾಗುವ ಪದಗಳನ್ನು ಗುರುತಿಸಿ ವಿಗ್ರಹಿಸಿ ಬರೆಯಿರಿ.

ಮಳೆಗಾಲ ಕಳೆದು ಪ್ರಕೃತಿ ಹಸಿರುಹೊದ್ದು ಫಲಪ್ರದವಾಗಿ ಕಾಣಿಸಿಕೊಳ್ಳುವಾಗ ಬರುವ ತೆನೆಹಬ್ಬ ಹೃನ್ಮನವನ್ನು ಸಂತೃಪ್ತಿಗೊಳಿಸುತ್ತದೆ. ಇದನ್ನೇ ಮಾತೆ ಮರಿಯಮ್ಮನ ಹುಟ್ಟುಹಬ್ಬ, ಮೊಂತಿಹಬ್ಬ ಎಂದು ಅಕ್ಕರೆಯಿಂದ ಕರೆಯುತ್ತಾರೆ.

ತೆನೆಹಬ್ಬ ಕರಾವಳಿ ಕ್ರೈಸ್ತರಿಗೆ ಬಹುಪ್ರಿಯ. ಈ ಹಬ್ಬಕ್ಕೆ ಒಂಬತ್ತು ದಿನಗಳಕಾಲ ಮಾತೆ ಮರಿಯಮ್ಮಳಿಗೆ ಪುಷ್ಪವೃಷ್ಟಿ ಮಾಡಿ ಗೌರವಿಸಲಾಗುತ್ತದೆ. ಚರ್ಚಿನಲ್ಲಿ ಪೂಜೆಯ ಬಳಿಕ ಹೊಸತೆನೆಯನ್ನು ವಿತರಿಸಲಾಗುತ್ತದೆ. ಹೂ ತಂದ ಮಕ್ಕಳಿಗೆ ಕಬ್ಬನ್ನು ನೀಡಲಾಗುತ್ತದೆ. ಆ ದಿನ ಸಸ್ಯಾಹಾರವೇ ಪ್ರಧಾನ. ಹೊಸತೆನೆಯನ್ನು ಹಾಲು ಅಥವಾ ಪಾಯಸದಲ್ಲಿ ಹಾಕಿ ಮನೆಯವರೆಲ್ಲ ಒಟ್ಟು ಸೇರಿ ಸೇವಿಸುತ್ತಾರೆ. ಹೊರದೇಶದಲ್ಲಿರುವ ಬಾಂಧವರಿಗೆ ತೆನೆಯನ್ನು ಅಂಚೆಯ ಮೂಲಕ ಕಳುಹಿಸುವುದರೊಂದಿಗೆ ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಒಟ್ಟಿನಲ್ಲಿ ತೆನೆಹಬ್ಬವು ಕ್ರೈಸ್ತಬಾಂಧವರ ಕೃಷಿಪ್ರೀತಿಯನ್ನು ಬಿಂಬಿಸುತ್ತದೆ.

ಘಟಕ - 3

# ನಾಡದೀಪ



# ಕನ್ನಡಪ್ರಜ್ಞೆ

– ದೇ.ಜ.ಗೌ.

"**ನಾ**ಡುನುಡಿಗಳ ಕ್ಷೇಮಸಾಧನೆಯ ಮೂಲಕ ಆತ್ಮೋದ್ಧಾರವನ್ನು ಸಾಧಿಸಬೇಕು" ಎಂಬುದು ಕುವೆಂಪುರವರ ಅಭಿಮತ. ನಾಡುನುಡಿಗಳ ಮೇಲಣ ಸದಭಿಮಾನ ವ್ಯಕ್ತಿಯಲ್ಲಿ ಶ್ರದ್ಧೋತ್ಸಾಹಗಳನ್ನು ಪ್ರೇರೇಪಿಸುತ್ತದೆ, ಕ್ರಿಯಾಶೀಲತೆಯನ್ನು ಚುರುಕುಗೊಳಿಸುತ್ತದೆ. ದುಡಿಮೆಯ ಬಗ್ಗೆ ಆಸಕ್ತಿಯನ್ನು ಕೆರಳಿಸುತ್ತದೆ. ಹೊಟ್ಟೆಬಟ್ಟೆಗಳ ಪೂರೈಕೆಯೊಂದೇ ಮಾನವನ ಸಾಧನೆಯ ಗುರಿಯಾಗಬಾರದು. ಲೋಕೋತ್ತರವಾದ ಮಹತ್ಸಿದ್ಧಿಯ ಬಯಕೆ ಮಾತ್ರ ಅವನನ್ನು ಮಹತ್ಕಾರ್ಯಕ್ಕಣಿಗೊಳಿಸುತ್ತದೆ. ಅದಕ್ಕಾಗಿಯೇ ಕುವೆಂಪು ಹೇಳುತ್ತಾರೆ. "ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು" ಎಂದು. ಕನ್ನಡಿಗನೊಬ್ಬ ಆಂಡೀಸ್ ಪರ್ವತವನ್ನೇರುವಾಗ ಸಹ್ಯಾದ್ರಿಯ ಸುಖವನ್ನನುಭವಿಸಬೇಕು. ಥೇಮ್ಸ್ ನದಿಯ ನೀರು ಕಾವೇರಿಯ ನೆನಪು ತರಬೇಕು. ಎಲ್ಲಿದ್ದರೂ ಕನ್ನಡ ಪ್ರಜ್ಞೆಯಿಂದ ಅವನು ವಂಚಿತನಾಗಬಾರದು. ಆಗ ಆಂಡೀಸ್, ಥೇಮ್ಸ್‌ಗಳೊಡನೆ ತಾದಾತ್ಮ್ಯ ಸುಖವನ್ನನುಭವಿಸಲು ಸಾಧ್ಯವಾಗುತ್ತದೆ.



ಮೇಲಿನ ಗದ್ಯಭಾಗವನ್ನು ಓದಿದಿರಲ್ಲವೇ? ಲೇಖಕರ ಮಾತುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ಬರೆದು ಮಂಡಿಸಿರಿ.

# ತೌಳವ ಮಾತೆ

- ಮಂಜೇಶ್ವರ ಗೋವಿಂದ ಪೈ



ಜಯ ಜಯ ತೌಳವ ತಾಯೇ ॥ ಪಲ್ಲ ॥
ಮಣಿವೆ ತಂದೆತಾಯಂದಿರ ತಾಯೇ,
ಭುವನದಿ ತ್ರಿದಿವಚ್ಛಾಯೇ ॥ ಅನು ॥

ಭಾರ್ಗವನಂದು ಬಿಸುಡೆ ಕೊಡಲಿಯ ನೀ ಕಡಲೊಡೆದೆಡೆಯಿಂ ಮೂಡಿ,
ಭಾರತಮಾತೆ ತೊಡೆಯೊಳೊಡಗೂಡಿಸೆ, ಸಹ್ಯವೀಣೆಯಂ ತೀಡಿ -
ದೆಸೆದೆಸೆ ರವಿಶಶಿ ಕಿರಣದ ಮಳೆಮಂಜಿನ ಮಿಸುಸೇಸೆಯ ಸೂಸೆ -
ನವನವರಿತುಗಾನವನವತರಿಸುವೆ, ಗಗನವನಧಿಯೋಲೈಸೆ ॥


ಸಾತಿಯಪುತರ ತವರ್ಮನೆ, ಸಾತರ ತೆಂಕಣ ನೆಲೆಮನೆಯಲೂಪರಾ
ಕೆಳಮನೆ, ಪಾಂಡ್ಯರ ಮೇಲ್ಮನೆ, ನೆರೆಯರಮನೆ ಕನ್ನಾಡಿನ ಭೂಪರಾ;
ಭೈರವ ಬಂಗರ ಚೌಟರಜಿಲ ಸಾವಂತರ ಮನೆಮನೆಯಿಂಬೇ,
ತುಳುವರ ತಾಯ್ಮನೆಯುಳಿದರ ಕಾಯ್ಮನೆ - ನೀನೆಮ್ಮಯ ಮನೆಯಂಬೇ ॥

ದೇಗುಲಗಳೊ ಧರ್ಮದ ಬಾಗಿಲುಗಳೊ? ಪುಣ್ಯಘಟಂ ತಟನೀತಟಂ
ಬಸದಿಗಳೋ ಕನಸೇ ಕಲ್ಲಾದುವೊ? ನೆಲಬಿರಿದೆದ್ದರೆ ಗೊಮ್ಮಟಂ?
ನಿನ್ನ ಪುಲಕವೇ ಪಸುರಿದಂತೆ ಪಸರಿಸಿದೀ ಸಸ್ಯದ ಚೆಲುವೇಂ !
ಜೀವನಸಾಮವನಾಡುವ ಪಾಡುವ ಖಗಮೃಗಪತಂಗದೊಲವೇಂ ॥

ಹಿಂದು ಜೈನ ಮುಸ್ಲೀಮ ಕ್ರೈಸ್ತರಾವೊಂದೇ ಬಾಂಧವರೆಮ್ಮಾ
ತಂದೆ ದೇವರೊಬ್ಬನೆ, ನೀನೊಬ್ಬಳೆ ನಮ್ಮೆಲ್ಲರ ತಾಯಮ್ಮಾ !
ಎಂದಿನವಳೊ ನೀನಿಂದಿನವರೆ ನಾವಾದೊಡೆಮ್ಮನಕ್ಕರೆಯಿಂ
ನಿನ್ನೆದೆ ತೊಟ್ಟಿಲೊಳಿಟ್ಟು ಸಾಕುತಿಹೆ, ಸರಸಿಯಂತೆ ತಾವರೆಯಂ ॥

ಧನ್ಯನೆನಿತೊ ನಾ ನಿನ್ನಯ ಬಸುರಿಂದುಸುರಿಸಲೀ ಹೂವನ್ನ
ಕೆಸರೊಳುದುರಲೀಯದೆ, ನಿನ್ನಡಿಗರ್ಪಿಸಿಕೊಳು ಸೌಸವವನ್ನ
ಬೇಡುವೆನವ್ವಾ, ಬೀಳ್ಕೊಡುವಂದೆನ್ನನೆತ್ತಿದಂಕದಿ ನಿನ್ನ
'ಮರಳಿ ಬಾರ, ಕಂದಾ ನನ್ನುದರದಿ' ಎಂದು ತಬ್ಬಿ ಹರಸೆನ್ನ ॥





# ಕವಿಪರಿಚಯ

**ಮಂಜೇಶ್ವರ ಗೋವಿಂದ ಪೈ**ಗಳು ೧೮೮೩ ಮಾರ್ಚ್ ೨೩ರಂದು ಮಂಗಳೂರಿನಲ್ಲಿ ಜನಿಸಿದರು. ತಂದೆ ಮಂಗಳೂರು ತಿಮ್ಮಪ್ಪೈ, ತಾಯಿ ದೇವಕಿಯಮ್ಮ. ತಮ್ಮ ಜೀವಿತದ ಬಹುಭಾಗವನ್ನು ಮಂಜೇಶ್ವರದಲ್ಲಿಯೇ ಕಳೆದುದರಿಂದ ಅವರು ಮಂಜೇಶ್ವರ ಗೋವಿಂದ ಪೈ ಎಂದೇ ಖ್ಯಾತರು.

ಅವರ ಪ್ರಾಥಮಿಕ ಹಾಗೂ ಇಂಟರ್ ಮೀಡಿಯೇಟ್ ಶಿಕ್ಷಣ ಮಂಗಳೂರಿನಲ್ಲಿ ನಡೆಯಿತು. ಹೆಚ್ಚಿನ ವ್ಯಾಸಂಗಕ್ಕಾಗಿ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಪ್ರವೇಶ ಪಡೆದರು. ಆದರೆ ತಮ್ಮ ತಂದೆಯವರ ಅನಾರೋಗ್ಯದ ಕಾರಣದಿಂದ ವಿದ್ಯಾಭ್ಯಾಸವನ್ನು ಅರ್ಧಕ್ಕೇ ಮೊಟಕುಗೊಳಿಸಬೇಕಾಯಿತು. ಮನೆಯಲ್ಲಿಯೇ ಅನೌಪಚಾರಿಕ ವ್ಯಾಸಂಗ ಮುಂದುವರಿಸಿದರು. ಅವರು ೨೨ ಭಾಷೆಗಳಲ್ಲಿ ಪ್ರಾವೀಣ್ಯ ಹೊಂದಿದ್ದ ಬಹುಭಾಷಾ ಪಂಡಿತರು. ಆದಿಪ್ರಾಸವನ್ನು ಬಿಟ್ಟು ಪದ್ಯರಚನೆ ಮಾಡಿ ಕಾವ್ಯಕ್ಷೇತ್ರದಲ್ಲಿ ಮಹತ್ವದ ಕ್ರಾಂತಿ ನಡೆಸಿದವರು. ಗಿಳಿವಿಂಡು, ಹೃದಯರಂಗ, ಇಂಗಡಲು, ನಂದಾದೀಪ ಅವರ ಕವನ ಸಂಕಲನಗಳು. ವೈಶಾಖಿ, ಗೊಲ್ಗೊಥಾ ಪ್ರಭಾಸ, ದೆಹಲಿ ಅವರ ಖಂಡಕಾವ್ಯಗಳು. ಹೆಬ್ಬೆರಳು, ಚಿತ್ರಭಾನು, ತಾಯಿ ಮತ್ತು ನೋ ನಾಟಕಗಳು ಅವರ ನಾಟಕ ಕೃತಿಗಳು. ಸಂಶೋಧನೆಯ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಕೊಡುಗೆ ಅಪಾರ.

ಮದರಾಸು ಸರಕಾರ ಗೋವಿಂದ ಪೈಗಳಿಗೆ ೧೯೪೯ರಲ್ಲಿ ರಾಷ್ಟ್ರಕವಿ ಬಿರುದು ನೀಡಿ ಗೌರವಿಸಿತು. ಅವರು ಕನ್ನಡದ ಪ್ರಥಮ ರಾಷ್ಟ್ರಕವಿಯೆಂಬ ಮನ್ನಣೆಗೆ ಪಾತ್ರರಾದರು. ಅವರು ೧೯೫೦ರಲ್ಲಿ ಮುಂಬಯಿಯಲ್ಲಿ ಜರುಗಿದ ೨೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ೦೬-೦೯-೧೯೬೩ರಂದು ಮಂಗಳೂರಿನಲ್ಲಿ ಅವರು ಇಹಲೋಕ ತ್ಯಜಿಸಿದರು.

'ಗೋವಿಂದ ಪೈ ಸಮಗ್ರ ಕವಿತೆಗಳು' ಸಂಕಲನದಿಂದ 'ತೌಳವ ಮಾತೆ' ಕವನವನ್ನು ಆರಿಸಲಾಗಿದೆ.

## ವಿಶದೀಕರಣ

- ಸಾತಿಯಪುತರು – ಅಶೋಕನ ಶಿಲಾಲೇಖನದಲ್ಲಿ 'ಸಾತಿಯಪುತರು' ಎಂಬ ಉಲ್ಲೇಖ ಬರುತ್ತದೆ. ಸಾತಿಯಪುತರು ಎಂದರೆ 'ತುಳುನಾಡಿನ ಜನರು' ಎಂಬುದಾಗಿ ತಮ್ಮ ಸಂಶೋಧನ ಬರಹದಲ್ಲಿ ಸಾಧಾರವಾಗಿ ಗೋವಿಂದಪೈ ವಿವರಿಸಿದ್ದಾರೆ.
- ಸಾತರು (ಶಾತವಾಹನರು) ಅಲೂಪರು, ಪಾಂಡ್ಯರು-ತುಳುನಾಡನ್ನು ಆಳಿದ ರಾಜವಂಶಗಳಲ್ಲಿ ಕೆಲವು.
- ಸಹ್ಯವೀಣೆ – ಇಲ್ಲಿ ಸಹ್ಯಾದ್ರಿ ಪರ್ವತವನ್ನು ವೀಣೆ ಎಂದು ಕಲ್ಪಿಸಲಾಗಿದೆ. ತೌಳವಮಾತೆಯು ಸಹ್ಯಾದ್ರಿ ಪರ್ವತವೆಂಬ ವೀಣೆಯನ್ನು ಮೀಟಿದಾಗ, ಇಲ್ಲಿ ಹೆಚ್ಚು ಶೈತ್ಯವೂ, ಹೆಚ್ಚು ಬಿಸಿಯೂ ಇರದ ಉತ್ತಮ ಹವಾಮಾನ ಲಭ್ಯವಾಗುತ್ತದೆ ಎಂಬ ಭಾವ.
- ಮಿಸುಸೇಸೆ – ಹೊಳೆಯುವ ಅಕ್ಷತೆ
- ತ್ರಿದಿವಚ್ಛಾಯೆ – ತ್ರಿದಿವ ಎನ್ನುವ ಪದಕ್ಕೆ ಸ್ವರ್ಗ ಎಂಬ ಅರ್ಥವಿದೆ. ಇಲ್ಲಿ ತುಳುನಾಡು ಸ್ವರ್ಗಸದೃಶವಾಗಿದೆ ಎಂದು ಕವಿ ವರ್ಣಿಸುತ್ತಾರೆ.

- ಪುಣ್ಯಘಟಂ ತಟನೀತಟಂ – ತುಳುನಾಡಿನಲ್ಲಿ ಹರಿವ ನದಿಗಳ ದಡಗಳು ಪುಣ್ಯದ ಕೊಡಗಳೇ ಆಗಿವೆ. ಇಲ್ಲಿನ ನದಿಗಳು ಪುಣ್ಯವಾಹಿನಿಗಳೇ ಆಗಿವೆ ಎನ್ನುವುದು ತಾತ್ಪರ್ಯ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ತೌಳವ ನೆಲದ ಉದಯದ ಬಗ್ಗೆ ಕವಿ ಉಲ್ಲೇಖಿಸುವ ಘಟನೆ ಯಾವುದು?

2 ಕವಿಯು ಹೇಳಿದಂತೆ ತುಳುನಾಡನ್ನು ಆಳಿದ ರಾಜವಂಶಗಳು ಯಾವುವು?

3 ತೌಳವ ಮಾತೆಯನ್ನು ನಮ್ಮೆಲ್ಲರ ತಾಯಿ ಎಂದು ಕವಿ ಕರೆಯಲು ಕಾರಣವೇನು?

4 ತೌಳವ ಮಾತೆಯಲ್ಲಿ ಕವಿ ಏನೆಂದು ಬೇಡಿಕೊಳ್ಳುತ್ತಾರೆ?

## ಪದವಿಂಗಡಿಸಿರಿ

ಪಾಠದಲ್ಲಿ ಬಂದಿರುವ ಸಂಧಿಪದಗಳನ್ನು ಗುರುತಿಸಿ ವಿಂಗಡಿಸಿ ಬರೆಯಿರಿ.

ಉದಾ:

- ಕಡಲೊಡೆದೆಡೆಯಿಂ – ಕಡಲು + ಒಡೆದ + ಎಡೆಯಿಂ
- ತೊಡೆಯೊಳೊಡಗೂಡಿಸು – ತೊಡೆಯೊಳು + ಒಡ + ಕೂಡಿಸು
- ನಾವಾದೊಡೆಮ್ಮನಕ್ಕರೆಯಿಂ – ನಾವು + ಆದೊಡೆ + ಎಮ್ಮನು + ಅಕ್ಕರೆಯಿಂ
- ಬೀಳ್ಕೊಡುವಂದೆನ್ನನೆತ್ತಿದಂಕದಿ–ಬೀಳ್ಕೊಡುವಂದು + ಎನ್ನನು + ಎತ್ತಿದ + ಅಂಕದಿ


## ಆಶಯವನ್ನು ಬರೆಯಿರಿ

- "ತೌಳವ ಮಾತೆ" ಕವನದ ಆಶಯವನ್ನು ಬರೆಯಿರಿ.

## ಪ್ರಬಂಧ ಬರೆಯಿರಿ

- ಪದ್ಯದ ಆಧಾರದಲ್ಲಿ ತುಳುನಾಡಿನ ಭೌಗೋಳಿಕ ಹಾಗೂ ಸಾಂಸ್ಕೃತಿಕ ವಿಶೇಷತೆಗಳ ಕುರಿತು ಪ್ರಬಂಧ ಬರೆಯಿರಿ.

NT-151-7-KANNADA-10-AT-VOL.1



# ದುರ್ಗದ ದೊರೆ

– ತ.ರಾ.ಸು.

**ಸಂದರ್ಭ :**

ಕರ್ನಾಟಕದ ಚಿತ್ರದುರ್ಗ ಪ್ರದೇಶವನ್ನು ಆಳಿದ ಪಾಳೆಯಗಾರ ವಂಶದ ಕಸ್ತೂರಿ ರಂಗಪ್ಪನಾಯಕರು ಮರಣ ಹೊಂದಿದ ಬಳಿಕ ಸಿಂಹಾಸನಕ್ಕೆ ಉತ್ತರಾಧಿಕಾರಿಗಳು ಇಲ್ಲವಾಗುತ್ತಾರೆ. ರಾಜಮಾತೆ ಓಬವ್ವ ನಾಗತಿ ಜಾನಕಲ್ಲಿನ ಭರಮಣ್ಣ ನಾಯಕರ ಹನ್ನೆರಡು ವರ್ಷದ ಮಗ ಮದಕರಿನಾಯಕನನ್ನು ದತ್ತಕಕ್ಕೆ ಪಡೆದುಕೊಂಡು ಚಿತ್ರದುರ್ಗದ ದೊರೆಯನ್ನಾಗಿ ಪಟ್ಟಾಭಿಷೇಕ ಮಾಡುತ್ತಾರೆ. ಜಾನಕಲ್ಲಿನಲ್ಲಿ ಹೆತ್ತವರ ಅಕ್ಕರೆ ತಮ್ಮ ಪರಶುರಾಮನಾಯಕರ ಸ್ನೇಹಗಳೊಂದಿಗೆ ಗರಡಿಮನೆಯಲ್ಲಿ ಪಳಗಿದ ಸುದೃಢ ಉತ್ಸಾಹೀ ಬಾಲಕನನ್ನು ಚಿತ್ರದುರ್ಗದ ಪ್ರಧಾನಿ ನರಸಪ್ಪಯ್ಯನು ರಾಜಕಾರಣದಲ್ಲಿ ಪಳಗಿಸುತ್ತಾನೆ. ರಣವಿದ್ಯೆಯಲ್ಲಿ ಗಟ್ಟಿಗನನ್ನಾಗಿ ಮಾಡುತ್ತಾನೆ.

ಮದಕರಿನಾಯಕರು ಪ್ರೌಢಾವಸ್ಥೆಗೆ ಬರುವಷ್ಟರಲ್ಲಿಯೇ ನೆರೆರಾಜ್ಯ ರಾಯದುರ್ಗದ ಜೊತೆ ಯುದ್ಧ ಸಾರಿ ವಿಜಯಿಯಾಗುತ್ತಾನೆ. ಅರಸುತನದ ಸುಖವನ್ನನುಭವಿಸುತ್ತಾನೆ. ಅದಕ್ಕೂ ಮಿಗಿಲಾಗಿ ರಾಜ್ಯ ಮತ್ತು ನೆರೆರಾಜ್ಯಗಳ ಸಂಚುಗಳ ಸುಳಿಯಲ್ಲಿ ಸಿಲುಕಿ ನುರಿತ ರಾಜಕಾರಣಿಯಾಗಿ ಅವನು ಚಿತ್ರದುರ್ಗದ ಯಶಸ್ವಿ ನಾಯಕನಾಗುತ್ತಾನೆ. ಇಂತಹ ಸಂದರ್ಭದಲ್ಲಿಯೇ ಪ್ರಧಾನಿ ನರಸಪ್ಪಯ್ಯ ಹಾಗೂ ಅರಮನೆಯ ನಡುವೆ ವಿರಸ ಏರ್ಪಟ್ಟು ನರಸಪ್ಪಯ್ಯ ದುರ್ಗಬಿಟ್ಟು

ತೀರ್ಥಯಾತ್ರೆಗಾಗಿ ಹೊರಹೋಗುತ್ತಾನೆ. ದುರ್ಗವನ್ನು ಆಕ್ರಮಿಸಿ ವಶಪಡಿಸಿಕೊಳ್ಳಲು ಹೊಂಚುಹಾಕುತ್ತಿದ್ದ ಹೈದರಾಲಿಗೆ ಈ ವಾರ್ತೆ ತಲುಪುತ್ತದೆ.

ಚಿತ್ರದುರ್ಗದ ಮೇಲೆ ಹಲವು ಬಾರಿ ಧಾಳಿ ಮಾಡಿಯೂ ಗೆಲ್ಲಲಾಗದೆ ಕೋಟೆಯ ಹೊರಭಾಗದಲ್ಲಿ ಹೈದರಾಲಿಯ ಸೇನೆ ಬೀಡುಬಿಡುತ್ತದೆ. ದುರ್ಗವನ್ನು ಇದುವರೆಗೂ ಗೆಲ್ಲಲಾರದ ರೋಷದಲ್ಲಿದ್ದ ಅವರು ಸುತ್ತುಮುತ್ತಲ ಹಳ್ಳಿಗೆ ನುಗ್ಗಿ ಸಿಕ್ಕಸಿಕ್ಕವರನ್ನು ಕೊಂದು, ಲೂಟಿ ಮಾಡಿ ಧ್ವಂಸ ಮಾಡುತ್ತಾರೆ. ಮದಕರಿನಾಯಕರಾಗಲೀ ಹೈದರಾಲಿಯಾಗಲೀ ಪೂರ್ಣಜಯವನ್ನು ಪಡೆಯಲಾಗದೆ ಭವಿಷ್ಯದ ಕುರಿತು ಚಿಂತಿತರಾಗುತ್ತಾರೆ. ಯುದ್ಧದ ಭೀಕರತೆ ಹಾಗೂ ಬರಗಾಲದಿಂದ ಜನಸಾಮಾನ್ಯರು ಕಂಗಾಲಾಗುತ್ತಾರೆ.

**ದು**ರ್ಗದ ಮೇಲೆ ಆಗಸದಲ್ಲಿ ಕತ್ತಲು ಕವಿದು, ನಕ್ಷತ್ರಗಳು ಮಿನುಗುತ್ತಿದ್ದವು. ಕೋಟೆಯ ಕೆಳಗೆ ಬಯಲಿನಲ್ಲಿ ಹಾಕಿದ ಸೇನೆಯ ಗುಡಾರಗಳಲ್ಲಿ ಸಾಲಾಗಿ, ಗಾಯಾಳು ಸೈನಿಕರಿಗಾಗಿ ನಿರ್ಮಿಸಿದ ಬಿದಿರು ತಡಿಕೆಯ ಶಿಬಿರಗಳಲ್ಲಿ, ಮನೆ–ಮಹಲುಗಳಲ್ಲಿ ಬಿಡದಿ–ಬಿಡಾರಗಳಲ್ಲಿ ಸಾವಿರಾರು ದೀಪಗಳು ಮಂಕಾಗಿ ಕ್ಷೀಣ ಹಳದಿಯ ಕಾಂತಿಯಿಂದ ಬೆಳಗುತ್ತಿದ್ದವು. ಮಿಣುಕುಹುಳುಗಳು ದುರ್ಗದ ಮೇಲಿಳಿದು ಕುಳಿತಂತೆ, ಸ್ಮಶಾನದಲ್ಲೂ ಹತ್ತಾರು ಚಿತೆಗಳು ಮುಗಿಲತ್ತ ಕೆನ್ನಾಲಗೆ ಚಾಚಿ ಉರಿಯುತ್ತಿದ್ದವು.

ಆದರೆ ಅದನ್ನು ನೋಡುತ್ತಾ, ಹಿಡಿಂಬೇಶ್ವರನ ಬತೇರಿಯ ಮೇಲೆ ಕುಳಿತ ಮದಕರಿನಾಯಕನ ಹೃದಯದಲ್ಲಿ ಮಾತ್ರ ದಟ್ಟ ಕತ್ತಲೆ ಕವಿದಿತ್ತು. ಹೊರಗಿದ್ದ ಸಹಸ್ರ ಸಹಸ್ರ ಬೆಳಕಿನ ಕುಡಿಗಳಲ್ಲಿ ಒಂದಾದರೂ ಅವನ ಹೃದಯದಲ್ಲಿ ನಂದಿಹೋಗಿದ್ದ ಆಸೆಯ ಹಣತೆಯನ್ನು ಹೊತ್ತಿಸಿರಲಿಲ್ಲ.

ದೂರ, ಬಹುದೂರ –

ಕಣ್ಣು ಕಾಣುವಷ್ಟು ವಿಸ್ತಾರವಾಗಿ ವ್ಯಾಪಿಸಿದ ಹೈದರಾಲಿಯ ಸೇನೆಯ ಬಿಡಾರಗಳಲ್ಲಿ ಉರಿಯುತ್ತಿದ್ದ, ಅತ್ತಿಂದಿತ್ತ ಚಲಿಸುತ್ತಿದ್ದ ದೀವಟಿಗೆಗಳು ಮದಕರಿನಾಯಕನ ಹೃದಯದಲ್ಲಿ ಕವಿದ ಕತ್ತಲನ್ನು ಅಣಕಿಸುತ್ತಿರುವಂತಿದ್ದುವು, ಕತ್ತಲೆಯೇ ಬಾಯ್ತೆರೆದು ತನ್ನ ಕುಡಿಬೆಳಕಿನ ಹಲ್ಲುಗಳನ್ನು ಹೊರತೋರಿ ಹಂಗಿಸಿದಂತಿತ್ತು ಶತ್ರುಪಾಳಯದ ಬೆಳಕಿನ ಮಿನುಗುಗಳು.

ಎಷ್ಟು ಹೊತ್ತಾದರೂ ಅಕ್ಕಪಕ್ಕದಲ್ಲಿದ್ದವರೊಂದಿಗೆ ಒಂದೂ ಮಾತನಾಡದೆ, ಬಂಡೆಯ ಮೇಲಿನ ಮತ್ತೊಂದು ಬಂಡೆಯಂತೆ ಕುಳಿತ ಅಣ್ಣನನ್ನು ಮಾತನಾಡಿಸಲೂ ಪರಶುರಾಮ ನಾಯಕನಿಗೆ ಧೈರ್ಯವಾಗಲಿಲ್ಲ. ಅಷ್ಟು ದೂರದಲ್ಲಿ ನಿಂತಿದ್ದ ಅಂಗರಕ್ಷಕರೂ ಗಟ್ಟಿಯಾಗಿ ಉಸಿರುಬಿಡದೆ ನಿಂತಿದ್ದರು. ತಮಗೂ ಉಸಿರಾಡಲು ತ್ರಾಣವಿಲ್ಲದವರಂತೆ.

ಹಾಗೆ ಮೌನವಾಗಿ ಎಷ್ಟೋ ಹೊತ್ತು ಕುಳಿತ ಬಳಿಕ, ಪರಶುರಾಮನಾಯಕನೇ ಧೈರ್ಯ ತಂದುಕೊಂಡು –

"ಆ ಸಣ್ಣ ಮಾತು - ಇನ್ನೆಷ್ಟು ಹೊತ್ತು ಅದರ ಯೋಚನೆ ಮಾಡುತ್ತೀರಿ, ಅಣ್ಣ. ಮರೆತುಬಿಡಿ. ಹೊತ್ತು ಸಾಕಷ್ಟಾಯಿತು"

- ಎಂದು ತಗ್ಗಿದ ಧ್ವನಿಯಲ್ಲಿ ಹೇಳಿದ.

"ಸಣ್ಣ ಮಾತೇ - ಅದು ಸಣ್ಣ ಮಾತೇ? ನೀನೇ ನಾನಾಗಿ ಯೋಚಿಸಿ ಹೇಳು, ಪರಶುರಾಮಣ್ಣ. ಆ ತಾಯಿ ಆಡಿದ್ದು ಸಣ್ಣ ಮಾತೇ? ಜ್ಞಾಪಿಸಿಕೋ - ಆ ಮಾತಿನ ಹಿಂದಿನ ನೋವನ್ನು, ನೆನಪಿದೆಯೋ ಅಥವಾ ಮಾಮೂಲಿ ಎಂದು ಮರೆತುಬಿಟ್ಟೆಯೋ? ನಾನಂತೂ ಮರೆಯಲಾರೆ ಆ ಮಾತನ್ನು"

- ಕರುಳನ್ನು ಕಿತ್ತು ಎಳೆಎಳೆಯಾಗಿ ಹಿಂಜಿದಂತೆ ಹೇಳಿದ ಮದಕರಿನಾಯಕ.

ಆ ಮಾತು-

ಅದನ್ನು ಪರಶುರಾಮನಾಯಕನೂ ಮರೆತಿರಲಿಲ್ಲ.

ಆ ದಿನ ಸಂಜೆ -

ಕತ್ತಲು ಕವಿದ ಬಳಿಕ ಮದಕರಿನಾಯಕ ತನ್ನ ತಮ್ಮನೊಂದಿಗೆ, ಸಾಮಾನ್ಯ ಜನರ ಸ್ಥಿತಿಗತಿಯನ್ನರಿಯಲು, ಸಾಮಾನ್ಯರ ಉಡುಪು ತೊಟ್ಟು, ಮನೆಗಳಿಗಿಂತ ಹೆಚ್ಚಾಗಿ ಮನೆಗಳ ಪಾಳುಗಳೇ ತುಂಬಿದ್ದ ಬುರುಜಿನ ಹಟ್ಟಿಯ ಒಳಗೇರಿಯ ಮನೆಯೊಂದರ ಮುಂದೆ ಹೋಗುತ್ತಿದ್ದಾಗ ಮಂಕುದೀಪ ಉರಿಯುತ್ತಿದ್ದ ಮನೆಯೊಂದರಿಂದ ಕೋಪಗೊಂಡ ಹೆಣ್ಣೊಬ್ಬಳು

"ನನ್ಯಾಕೆ ಹೊಡೀತೀಯೋ ಕೊಬ್ಬಿದೋನೆ. ನಾನೇನು ಬೇಕಂತ ನಿನಗೆ ಮುಗ್ಗಲು ರಾಗಿ ಗಂಜಿ ಹಾಕಿದ್ನಾ. ನಿಮ್ಮ ದೊರೆ ಕೊಟ್ಟದ್ದು - ಮಾಡಿ ಹಾಕಿದೆ. ಬ್ಯಾಡಾಂದ್ರೆ ಸಣ್ಣಕ್ಕಿ ಅನ್ನ, ಬೆಣ್ಣೆ ಕಾಯಿಸಿದ ತುಪ್ಪಾನ ದಿನಾ ತಿಂದು, ನಮಗೆಲ್ಲ ಹೊತ್ತಿಗಿಷ್ಟು ಅಂತ ತೂಕದ ಕೂಳು ಹಾಕ್ತಾನಲ್ಲೋ ನಿಮ್ಮ ಘನಂದಾರಿ ಪಾಳೆಗಾರ-ಅವ್ನ ಕೇಳು-ನನ್ನ ಮನೆಗ್ಯಾಕೆ ಇಂಥ ಮುಗ್ಗಲು ರಾಗಿ ಕೊಟ್ಟೇಂತ. ಮಕ್ಕಳು ಮರೀಗೆ ಗೆಡ್ಡೆ ಬೇಯಿಸಿಕೊಟ್ಟು, ನಾನು ಗಂಜಳದಂಥ ತಣ್ಣೀರು ಕುಡ್ದು, ಏನೋ ಲಡಾಯಿಗೆ ಹೋಗೋ ಗಂಡಸು ಅಂತ ಇದ್ದದ್ದು ಮಾಡಿ ಹಾಕಿದರೆ-ನನ್ನೆ ಹೊಡೆಯಾಕೆ ಬರ್ತೀಯಾ. ದನ ತಿನ್ನೋ ಮುದ್ದೆ ನಂಗೆ ಹಾಕ್ತೀಯಾಂತ. ನಿಮ್ಮ ಪಾಳೇಗಾರರ ಅರಮನೇಲಿ ನಾಯಿ ಬೆಕ್ಕಿಗೂ ಇಂಥ ಗಬ್ಬುಕಾಳು ಬೇಯಿಸಿ ಹಾಕೋಲ್ಲ. ನಮಗೆ ಮಾತ್ರ ಇಂಥಾದ್ದು, ಆರು ತಿಂಗಳಾಯ್ತು. ಅಕ್ಕಿ ಮಕ ನೋಡಿ. ನಮ್ಮ ದೊರೆ ಅಂತೋನು - ಇಂತೋನು, ಇಂದ್ರ ಚಂದ್ರನಂತೋನು ಅಂತೀಯಲ್ಲ. ಲಡಾಯಿನಲ್ಲಿ ದುಡಿಯೋ ಜನಕ್ಕೆ ಇಂಥ ಸೆಗಣೀನ ತಿನ್ನೋಕೆ ಕೊಡ್ತಾನಲ್ಲ. ಅನ್ನ ಕೊಡಲಿಕ್ಕಾಗದ ರಾಜ, ಹೆಂಡತೀನ ಹೊಡೆಯೋ ಸರ್ದಾರ. ಚಂದಾಗದೆ. ಈ ರಾಜ್ಯಭಾರ"

- ಎಂದು ಚಾಟಿಯಿಂದ ಹೊಡೆದಂತೆ ಹೇಳಿದ್ದು ಅದಕ್ಕೆ ಉತ್ತರವಾಗಿ ಗಂಡ -

"ನನಗೆ ಬೇಕಾದ್ರೆ ಸೆಗಣಿ ಹಾಕು ತಿನ್ನತೀನಿ. ನಮ್ಮ ದೊರೇನ ಮಾತ್ರ ಬೈಬೇಡ. ಅರಮನೇಲಿ ಅವರೇನು ತಿನ್ತಾರೋ ನೀನು ನೋಡಿದ್ಯಾ? ನನ್ನ ಧಣಿ-ಅವರೆಷ್ಟು ದುಃಖ

ಉಣ್ತಿದಾರೋ ಏನೋ-ಈ ನವಾಬನ ದಾಳೀಲಿ-ಅಂಥ ಮಾರಾಯನ್ನ ಬೈದು ನರಕಕ್ಕೆ ಹೋಗಬೇಡ; ನನ್ನ ಸಾವಿರ ಮಾತು ಅನ್ನು. ಆ ಮಾರಾಯನ ಮಾತೆತ್ತಬೇಡ"

-ಎಂದು ಹೇಳಿದ್ದು, ಅದನ್ನು ಕೇಳಿ -

"ಮಾತೆತ್ತೋದೇನು-ಊರಿಗೇ ಸಾರಿ ಹೊಗಳ್ತೀನಿ. ನಿಮ್ಮ ದೊರೇನ-ಕಾಯಿಲೆ ಬಿದ್ದಿರೋ ಕೂಸಿಗೆ ಗಂಜಿ ಕಾಸಲಿಕ್ಕೆ ಒಂದ್ಹಿಡಿ ಅಕ್ಕಿ ಕೊಡಿಸು ಮತ್ತೆ"

- ಎಂದು ಅವರ ಹೆಂಡತಿ ಹೇಳಿದ್ದು, ಎಲ್ಲವನ್ನೂ ಕೇಳಿಸಿಕೊಂಡ ಮದಕರಿನಾಯಕ ತಗ್ಗಿಸಿದ ತಲೆಯನ್ನು ಎತ್ತದೆ, ಅಲ್ಲಿಂದ ಮುಂದೆ ನಡೆದು, ದಿಕ್ಕುಕಾಣದವನಂತೆ ಎತ್ತೆತ್ತಲೋ ಸುತ್ತಿ, ಕೊನೆಗೆ ಬಂದು, ಹಿಡಿಂಬೇಶ್ವರನ ಗುಡಿಯ ಬತೇರಿಯನ್ನು ಹತ್ತಿ ಕುಳಿತುಬಿಟ್ಟದ್ದ-ದುರ್ಗವನ್ನೇ ನೋಡುತ್ತಾ.

ದುರ್ಗದ ಮನೆಗಳಲ್ಲಿ ಉರಿಯುತ್ತಿದ್ದ ಒಂದೊಂದು ದೀಪವೂ ಆ ಮಾತನ್ನೇ ಆತನಿಗೆ ತಿವಿದು ಹೇಳುವಂತಿತ್ತು.

ಆ ಮಾತುಗಳನ್ನು ನೆನಪಿಸಿಕೊಳ್ಳುತ್ತಲೇ ಹೇಳಿದ, ಮದಕರಿನಾಯಕ.

"ನಾನು ಆ ಮಾತನ್ನು ಮರೆಯಲಾರೆ, ಪರಶುರಾಮಣ್ಣ. ಮರೆತರೆ ನಾನು ದೊರೆಯೂ ಅಲ್ಲ, ಮನುಷ್ಯನೂ ಅಲ್ಲ. ಏನು ಕಷ್ಟ ತಂದುಬಿಟ್ಟಿತು-ಈ ಯುದ್ಧ, ನಮ್ಮ ಜನಕ್ಕೆ"

ದುಃಖ ಕುದಿಯುತ್ತಿದ್ದ ಆ ಮಾತುಗಳನ್ನು ಕೇಳಿ ಪರಶುರಾಮನಾಯಕ, ಮುಂದೆ ಮಾತನಾಡಲಾಗದೆ ಸುಮ್ಮನಾದ.

ಎಲ್ಲರೂ ಹಾಗೆ ನಿಶ್ಯಬ್ದವಾಗಿ ಕುಳಿತಾಗ, ಕೆಳಗೆ ಕೋಟೆಯೊಳಗೆಲ್ಲೋ ಸೈನಿಕರು ಕೋಲುಹಾಕುತ್ತಾ ಹಾಡುವ ಹಾಡು, ಗಾಳಿಯಲ್ಲಿ ನಿಧಾನವಾಗಿ ತೇಲಿಬಂತು.

ಇನ್ನಿಂಥ ಮದುವೆ ಈ ಭೂಮಿ ಕಾಣಲಿಲ್ಲ
ಮೂಲೋಕದೊಡೆಯ ಮಾದೇವನೂ ನೋಡಿ ಬೆರಗಾದನಲ್ಲ ॥
ಹಾದಿಬೀದಿಗೆಲ್ಲ ಬಾಳೆ ಸಿಂಗಾರ ಹೂವಿನಾ ಚಪ್ಪರಾ
ಮನೆಯ ಮನೆಯ ಬಾಗಿಲಿಗು ಗಂಧದೆಣ್ಣೆಯ ದೀಪ ಶೃಂಗಾರ ।
ಆರತಿಯ ಹಿಡಿದ ನಾರಿಯರ ಸೌಂದರ್ಯ ವಯ್ಯಾರ
ಗರಿಬಿಚ್ಚಿದ್ಹಾಂಗೆ ನವಿಲು, ರಂಭೆ ಊರ್ವಸಿಯ ಪರಿವಾರ ॥
ಉಣ್ಣೋಕೆ ಸಣ್ಣಕ್ಕಿ ಕುಡಿಯೋಕೆ ನೊರೆಹಾಲು
ಮಲಗೋಕೆ ಪಲ್ಲಂಗ ಮನೆಮಂದಿಗೆಲ್ಲ ।
ಮಾರಾಯ ಮದಕರಿಯ ಮದುವೆಯ ಕೀರುತಿ
ಕಸ್ತೂರಿ ಹಂಗೆ ಹರಡೀತು ಲೋಕಕೆಲ್ಲ ॥
ಮಲ್ಲಿಗೆ ಹೂವಂಥ ಹಾಲನ್ನ, ಜೇನಂಥ ಕಜ್ಜಾಯವನ್ನ
ನೀಡೋಕೆ ನೀರೆಯರು ಬಡಿಸೋಕೆ ಹೊನ್ನ ಹರಿವಾಣ ।

ಕೈ ತೊಳೆಯೋಕೆ ಪನ್ನೀರು ವರಸೋಕೆ ಪಟ್ಟವಸ್ತ್ರ
ಚಿಗುರೆಲೆಯ ವೀಳ್ಯ, ಗಂಧ, ಮೇಲೆ ಕೈಗಿಷ್ಟು ಗದ್ಯಾಣ ॥

ಸೈನಿಕರು ನಿಧಾನವಾಗಿ ಕೋಲು ಹಾಕುತ್ತಾ, ಉತ್ಸಾಹ ಏರಿದಂತೆ ಧ್ವನಿಯನ್ನು ಎತ್ತರಿಸುತ್ತಾ ಹಾಡುತ್ತಿದ್ದರು– ಯಾರೋ ಮದಕರಿನಾಯಕನ ಮದುವೆಯ ಸಮಯದಲ್ಲಿ ಕಟ್ಟಿದ ಹಾಡನ್ನು.

ಹಾಡುವವರಿಗೆ ಹಾಲಾಗಿದ್ದ ಹಾಡು, ಕೇಳುವ ಕಿವಿಗೆ ಹಾಲಾಹಲವಾಗಿ, ಮದಕರಿನಾಯಕ ಉರಿಸೋಕಿದಂತೆ ಸಿಡಿದೆದ್ದು, ಸರಸರನೆ ಅರಮನೆಯತ್ತ ನಡೆದ. ಬೆನ್ನ ಹಿಂದೆ ಕೇಳಿಬರುತ್ತಿದ್ದ ಹಾಡಿನ ಸ್ವರದಿಂದ ತಪ್ಪಿಸಿಕೊಂಡು ಓಡುವವನಂತೆ, ತನ್ನ ಬೆನ್ನ ಹಿಂದೆ ಧಾವಿಸುತ್ತಿದ್ದ ತಮ್ಮ ಪರಶುರಾಮನಾಯಕ, ಅಂಗರಕ್ಷಕರು, ಯಾರದೂ ಪರಿವೆಯಿಲ್ಲದಂತೆ.

ಹಿಂದೆ ಬಂದ ತಮ್ಮನಿಗೆ "ಇರುತ್ತೀಯಾ" ಎಂದು ಕೇಳದೆ, "ಹೋಗು" ಎಂದು ಹೇಳದೆ, ಯಾರೋ ಅಟ್ಟಿಸಿಕೊಂಡು ಬಂದಂತೆ, ಬೆನ್ನಮೇಲೆ ಬೆಟ್ಟಹೊತ್ತವನಂತೆ ಮುಖದ ಮೇಲೆ ದುಗುಡ ಕಟ್ಟಿಕೊಂಡು ಬಂದ ಮಗನನ್ನು ನೋಡಿ, ಆತನಿಗಾಗಿ ಕಾಯುತ್ತಿದ್ದ ನಿಂಗವ್ವ –

"ಇದೇನಪ್ಪಯ್ಯ ಹೀಗಿದೀಯ? ಏನಾದರೂ ಆಗಬಾರದ್ದಾಯಿತೇ?"

–ಎಂದು ಆತಂಕದಿಂದ ಕೇಳಿದಳು.

"ಆಗಬಾರದ್ದು ಏನೂ ಆಗಲಿಲ್ಲ. ಆಗಬೇಕಾದದ್ದೂ ಏನಾಗಲಿಲ್ಲ ಅವ್ವ"

– ಮಾತನಾಡಲು ಮನಸ್ಸೇ ಇಲ್ಲದವನಂತೆ ಮಗ ಉತ್ತರ ಕೊಟ್ಟುದನ್ನು ಕೇಳಿ, ನೊಂದು –

"ಈ ಹಾಳು ಶನಿಕಾಟ ಯಾವತ್ತು ತಪ್ಪುತ್ತದೆಯೋ. ಏನಾದರಾಗಲಿ, ಬಾಳ ಹೊತ್ತಾಯಿತು. ಕೈಕಾಲು ತೊಳೆದು ಊಟಕ್ಕೇಳು" ಎಂದು ಹೇಳಿದಳು ನಿಂಗವ್ವ.

ಆಕೆಯ ಮಾತನ್ನು ಕೇಳಿ, ಯಾಂತ್ರಿಕವಾಗಿ ಅಂತಃಪುರಕ್ಕೆ ಹೋಗಿ, ಉಟ್ಟ ಉಡುಗೆಯನ್ನು ಬಿಚ್ಚಿ, ಪರಿಚಾರಕ ಕೊಟ್ಟದ್ದನ್ನು ಧರಿಸಿ, ಕೈಕಾಲು ತೊಳೆದು, ಭೋಜನಶಾಲೆಗೆ ಬಂದು ಊಟಕ್ಕೆ ಕುಳಿತುಕೊಳ್ಳಲಿದ್ದವನು ಹಾಗೇ ನೋಡಿದ –

ಆತನಿಗಾಗಿ ಬೆಳ್ಳಿಯ ಹೂಬಳ್ಳಿಗಳ ಅಂಚಿದ್ದ ಕರಿಮರದ ಮಣೆ, ಅದರ ಮುಂದೆ ವಿಶಾಲವಾದ ಬೆಳ್ಳಿಯ ಅಡ್ಡಣಿಗೆಯ ಮೇಲೆ ಹೊಳೆವ ಹೊನ್ನ ಹರಿವಾಣ, ಅದರಲ್ಲಿ ಬಡಿಸಿದ ಬಿಸಿಯಾಗಿ ಹೊಗೆಯಾಡುತ್ತಿದ್ದ ಪಲ್ಯಗಳು, ಖಾರದಪುಡಿಗಳು, ಉಪ್ಪಿನಕಾಯಿ, ಮೇಲೆ ಬಡಿಸಿದ ತುಪ್ಪದ ನರುಗಂಪು ಸೂಸುವ ಮಲ್ಲಿಗೆಯ ಮೊಗ್ಗಿನ ರಾಶಿಯಂತಿದ್ದ ಅನ್ನ, ಮಣೆಯ ಪಕ್ಕದಲ್ಲಿಟ್ಟ ನೀರಿನ ತಂಬಿಗೆ, ಬಟ್ಟಲು ಎಲ್ಲವನ್ನೂ ಹಿಂದೆಂದೂ ನೋಡದವನಂತೆ ನೋಡಿ, ಹೊಟ್ಟೆಯಲ್ಲೇನೋ ತೊಳಸಿಕೊಂಡು ಬಂದಂತಾಗಿ, ಹತ್ತಿರದಲ್ಲಿದ್ದ ದಾಸಿಗೆ –

"ಇದನ್ನೆಲ್ಲಾ ತೆಗೆದುಬಿಡು" ಎಂದು ಹೇಳಿದ.

"ಏನಪ್ಪಯ್ಯಾ, ಊಟ ಬೇಡವೇ? ಫಲಾಹಾರ ಮಾಡುತ್ತೀಯ"

- ಮಗನ ಊಟದ ಉಸ್ತುವಾರಿ ನೋಡಿಕೊಳ್ಳಲು ನಿಂತ ನಿಂಗವ್ವ ಕೇಳಿದಳು.

"ಅದೇನೂ ಇಲ್ಲ ಅವ್ವ. ಇದನ್ನೆಲ್ಲಾ ತೆಗೆಸಿಬಿಡು. ಇಲ್ಲಿ ಕಂಚಿನ ತಣಿಗೆ ಇಲ್ಲವೇ? ಇದ್ದರೆ ತರಿಸು. ಹಾಗೇ ಅವ್ವಾ ನೀನು ಊಟಕ್ಕೆ ಮಾಡಿಕೊಂಡ ಮುದ್ದೆ ಇದೆಯಾ?"

- ಎಂದು ಕೇಳಿದ ಮದಕರಿನಾಯಕ

"ಕಂಚಿನ ತಣಿಗೆಯೇನೋ ಇದೆ. ಈಗ್ಯಾಕೆ ಅದರ ನೆನಪಾಯಿತು ಅಪ್ಪಯ್ಯಾ?"

"ಅವ್ವಾ, ಎಲ್ಲಕ್ಕೂ ಏಕೆ ಏಕೆ ಎಂದು ಕೇಳಬೇಡ. ಇದ್ದರೆ ತಂದು ಇಡಿಸು. ಮುದ್ದೆ ಇದ್ದರೆ ಹಾಕಿಸು"

- ಕೊಂಚ ಒರಟಾಗಿ ಹೇಳಿದ ಮದಕರಿನಾಯಕ.

"ಇಷ್ಟು ಹೊತ್ತಿನಲ್ಲಿ ಮುದ್ದೆ ಎಲ್ಲಿರುತ್ತೆ ಅಪ್ಪಯ್ಯಾ? ಅರಮನೆಯಲ್ಲಿ ಮುದ್ದೆ ತಿನ್ನುವವರು ಯಾರು? ನಾನೇನೋ ಅಕ್ಕಿ ತಿಂದರೆ ವಾಯು ಅಂತ ಮುದ್ದೆ ಮಾಡಿಸ್ಕೋತೀನಿ"

"ಅದೇನೂ ಮಿಕ್ಕಿಲ್ಲವೇ?"

"ಇದ್ದರೂ ತಣ್ಣಗಾಗಿ ಕಲ್ಲಾಗಿರಬೇಕು"

"ಕಲ್ಲೋ ಮುಳ್ಳೋ, ಇದ್ದರೆ ತಂದು ಅದನ್ನೇ ಬಡಿಸು"

- ಎಂದು ಹೇಳಿ, ತನಗಾಗಿ ಇರಿಸಿದ ಮಣೆಯನ್ನು ಅತ್ತ ಕಾಲಿನಿಂದ ದಬ್ಬಿ, ನೆಲದ ಮೇಲೆ ಕುಳಿತು ಹೇಳಿದ, ಮದಕರಿನಾಯಕ.

"ಇವತ್ತು ಯಾಕೋ ವಿಚಿತ್ರವಾಗಿ ಆಡ್ತೀಯ ಅಪ್ಪಯ್ಯ. ನಿನಗೆ ಹೇಗೆ ಪ್ರೀತಿಯೋ ಹಾಗೆ ಮಾಡು"

- ಎಂದಷ್ಟೇ ಹೇಳಿ, ನಿಂಗವ್ವ ದಾಸಿಯರಿಗೆ ಹೇಳಿ, ಕಂಚಿನ ತಣಿಗೆಯನ್ನು ತರಿಸಿ, ತನಗಾಗಿ ಮಾಡಿಕೊಂಡು ಉಳಿದಿದ್ದ ಮುದ್ದೆಯನ್ನು ಹಾಕಿ "ತುಪ್ಪ ಬಿಸಿಮಾಡಿ ತರ್ತೀನಿ" ಎಂದಳು -

"ತುಪ್ಪ, ಮೇಲೋಗರ ಅದ್ಯಾವುದೂ ಬೇಡ ಅವ್ವಾ. ಇದ್ದದ್ದು ಎಸರೋ, ಚಟ್ನಿಯೋ ಏನಿದ್ದರೂ ಕೊಡು. ಇಲ್ಲದಿದ್ದರೆ ಒಂದು ಹಸಿಮೆಣಸಿಕಾಯಿ ಕೊಡು. ನನಗಷ್ಟೇ ಸಾಕು"

ಎಂದ ಮದಕರಿನಾಯಕ.

ಈ ಮಾತು ಕೇಳಿದ ನಿಂಗವ್ವನ ಕಣ್ಣಲ್ಲಿ ತಟಕ್ಕನೆ ನೀರು ತುಂಬಿ -

"ಊಟ ಬೇಸರ ಆಗೋ ಅಂಥ ಕೆಲಸ ಏನಾಯಿತು ಹೇಳು. ಹೇಳದಿದ್ದರೆ ಏಕನಾಥಮ್ಮನವರ ಆಣೆ"

ಎಂದಳು ಆರಿದ ಮುದ್ದೆಯನ್ನು ಮುರಿಯುತ್ತಿದ್ದ ಮಗನ ಕೈಹಿಡಿದು.

"ಏನು ಮುಖ ಇಟ್ಟುಕೊಂಡು ಹೇಳಲಿ ಅವ್ವಾ. ಊರಲ್ಲಿ ಜನ ಮುಗ್ಗಿದ ರಾಗಿ, ಅಂಬಲಿ ತಿನ್ನೋ ಕಾಲ ಬಂತು. ನಿನ್ನ ಮಗ ರಾಜನಾಗಿ, ಖಾಯಿಲೆ ಬಿದ್ದ ಮಕ್ಕಳಿಗೆ ಗಂಜಿ ಕಾಸೋಕೂ ಸಲೀಸಾಗಿ ಅಕ್ಕಿ ಸಿಗ್ತಾ ಇಲ್ಲ. ನನ್ನ ಅರಸನನ್ನಾಗಿ ಮೆರೆಸಿದ ಜನ ತೂಕದ ಊಟ ಮಾಡುವ ಕಾಲ ತಂದುಬಿಟ್ಟೆ. ನಾನು ಯಾವ ಜನ್ಮದಲ್ಲಿ ಪಾಪಮಾಡಿ, ಇಂಥ ದೊರೆಯಾಗಿ ಹುಟ್ಟಿದೆ, ಅವ್ವಾ"

– ಎಂದು ಅದುವರೆಗೂ ತಡೆದ ಕಂಬನಿಯನ್ನು ಹರಿಯಬಿಟ್ಟು ಗದ್ಗದಕಂಠದಿಂದ ಹೇಳಿದ ಮದಕರಿನಾಯಕ.

ಆ ಮಾತಿಗೆ ನಿಂಗವ್ವ ಕೂಡಲೇ ಏನೂ ಉತ್ತರ ಕೊಡಲಿಲ್ಲ.

ಮಾತಿಗೆ ತಣಿಯದ ದುಃಖದ ನೆರೆ ತನ್ನಷ್ಟಕ್ಕೆ ತಾನೇ ಇಳಿದುಹೋಗಲಿ ಎಂದು ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ –

"ಅಪ್ಪಯ್ಯಾ, ಇವತ್ತು ನೀನೇನು ನೋಡಿದೆಯೋ, ಏನು ಕೇಳಿದೆಯೋ ನನಗೆ ಗೊತ್ತಿಲ್ಲ. ಆದರೆ ಜನರ ಕಷ್ಟ ಹೆಚ್ಚಿದೆ ಅಂತ ನಾನೂ ಕೇಳಿದೇನೆ. ಈಗೆರಡು ದಿನದ ಹಿಂದೆ ಅಮ್ಮನವರ ದೇವಸ್ಥಾನದಲ್ಲಿ ಎಡೆಗೆ ಮುಗ್ಗಲು ಅಕ್ಕಿ ಅನ್ನ ಮಾಡಿದ್ದರು. ಕೇಳಿದ್ದಕ್ಕೆ ಎಲ್ಲರಿಗೂ ಇದೇ ಕೊಡೋದು ಅಂತ ಅರ್ಚಕರು ಹೇಳಿದರು. ದೇವರಿಗೆ ಅಂಥ ಎಡೆ ಇಡಬೇಡಿ. ಅರಮನೆಯಿಂದ ಅಕ್ಕಿ ಕಳಿಸುತ್ತೀವಿ ಅಂತ ಹೇಳಿಬಂದೆ. ಆವತ್ತು ನನಗೂ ತಿಂದ ಅನ್ನ ಗಂಟಲಲ್ಲಿ ಇಳಿಯಲಿಲ್ಲ. ಕುಡಿದ ನೀರೂ ಕಹಿಯಾಯಿತು. ಆದರೆ ಏನು ಮಾಡ್ತಿ ಅಪ್ಪಯ್ಯಾ. ಯುದ್ಧ, ಬರಗಾಲ ಅಂದ್ರೆ ಇದೆಲ್ಲಾ ಆಗಬೇಕಾದದ್ದೆ. ನಾನೂ ಬರಗಾಲದಲ್ಲಿ ಜನ ಕತ್ತಾಳಿಗಡ್ಡೆ ಬೇಯಿಸಿಕೊಂಡು ತಿಂದು, ಹುಣಸೇಬೀಜದ ಅಂಬಲಿ ಕುಡಿದದ್ದನ್ನು ಕೇಳಿದೀನಿ. ಆದ್ರೆ ಏನು ಮಾಡ್ತೀಯಾ. ನೀನು ಬಾ ಅನ್ನಲಿಲ್ಲ. ಆದರೂ ಯುದ್ಧ ಬಂತು. ಅದೂ ಅಷ್ಟು ಇಷ್ಟಕ್ಕೆ ಮುಗಿತೇ? ಏಳೆಂಟು ತಿಂಗಳಾಯ್ತು. ಇನ್ನೂ ಸಾಲ ಕೊಟ್ಟೋನ ಹಾಗೆ ಕೂತೇ ಇದ್ದಾನೆ ಮನೆಬಾಗಿಲಿನಲ್ಲಿ. ಈ ಯುದ್ಧ ಮುಗೀಬೇಕು; ಜನಕ್ಕೆ ಬಂದಿರೋ ಕಷ್ಟ ತೀರಬೇಕು. ಅದುವರೆಗೂ ಅತ್ತೋರು ಅಳಲೇಬೇಕು, ಸತ್ತೋರು ಸಾಯಲೇ ಬೇಕು. ಬೇಡಾಂದ್ರೆ ಬಿಡುತ್ತೆಯೇ"

– ದುಃಖೋದ್ರಿಕ್ತನಾದ ಮಗನಿಗೆ ಸಮಾಧಾನದ ಮಾತು ಹೇಳಿದಳು ನಿಂಗವ್ವ.

"ಹಾಗಂತ ಜನ ಹೆಣವಾಗಲಿ, ಊರು ಸ್ಮಶಾನವಾಗಲಿ, ನಾನು ಮಾತ್ರ ಧಿಮ್ಮಾಲೆರಂಗ ಅಂತ ಬಿಗಿದುಕೊಂಡು, ಸಿಂಹಾಸನದ ಮೇಲೆ ಕಲ್ಲಿನಗೊಂಬೆ ಹಾಗೆ ಕೂತಿರಬೇಕೇ?"

"ನೀನು ಹಾಗೆ ಮಾಡಿದೀಯಾ. ಅಪ್ಪಯ್ಯಾ? ರಾಜ ಅಂತ ನೀನು ಬೇರೆಯೋರ ಹಾಗೆ ಆಳನ್ನ ಯುದ್ಧಕ್ಕೆ ಬಿಟ್ಟು, ಸುಪ್ಪತ್ತಿಗೆ ಮೇಲೆ ಮಲಗ್ತಾ ಇಲ್ಲವಲ್ಲ. ಎಲ್ಲರ ಹಾಗೆ ನೀನೂ ಕತ್ತಿಗೆ ದಿನವೂ ತಲೆಕೊಡುತ್ತಾನೇ ಇದೀಯಾ. ನಿನ್ನ ಹೆಂಡತಿಯರು ದಿನಾ ಬೆಳಗಾಗೆದ್ದು ತಾಳಿ ಉಳಿಸಿಕೊಡು ಅಂತ ದೇವರನ್ನು ಬೇಡಿಕೋತಾರೆ. ನೀನು ಅರಮನೆ ಬಿಟ್ಟು ಹೋದರೆ,

ಮತ್ತೆ ಮನೆಗೆ ಬರೋವರೆಗೂ ತೋಪಿನ ಶಬ್ದ, ಕೋವಿ ಶಬ್ದ ಕೇಳಿದಾಗಲೆಲ್ಲಾ ನಮಗೂ ಪ್ರಾಣ ಮೂಗಿನ ತುದೀಲಿ ಬಂದು ಕೂತಿರ್ತದೆ. ದಿನ ಬೆಳಗಾದರೆ ಊರ ದೇವರಿಗೆಲ್ಲಾ ಹರಸಿಕೊಳ್ತೀವಿ. ನಿನ್ನ ಹೆಂಡಿರು ಎಷ್ಟು ವ್ರತ, ನೇಮ ಮಾಡ್ತಾ ಇದಾರೆ ಅಂತ ನೋಡಿದೀಯಾ. ಕೇಳಿದೀಯಾ? ಅವರೂ ಅಳ್ತಾರೆ. ಅವರಿಗೂ ಹೇಳ್ತೀನಿ. ಅವ್ವಾ, ಕಿರೀಟ ಇಟ್ಟುಕೊಂಡೋನ್ನ ಕೈಹಿಡಿದೋರು ಕದನ ಬಂತೂಂತ ಕಣ್ಣೀರು ಹಾಕಬಾರದು ನಗುನಗುತಾ ಕೆಂಡಕ್ಕೋ, ಹೊಂಡಕ್ಕೊ ಬೀಳೋಕೆ ಸಿದ್ಧವಾಗಿರಬೇಕು- ಅರಿಶಿನ ಕುಂಕುಮದ ಬಟ್ಟಲು ಕೈಲಿ ಹಿಡಿದುಕೊಂಡು ಅಂತ. ಗಂಡ ದೊರೆಯಾಗಬೇಕು. ಗಂಡಾಂತರ ನಮಗೆ ಬೇಡಾಂದ್ರೆ ಆಗ್ತದಾ? ಹುಟ್ಟಿದೋನು, ಒಂದು ದಿನ ಸಾಯಬೇಕು. ಹಾಗೇ ಬದುಕಿರೋವರೆಗೂ ಹುಟ್ಟಿಗೆ ತಕ್ಕ ಹಾಗೆ ಬದುಕಬೇಕು. ಇದಿಷ್ಟೇ ಕಣಪ್ಪಯ್ಯ. ನಾನಿಷ್ಟು ವರ್ಷ ಬದುಕಿ ಕಲಿತದ್ದು, ಅರಸಾದೋನು ಆಳಬೇಕು, ಅಳಬಾರದು. ಅಳೋ ಸಮಯ ಬಂದರೂ ಅದು ಮನಸ್ಸಿನಾಗಿರಬೇಕು. ಕಣ್ಣಲ್ಲಿ, ಮೊಕದಲ್ಲಿ ಕಾಣಬಾರದು. ನೀನು ಎದೆಗೆಟ್ಟು ಬಿಟ್ಟರೆ ದೇಶದ ಬೆನ್ನೆಲುಬೇ ಮುರಿದುಹೋಗುತ್ತೆ. ಅಪ್ಪಯ್ಯ. ಯುದ್ಧದಲ್ಲಿ ಗೆಲ್ಲೋ ಯೋಚನೆ ಮಾಡು. ಅದಕ್ಕೆ ತಲೆತಪ್ಪಿಸಿಕೋಬೇಡ. ಬೇರೆ ಚಿಲ್ಲರೆ ಮಾತಿಗೆಲ್ಲಾ ಮನಸ್ಸು ಸೋಲಲಿಕ್ಕೆ ಬಿಡಬೇಡ. ಮನಸ್ಸಿಗೇನೂ ತಿಳ್ಕೋಬೇಡ. ನಾನ್ಯಾವತ್ತೂ ಇಷ್ಟು ಮಾತಾಡಿರಲಿಲ್ಲ. ಇವತ್ತು ನಿನ್ನ ದುಃಖ ನೋಡಿ ತಡೀಲಿಲ್ಲ. ಆಡಿಬಿಟ್ಟೆ"

- ಎಂದ ನಿಂಗವ್ವ, ಮದಕರಿನಾಯಕನಿಗೆ ಸಮಾಧಾನ ಹೇಳುವುದಕ್ಕಿಂತ ಹೆಚ್ಚಾಗಿ, ತನ್ನ ಹೃದಯವನ್ನೇ ಹಗುರ ಮಾಡಿಕೊಂಡಳು.

ಆಕೆಯ ಮಾತನ್ನು ಹಾಗೆಯೇ ಕೇಳಿದ ಮದಕರಿನಾಯಕ.

ಆಕೆಯ ಮಾತಿನೊಂದಿಗೆ -

ಹಿಂದೆ ಓಬವ್ವನಾಗತಿ ಹೇಳಿದ, ನರಸಪ್ಪಯ್ಯ ಹೇಳಿದ ಮಾತುಗಳು ನೆನಪಾದವು.

ಸಂದರ್ಭ ಬೇರೆ; ಮಾತು ಬೇರೆ; ಅರ್ಥ ಒಂದೇ -

'ಅರಸಾದವನ ಹೃದಯ ಉಕ್ಕಾಗಿರಬೇಕು'

"ಆಯಿತು ಅವ್ವಾ. ಏನೋ ಮಾತು ಕೇಳಿ ಸಂಕಟ ಆಯಿತು. ಇನ್ನು ಯಾರ ಮುಂದೆ ಹೇಳಿಕೊಳ್ಳಲಿ? ನಿನ್ನ ಮುಂದೆ ಹೇಳಿಕೊಂಡೆ. ಎಷ್ಟೋ ಸಮಾಧಾನ ಆಯ್ತು"

ಎಂದು ಭಾರವಿಳಿದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ನನ್ನ ಮಾತು ಕೇಳಿ ನಿನಗೆ ಸಮಾಧಾನ ಆಯ್ತು ಅಪ್ಪಯ್ಯ. ಆದರೆ ನೀನು ಸಮಾಧಾನ ಮಾಡಬೇಕಾದೋರು ಇದ್ದಾರೆ"

"ಯಾರು?"

"ನಿನ್ನ ಹೆಂಡಂದಿರು. ನೀನು ಕಟ್ಟಿಕೊಂಡ ಹೆಂಗಸರು. ನಿನ್ನ ಚಿಂತೇಲಿ ಅವರನ್ನು ಅಯ್ಯೋ ಅನ್ನಿಸಬೇಡ. ಹಗಲಾಗಿ ನೀನು ಅರಮನೆ ಬಿಟ್ಟು ಹೋಗುತ್ತಿದ್ದ ಹಾಗೇ ಮತ್ತೆ

ನಿನ್ನ ಮುಖ ನೋಡ್ತೀವಾಂತ ಮೈಯೆಲ್ಲಾ ಕಣ್ಣಾಗಿ ಕಾದಿರುತ್ತವೆ ಆ ಜೀವಗಳು. ಅವರಿಗೆ ನೀನಲ್ಲದೆ ಬೇರೆ ಯಾರು ಸಮಾಧಾನ ಹೇಳಬೇಕು? ನೀನು ರಾಜ್ಯಾನೂ ಆಳಬೇಕು. ಸಂಸಾರಾನೂ ಆಳಬೇಕು. ಹೋಗಿ ನೋಡು ಅವರು ಮಲಗಿದ್ದಾರೋ, ಎದ್ದಿದ್ದಾರೋ. ಅಲ್ಲಿಗೂ ದುಮುಗುಟ್ಟುತ್ತಾ ಅಮ್ಮ ಮೈಮೇಲೆ ಬಂದವರ ಹಾಗೆ ಹೋಗಬೇಡ"

– ಎಂದು ಹೇಳಿದಳು ನಿಂಗವ್ವ.

"ಅಂತೂ ಇಷ್ಟು ವಯಸ್ಸಾದರೂ ಇನ್ನೂ ನಾನು ನಿನಗೆ ಹುಡುಗನಾಗಿಯೇ ಕಾಣ್ತೀದೀನಿ ಅಲ್ಲವೇ ಅವ್ವಾ? ಎಲ್ಲಾ ನೀನು ಹೇಳಿಕೊಡಬೇಕು"

"ಹೇಳಿಕೊಡೋದೇನೂ ಇಲ್ಲ ಅಪ್ಪಯ್ಯ. ಮರೆತ ಮಾತು ಜ್ಞಾಪಿಸೋದಷ್ಟೇ ನನ್ನ ಕೆಲಸ"

"ಆಯಿತು ಅವ್ವಾ, ನೀನು ಜ್ಞಾಪಿಸಿದ ಮಾತನ್ನು ಮರೆಯುವುದಿಲ್ಲ"

– ಎಂದು ಹೇಳಿ ಮದಕರಿನಾಯಕ ಊಟದ ಶಾಸ್ತ್ರ ಮುಗಿಸಿ ಮೇಲೆದ್ದ.



## ಲೇಖಕರ ಪರಿಚಯ

**ತ.ರಾ.ಸು.** ಅವರ ಪೂರ್ಣ ಹೆಸರು ತಳುಕಿನ ರಾಮಚಂದ್ರಯ್ಯ ಸುಬ್ಬರಾವ್. ೧೯೨೦ ಎಪ್ರಿಲ್ ೨೧ರಂದು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲೂಕಿನ ಮಲೆಬೆನ್ನೂರು ಎಂಬಲ್ಲಿ ರಾಮಚಂದ್ರಯ್ಯ ಮತ್ತು ಸೀತಮ್ಮ ದಂಪತಿಯರ ಪುತ್ರರಾಗಿ ಜನಿಸಿದರು. 'ವಿಶ್ವಕರ್ನಾಟಕ', 'ಪ್ರಜಾವಾಣಿ' ಪತ್ರಿಕೆಗಳ ಉಪಸಂಪಾದಕರಾಗಿಯೂ 'ವಾಹಿನಿ' ಪತ್ರಿಕೆಯ ಸಂಪಾದಕರಾಗಿಯೂ ಅವರು ದುಡಿದಿದ್ದರು. 'ಚೇತನ' ಎಂಬ ಪತ್ರಿಕೆಯನ್ನು ಅವರು ಪ್ರಾರಂಭಿಸಿದರು. ಬಿಡುಗಡೆಯ ಬೇಡಿ, ಬೆಂಕಿಯ ಬಲೆ, ಆಕಸ್ಮಿಕ, ಗಾಳಿಮಾತು, ಚಂದವಳ್ಳಿಯ ತೋಟ, ಚಂದನದ ಗೊಂಬೆ, ನಾಗರಹಾವು ಮೊದಲಾದ ಕಾದಂಬರಿಗಳು ಚಲನಚಿತ್ರಗಳಾಗಿ ಪ್ರಸಿದ್ಧವಾಗಿವೆ. ಹಿಂತಿರುಗಿ ನೋಡಿದಾಗ ಎನ್ನುವುದು ಅವರ ಆತ್ಮಚರಿತ್ರೆ. ದುರ್ಗಾಸ್ತಮಾನ, ಶಿಲ್ಪಶ್ರೀ, ಕಂಬನಿಯ ಹುಯಿಲು, ತಿರುಗುಬಾಣ, ಹೊಸಹಗಲು, ವಿಜಯೋತ್ಸವ, ಕಸ್ತೂರಿಕನಕ, ರಾಜ್ಯದಾಹ ಮೊದಲಾದವು ಅವರ ಕೆಲವು ಐತಿಹಾಸಿಕ ಕಾದಂಬರಿಗಳಾಗಿವೆ. ಸುಮಾರು ಐವತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ ತ.ರಾ.ಸು ಐತಿಹಾಸಿಕ ಕಾದಂಬರಿಗಳ ಸಾರ್ವಭೌಮ ಎಂದೇ ಪ್ರಸಿದ್ಧರು. ದುರ್ಗಾಸ್ತಮಾನ ಕಾದಂಬರಿಗೆ ೧೯೮೫ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ೧೯೮೪ ಎಪ್ರಿಲ್ ೧೦ರಂದು ಅವರು ಮರಣಹೊಂದಿದರು.

ಪ್ರಸ್ತುತ ಪಾಠಭಾಗವನ್ನು ಅವರ 'ದುರ್ಗಾಸ್ತಮಾನ' ಕಾದಂಬರಿಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಮದಕರಿನಾಯಕನ ಹೃದಯದಲ್ಲಿ ಕವಿದ ಕತ್ತಲನ್ನು ಅಣಕಿಸುವಂತಿದ್ದುದು ಯಾವುದು?

2 ಒಳಗೇರಿಯ ಹೆಣ್ಣೊಬ್ಬಳು ದೊರೆಯ ಬಗ್ಗೆ ಹೇಳಿದ ಮಾತುಗಳೇನು?

3 ಮದಕರಿನಾಯಕನಿಗಾಗಿ ಅವನ ತಾಯಿ ಸಿದ್ಧಪಡಿಸಿದ ಭೋಜನವನ್ನು ಆತ ನಿರಾಕರಿಸಿದ್ದೇಕೆ?

4 ದುಃಖೋದ್ರಿಕ್ತನಾದ ಮಗನನ್ನು ತಾಯಿ ನಿಂಗವ್ವ ಹೇಗೆ ಸಮಾಧಾನಪಡಿಸಿದಳು?

5. ಯುದ್ಧದಿಂದ ಸಾಮಾನ್ಯ ಪ್ರಜೆಗಳು ಕಂಗೆಡುತ್ತಾರೆ ಎಂಬುದು ಈ ಪಾಠಭಾಗದಲ್ಲಿ ಹೇಗೆ ವ್ಯಕ್ತವಾಗಿದೆ?

## ಲೇಖನ ಬರೆಯಿರಿ

- "ಊರಲ್ಲಿ ಜನ ಮುಗ್ಗಿದ ರಾಗಿ, ಅಂಬಲಿ ತಿನ್ನೋ ಕಾಲ ಬಂತು. ಖಾಯಿಲೆ ಬಿದ್ದ ಮಕ್ಕಳಿಗೆ ಗಂಜಿ ಕಾಸೋಕೂ ಸಲೀಸಾಗಿ ಅಕ್ಕಿ ಸಿಗ್ತಾ ಇಲ್ಲ. ಜನ ತೂಕದ ಊಟ ಮಾಡುವ ಕಾಲ ಬಂತು" – 'ದುರ್ಗದ ದೊರೆ' ಪಾಠದಲ್ಲಿ ಬರುವ ಈ ಸಾಲುಗಳ ಆಧಾರದಲ್ಲಿ 'ಯುದ್ಧದ ದುಷ್ಪರಿಣಾಮಗಳು' ಎಂಬ ವಿಷಯದ ಕುರಿತು ಒಂದು ಲೇಖನ ಬರೆಯಿರಿ.

## ನಾಟಕ ರಚಿಸಿರಿ

- 'ದುರ್ಗದ ದೊರೆ' ಪಾಠವನ್ನು ನಾಟಕವಾಗಿ ರೂಪಾಂತರಿಸಿ ತರಗತಿಯಲ್ಲಿ ಅಭಿನಯಿಸಿರಿ.

## ಪತ್ರ ಬರೆಯಿರಿ

- ನೀವು ಓದಿದ 'ದುರ್ಗದ ದೊರೆ' ಪಾಠಭಾಗದ ಆಶಯವನ್ನು (ಮುಖ್ಯಘಟನೆಗಳನ್ನು) ನಿಮ್ಮ ಮಾತುಗಳಲ್ಲಿ ವಿವರಿಸಿ ಗೆಳೆಯ ಅಥವಾ ಗೆಳತಿಗೆ ಪತ್ರವೊಂದನ್ನು ಬರೆಯಿರಿ.

## ಶಿಷ್ಟರೂಪ ಬರೆಯಿರಿ

- ಪಾಠದಲ್ಲಿ ಬಂದಿರುವ ಗ್ರಾಮ್ಯ ರೂಪದಲ್ಲಿರುವ ವಾಕ್ಯಗಳನ್ನು ಶಿಷ್ಟರೂಪದಲ್ಲಿ ಬರೆಯಿರಿ.

## ವಾಕ್ಯರಚಿಸಿರಿ

ಕೆಳಗೆ ಕೊಡಲಾದ ವಾಕ್ಯಗಳಲ್ಲಿ ಅಡಿಗೆರೆಯೆಳೆದ ಪದಗಳ ವಿಗ್ರಹವಾಕ್ಯ ಬರೆದು ಅವುಗಳಲ್ಲಿ ಕ್ರಿಯಾಸಮಾಸವಾಗುವವುಗಳನ್ನು ಬಳಸಿಕೊಂಡು ಬೇರೆ ವಾಕ್ಯ ತಯಾರಿಸಿರಿ.

- ನವಿಲುಗಳು <u>ಗರಿಬಿಚ್ಚಿ</u> ನರ್ತಿಸುವುದನ್ನು ಕಂಡಾಗ ಪುಳಕಿತನಾದೆನು.
- <u>ಚಿಗುರೆಲೆಗಳನ್ನು</u> ಹೊತ್ತುನಿಂತ ವೃಕ್ಷಗಳು ಶೋಭಾಯಮಾನವಾಗಿದ್ದುವು.

- ಗಂಜಿಕಾಸಲೂ ಗತಿಯಿರದ ವೃದ್ಧೆಯನ್ನು ಕಂಡಾಗ ರಾಮುವಿನ ಹೃದಯ ಕರಗಿತು.
- ಭೋಜನಶಾಲೆಯಿಂದ ಹೊರಹೊಮ್ಮುತ್ತಿದ್ದ ಸುವಾಸನೆ ಮಕ್ಕಳ ಹಸಿವನ್ನು ಮತ್ತಷ್ಟು ಹೆಚ್ಚಿಸಿತು.
- ಸಾವಯವಕೃಷಿಯನ್ನು ಉತ್ತೇಜಿಸುವ ದೃಷ್ಟಿಯಿಂದ ಸರಕಾರ ರೈತರಿಗೆ ಬಡ್ಡಿರಹಿತ ಸಾಲಕೊಡುತ್ತದೆ.

## ನಾಮವಿಶೇಷಣ ಬರೆಯಿರಿ

- ಕೆಳಗೆ ಕೊಡಲಾದ ವಾಕ್ಯಗಳಲ್ಲಿ ಅಡಿಗೆರೆಯೆಳೆದ ಪದಗಳ ನಾಮವಿಶೇಷಣರೂಪಗಳನ್ನು ಉಪಯೋಗಿಸಿಕೊಂಡು ಬೇರೆ ವಾಕ್ಯಗಳನ್ನು ಬರೆಯಿರಿ.

ಉದಾ : 1. ನಮ್ಮ ಸಮಾಜದಲ್ಲಿ ವಿವಿಧ ಮತಧರ್ಮಗಳನ್ನು ಅನುಸರಿಸುವ ಜನರು ಸೌಹಾರ್ದದಿಂದ ಬಾಳುತ್ತಾರೆ.

ನಮ್ಮ ಸಾಮಾಜಿಕ ರೀತಿನೀತಿಗಳು ಗಮನಾರ್ಹವಾದುದು.

2. ತರಗತಿಯಲ್ಲಿ ಇತಿಹಾಸ ಪಾಠನಡೆಯುತ್ತಿತ್ತು.

ದುರ್ಗಾಸ್ತಮಾನ ಒಂದು ಐತಿಹಾಸಿಕ ಕಾದಂಬರಿಯಾಗಿದೆ.

- ಶಾಲೆಯಲ್ಲಿ ವಿದ್ಯಾರ್ಥಿ ಸಂಘದ ಕಾರ್ಯಕ್ರಮ ನಡೆಯಿತು.
- ಭಾರತವು ಹಲವು ಸಂಸ್ಕೃತಿಗಳ ತವರೂರಾಗಿದೆ.
- ದೀನದುರ್ಬಲರಿಗೆ ನೆರವಾಗುವುದು ಮಾನವಧರ್ಮಗಳಲ್ಲಿ ಒಂದಾಗಿದೆ.

## ತದ್ಭವ ಬರೆಯಿರಿ


ಅಡಿಗೆರೆಯೆಳೆದ ಪದಗಳ ತದ್ಭವರೂಪಗಳನ್ನು ಬಳಸಿಕೊಂಡು ಬೇರೊಂದು ಗದ್ಯಭಾಗವನ್ನು ರಚಿಸಿರಿ.

ತಳಿರುತೋರಣಗಳಿಂದ ದೇವಾಲಯ ಶೃಂಗಾರಗೊಂಡಿತ್ತು. ಪ್ರಾಂಗಣ ವಿಸ್ತಾರವಾಗಿತ್ತು. ಸಹಸ್ರಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು. ಹಚ್ಚಿಟ್ಟ ಪ್ರಣತಿಗಳು ಭಕ್ತಿರಸದ ಬೆಳಕನ್ನು ಚೆಲ್ಲುತ್ತಿದ್ದವು.

## ಓದಿನ ಟಿಪ್ಪಣಿ ಬರೆಯಿರಿ

- ತ.ರಾ.ಸು. ಅವರ ಯಾವುದಾದರೊಂದು ಕಾದಂಬರಿಯನ್ನು ಓದಿ ಟಿಪ್ಪಣಿ ಬರೆಯಿರಿ.

ಉದಾಹರಣೆಗೆ : ಚಂದವಳ್ಳಿಯ ತೋಟ, ಹಂಸಗೀತೆ.



# ದಲಿತ ಬಂಧು ಕುದ್ಮಲ್ ರಂಗರಾವ್

– ಲಕ್ಷ್ಮಣ ಕೊಡಸೆ

**ಹ**ತ್ತೊಂಬತ್ತು ಇಪ್ಪತ್ತನೇ ಶತಮಾನದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ದೀನದಲಿತ ವರ್ಗದ ಜನಗಳ ಬದುಕು ಉತ್ತಮವಾಗಲು ಶ್ರಮಿಸಿದ ವಿಭೂತಿ ಪುರುಷರಲ್ಲಿ ಕುದ್ಮಲ್ ರಂಗರಾಯರು ಮುಖ್ಯರಾದವರು. ಅವರು ತಮ್ಮ ಮಾನವೀಯ ಕಾಳಜಿ ಮತ್ತು ವಿಧಾಯಕ ಕಾರ್ಯಗಳಿಂದ ಬೇರೆಯವರಿಗೆ ಪ್ರೇರಕರಾಗಿದ್ದವರು. ಸಮಾಜ ಸೇವೆಯನ್ನು ತಪಸ್ಸಿನಂತೆ ಕೈಗೊಂಡಿದ್ದವರು.

ಸಾರಸ್ವತ ಬ್ರಾಹ್ಮಣ ಸಮಾಜಕ್ಕೆ ಸೇರಿದ್ದ ಅವರು ಕೈಗೊಂಡಿದ್ದ ದಲಿತೋದ್ಧಾರದ ಕಾರ್ಯಗಳು ಮಹಾತ್ಮ ಗಾಂಧೀಜಿ ಅವರಿಗೆ ಪ್ರೇರಣೆ ನೀಡಿದ್ದವು. ೧೯೩೪ರಲ್ಲಿ ಮಂಗಳೂರಿಗೆ ಭೇಟಿ ನೀಡಿದ್ದ ಗಾಂಧೀಜಿ ರಂಗರಾಯರು ಆರಂಭಿಸಿದ್ದ ಶಾಲೆಗಳನ್ನು ನೋಡಿ ದಲಿತರ ಸೇವೆಯ ಕಾರ್ಯವನ್ನು ಕೈಗೊಳ್ಳುವುದಕ್ಕೆ ನನಗೆ ಕುದ್ಮಲ್ ರಂಗರಾಯರು ಗುರುವಾಗಿ ಪ್ರೇರಣೆ ನೀಡಿದ್ದಾರೆ ಎಂದು ಕೃತಜ್ಞತೆಯಿಂದ ಸ್ಮರಿಸಿದ್ದರು.

ದೇಶದಲ್ಲಿ ದಲಿತರ ಏಳಿಗೆಯ ಯಾವ ಚಿಂತನೆಯೂ ಇಲ್ಲದಿದ್ದಾಗ ಅದನ್ನು ಕೈಗೊಂಡು ಸ್ವಜಾತಿಯವರು ಮತ್ತು ಇತರ ಖಂಡನೆ, ಬಹಿಷ್ಕಾರಗಳನ್ನು ಎದುರಿಸಿದ್ದ ಮಹಾಮಾನವ ಕುದ್ಮಲ್ ರಂಗರಾಯರು. ಅವರು ಅಸ್ಪೃಶ್ಯರಿಗಾಗಿ ಮೊದಲ ಶಾಲೆಯನ್ನು ಮಂಗಳೂರಿನ ಚಿಲಿಂಬಿಯಲ್ಲಿ ೧೮೯೭ರಲ್ಲಿ ತೆರೆದಾಗ ಬಾಬಾ ಸಾಹೇಬ್ ಅಂಬೇಡ್ಕರ್ ಒಂದು ವರ್ಷದ ಮಗು. ದಲಿತರನ್ನು ಹರಿಜನರೆಂದು ಕರೆದು ಅಸ್ಪೃಶ್ಯತೆಯ ವಿರುದ್ಧ ಹೋರಾಟವನ್ನು ಆರಂಭಿಸಿದ್ದ ಗಾಂಧೀಜಿ ಆಗಷ್ಟೇ ವಕೀಲಿ ಕಲಿಕೆಯನ್ನು ಮುಗಿಸಿ ಲಂಡನ್‌ನಿಂದ ಭಾರತಕ್ಕೆ ಬಂದಿದ್ದರು. ವಕೀಲಿ ವೃತ್ತಿಯಲ್ಲಿ ನೆಲೆಗೊಳ್ಳಲು ಗುಜರಾತಿನಲ್ಲಿ ಶ್ರಮಿಸುತ್ತಿದ್ದರು. ಭಾರತದ ಸಾಮಾಜಿಕ-ರಾಜಕೀಯ ಕ್ಷೇತ್ರ ಅವರಿಗೆ ಪರಿಚಯವಾಗುವುದಿರಲಿ, ಅವರು ಸಾರ್ವಜನಿಕ ಸೇವಾರಂಗಕ್ಕೆ ಪ್ರವೇಶವನ್ನೂ ಮಾಡಿರಲಿಲ್ಲ. ಅವರು ೨೨ ವರ್ಷಗಳ ಕಾಲ ದಕ್ಷಿಣ ಆಫ್ರಿಕದಲ್ಲಿ ನೆಲೆಸಿ ಭಾರತಕ್ಕೆ ಬಂದು ಸಾರ್ವಜನಿಕ ಸೇವಾ ರಂಗ ಪ್ರವೇಶಿಸುವ ಮೊದಲೇ ರಂಗರಾಯರು ಕರಾವಳಿ ಜಿಲ್ಲೆಗಳಲ್ಲಿ ವೃತ್ತಿಶಿಕ್ಷಣ ಶಾಲೆಗಳನ್ನು ತೆರೆದು ದಲಿತರ ಸ್ವಾವಲಂಬನೆಯ ಬದುಕಿಗೆ ರಹದಾರಿ ಕಲ್ಪಿಸಿ ದಶಕಗಳೇ ಆಗಿದ್ದುವು. ಆದ್ದರಿಂದ ಕರಾವಳಿಯಲ್ಲಿ ಕುದ್ಮಲ್ ರಂಗರಾವ್ ಪ್ರಾರಂಭಿಸಿದ ಈ ಸಾಮಾಜಿಕ ಜಾಗೃತಿ ಐತಿಹಾಸಿಕವಾಗಿಯೂ ಮಹತ್ವದ್ದಾಗಿದೆ.

ಗಾಂಧೀಜಿ ಅವರಿಗಿಂತ ಸುಮಾರು ಹತ್ತು ವರ್ಷ ಮೊದಲು (೨೯ನೇ ಜೂನ್ ೧೮೫೯) ಕಾಸರಗೋಡು ಜಿಲ್ಲೆಯ ಕುದ್ಮಲ್ ಎಂಬಲ್ಲಿ ಮಧ್ಯಮ ವರ್ಗದ ದೇವಪ್ಪಯ್ಯ-

ಗೌರಿ ದಂಪತಿಗಳ ಹಿರಿಯ ಮಗನಾಗಿ ರಂಗರಾಯರು ಜನಿಸಿದರು. ಅವರ ಬಾಲ್ಯ ಬಡತನದಲ್ಲಿ ಕಳೆಯಿತು. ಬಹುಕಷ್ಟದಿಂದ ಕಾಸರಗೋಡಿನಲ್ಲಿ ಬಾಲ್ಯ ಶಿಕ್ಷಣವನ್ನು ಮುಗಿಸಿದರು. ಅವರು ೧೬ನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ತಾಯಿ ಹಾಗೂ ಆರು ಮಂದಿ ಸೋದರಸೋದರಿಯರನ್ನು ಸಾಕುವುದಕ್ಕಾಗಿ ಉದ್ಯೋಗ ಅರಸಿ ಮಂಗಳೂರಿಗೆ ಬಂದರು. ತಿಂಗಳಿಗೆ ಎಂಟು ರೂಪಾಯಿ ವೇತನದ ಅಧ್ಯಾಪಕ ವೃತ್ತಿ ಕೈಗೊಂಡರು. ಅಧ್ಯಾಪಕರಾಗಿದ್ದ ಕಾಲದಲ್ಲಿಯೇ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಖಾಸಗಿಯಾಗಿ ಕುಳಿತು ತೇರ್ಗಡೆ ಹೊಂದಿದರು. ಮತ್ತಷ್ಟು ಪರಿಶ್ರಮದಿಂದ ಅಂದಿನ ಪ್ಲೀಡರ್‌ಶಿಪ್ (ವಕಾಲತ್) ಪರೀಕ್ಷೆಯಲ್ಲೂ ಉತ್ತೀರ್ಣರಾದರು. ನಂತರ ಅಧ್ಯಾಪಕ ವೃತ್ತಿ ತ್ಯಜಿಸಿ ಮಂಗಳೂರಿನ ಜಿಲ್ಲಾ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಕೈಗೊಂಡರು.

ಸತ್ಯ, ನ್ಯಾಯಕ್ಕಾಗಿ ಬಡಜನರ, ದೀನದಲಿತರ ವಕಾಲತ್ತುಗಳನ್ನೇ ವಹಿಸಿಕೊಂಡು ಅವರಿಗಾಗುತ್ತಿರುವ ಅನ್ಯಾಯ, ವಂಚನೆಗಳ ವಿರುದ್ಧ ಹೋರಾಡುತ್ತಿದ್ದ ರಂಗರಾಯರು ಅದರಲ್ಲಿಯೇ ಹೆಚ್ಚಿನ ಯಶಸ್ಸು ಪಡೆದರು. ಬಡವರ ವಕೀಲರಾಗಿ ಪ್ರಸಿದ್ಧರಾದರು. ರಂಗರಾಯರ ಆದರ್ಶ ವ್ಯಕ್ತಿತ್ವ, ಪ್ರಾಮಾಣಿಕತೆ ಆಗಿನ ಇಂಗ್ಲಿಷ್ ನ್ಯಾಯಾಧೀಶರನ್ನು ಆಕರ್ಷಿಸಿತ್ತು.

ಆಗ ದಕ್ಷಿಣ ಕನ್ನಡ ಜಿಲ್ಲೆಯು ಬ್ರಿಟಿಷರ ಆಳ್ವಿಕೆಯ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಬ್ರಿಟಿಷ್ ಸರ್ಕಾರ ಜಿಲ್ಲೆಯ ದೀನದಲಿತರ ಶ್ರೇಯೋಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆ ತೆರೆದಿತ್ತು. ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆ, ಕಾಲೊನಿ, ಬಾವಿ, ದರಖಾಸ್ತಿನಲ್ಲಿ ಭೂಮಿ ಹಂಚಿಕೆಯ ಯೋಜನೆಗಳನ್ನು ರೂಪಿಸಿತ್ತು.

ಮಂಗಳೂರು ನಗರದ ವೆಲೆನ್ಸಿಯ ಬಳಿ ನಂದಿಗುಡ್ಡೆ ಮುಟ್ಟಿಕಲ್ ಎಂಬಲ್ಲಿ ತೆರೆದಿದ್ದ ಅಸ್ಪೃಶ್ಯರ ಶಾಲೆಯಲ್ಲಿ ನಾಲ್ಕನೇ ತರಗತಿವರೆಗೆ ಕಲಿತಿದ್ದ ಬೆಂದೂರು ಬಾಬು ಎಂಬುವರಿಗೆ ಜಿಲ್ಲಾ ನ್ಯಾಯಾಲಯದಲ್ಲಿ ಪೇದೆಯಾಗಿ ನಿಯುಕ್ತಿ ಮಾಡಿದ್ದು ಕೋರ್ಟಿನಲ್ಲಿ ಕೆಲಸ ಮಾಡುವ ಇತರ ಸಮುದಾಯದ ನೌಕರರ ಅಸಹನೆಗೆ ಕಾರಣವಾಗಿತ್ತು. ಈ ಸಂದರ್ಭದಲ್ಲಿ ದೀನದಲಿತರ ಬಂಧು ಎಂದು ಪ್ರಸಿದ್ಧರಾಗಿದ್ದ ರಂಗರಾಯರನ್ನು ಕರೆದ ಅಂದಿನ ಇಂಗ್ಲಿಷ್ ನ್ಯಾಯಾಧೀಶರು "ಕೋರ್ಟಿನಲ್ಲಿ ಪೇದೆ ಕೆಲಸ ಮಾಡುವುದರಿಂದ ಅಸ್ಪೃಶ್ಯರ ಉದ್ಧಾರ ಸಾಧ್ಯವಿಲ್ಲ. ಅವರಿಗೆ ವಿದ್ಯಾಭ್ಯಾಸ ಕೊಡಿಸುವಂತೆ ನೀವು ಏನಾದರೂ ಮಾಡಬಹುದಲ್ಲ..." ಎಂದು ಸೂಚಿಸಿದರು.

ಮೊದಲೇ ದೀನದಲಿತರ ಹೀನಾಯ ಸ್ಥಿತಿಯ ಬಗ್ಗೆ ಕಾಳಜಿ ಹೊಂದಿದ್ದ ರಂಗರಾಯರಿಗೆ ಈ ಸೂಚನೆ ಅಸ್ಪೃಶ್ಯರ ಬದುಕಿನ ಸುಧಾರಣೆಗಾಗಿ ಶ್ರಮಿಸಲು ಪ್ರೇರಣೆಯಾಯಿತು. ವಕೀಲಿ ವೃತ್ತಿಯನ್ನು ನಿರ್ವಹಿಸುತ್ತಲೇ (ತಮ್ಮ ೩೦ನೇ ವಯಸ್ಸಿನಲ್ಲಿ) ಅಧ್ಯಾತ್ಮದ ಕಡೆ ಮನಸ್ಸನ್ನು ತಿರುಗಿಸಿ ದೀನದಲಿತರ ಉದ್ಧಾರಕ್ಕೆ ದುಡಿಯಲು ಅವರು ಸಂಕಲ್ಪಿಸಿದರು.

ತಮ್ಮದೇ ಹಣದಿಂದ ಮಂಗಳೂರಿನ ಉರ್ವ ಚಿಲಿಂಬಿಯ ಬಳಿ ಹುಲ್ಲುಮನೆಯಲ್ಲಿ ದಲಿತ ಮಕ್ಕಳಿಗಾಗಿ ಮೊದಲ ಶಾಲೆಯನ್ನು ರಂಗರಾಯರು ತೆರೆದರು. ದಲಿತರ ಏಳಿಗೆಗಾಗಿ ಸಮಗ್ರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದ ಡಿಪ್ರೆಸ್ಡ್‌ಕ್ಲಾಸಸ್ ಮಿಷನ್ (ಡಿಸಿಎಂ) ಸಂಸ್ಥೆಯನ್ನು ೧೮೯೭ರಲ್ಲಿ ಕೊಡಿಯಾಲಬೈಲ್‌ನಲ್ಲಿ ರಂಗರಾಯರು ಸ್ಥಾಪಿಸಿದರು.

ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ರಂಗರಾಯರು ದಲಿತರಿಗಾಗಿ ಚಿಲಿಂಬಿಯಲ್ಲಿ ಆರಂಭಿಸಿದ ಶಾಲೆಗೆ ಇತರ ಸಮುದಾಯದವರ ವಿರೋಧ ವ್ಯಕ್ತವಾಯಿತು. ಅದು ತೀವ್ರವಾದಾಗ ಅದನ್ನು ಮುಚ್ಚಿದರು. ಕಂಕನಾಡಿ, ಬೋಳೂರಿನಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆದರು. ಅಲ್ಲಿ ಇನ್ನೊಂದು ಬಗೆಯ ಸಮಸ್ಯೆ ಎದುರಾಯಿತು. ಅವರು ತೆರೆದ ಶಾಲೆಗಳಿಗೆ ಹಿಂದೂ ಅಧ್ಯಾಪಕರು ಬರಲಿಲ್ಲ. ರಂಗರಾಯರು ಕ್ರೈಸ್ತ ಅಧ್ಯಾಪಕರನ್ನು ನೇಮಿಸಿಕೊಂಡರು. ಮಂಗಳೂರಿನ ಶೇಡಿಗುಡ್ಡೆಯ ಕೋರ್ಟ್‌ಗುಡ್ಡೆ ಇಳಿಜಾರು ಸ್ಥಳದಲ್ಲಿ ಮತ್ತೊಂದು ಶಾಲೆ ತೆರೆದರು. ವೃತ್ತಿಪರ ಶಿಕ್ಷಣವನ್ನು ನೀಡುವ ಕೈಗಾರಿಕೆ ತರಬೇತಿಗೆ ಶೇಡಿಗುಡ್ಡೆಯಲ್ಲಿ ಅವಕಾಶ ಕಲ್ಪಿಸಿದರು. ಅಲೆಮಾರಿಗಳಾಗಿದ್ದ ಮೂಲನಿವಾಸಿ ಕೊರಗರ ಹತ್ತು ಕುಟುಂಬಗಳಿಗೆ ಶೇಡಿಗುಡ್ಡೆಯಲ್ಲಿ ಆಶ್ರಯ ಕೊಟ್ಟರು. ಅವರ ಕಸುಬುಗಳಿಗೆ ಸಹಾಯ ಮಾಡಿದರು. ಉಡುಪಿ ಮತ್ತು ಪುತ್ತೂರಿನಲ್ಲಿ ಕೊರಗರಿಗೆ ಹೆಚ್ಚಿನ ಸಂಖ್ಯೆಯಲ್ಲಿ ದರಖಾಸ್ತು ಜಮೀನುಗಳನ್ನು ಕೊಡಿಸಿದರು. ಶೇಡಿಗುಡ್ಡೆಯಲ್ಲಿ ದಲಿತ ವಿದ್ಯಾರ್ಥಿನಿಯರಿಗೆ ಹೆಣ್ಣು ಮಕ್ಕಳ ನಿಲಯವನ್ನು ಕಟ್ಟಿಸಿದರು. ತಾವು ಸ್ಥಾಪಿಸಿದ ಶಾಲೆಗಳಲ್ಲಿ ನಾಲ್ಕನೇ ತರಗತಿವರೆಗೆ ಕಲಿತ ದಲಿತ ಯುವಕರಿಗೆ ಶಿಕ್ಷಕ ತರಬೇತಿ ಕೊಡಿಸಿ ಇತರ ಶಾಲೆಗಳಿಗೆ ಅಧ್ಯಾಪಕರಾಗಿ ನೇಮಿಸುತ್ತಿದ್ದರು.

ಜಿಲ್ಲೆಯ ಅಂದಿನ ಶ್ರೀಮಂತರಿಂದ ಜಮೀನನ್ನು ರಂಗರಾಯರು ಕ್ರಯಕ್ಕೆ ಹಾಗೂ ಮೂಲಗೇಣಿಗೆ ಪಡೆದು ದಲಿತರಿಗೆ ಮನೆಗಳನ್ನು ಕಟ್ಟಿಸಲು ಮತ್ತು ಕೃಷಿ ಮಾಡಲು ವಿತರಿಸಿದರು. ಅವರು ಉಪವೃತ್ತಿ ಕೈಗೊಳ್ಳಲು ನೆರವು ನೀಡಿದರು. ಬಜ್ಪೆ, ಕಾಪಿಕಾಡು, ದಡ್ಡಲಕಾಡು ಮತ್ತು ಇನ್ನಿತರ ಕಾಲೋನಿಗಳಲ್ಲಿ ದಲಿತರಿಗೆ ಜಮೀನು ವಿತರಣೆ ಮಾಡುವಾಗ ರಂಗರಾಯರು "ಜಮೀನನ್ನು ಪರಿಶಿಷ್ಟರಲ್ಲದವರಿಗೆ ಯಾವ ಕಾರಣದಿಂದಲೂ ಪರಭಾರೆ ಮಾಡಬಾರದು. ದಲಿತರಿಗೆ ಪರಭಾರೆ ಮಾಡುವುದಿದ್ದರೂ ತಮ್ಮ ಡಿಸಿಎಂ ಸಂಸ್ಥೆಯ ಅನುಮತಿ ಪಡೆಯಬೇಕು" ಎಂಬ ನಿಬಂಧನೆ ವಿಧಿಸಿದ್ದರು.

ಗಾಂಧೀಜಿ ಅವರು ಸೇವಾರಂಗಕ್ಕೆ ಪ್ರವೇಶಿಸುವುದಕ್ಕೆ ಎಷ್ಟೋ ವರ್ಷಗಳ ಮೊದಲೇ ರಂಗರಾಯರು ತಮ್ಮ ಶಾಲೆಗಳಲ್ಲಿ ಮೂಲಶಿಕ್ಷಣವನ್ನು ಜಾರಿಗೆ ತಂದಿದ್ದರು. ಅವರ ಶಾಲೆಗಳಲ್ಲಿ ವೃತ್ತಿಶಿಕ್ಷಣ ಕಲಿಸುವ ವ್ಯವಸ್ಥೆ ಇತ್ತು. ಬಡಗಿ ಕೆಲಸ, ನೇಯ್ಗೆ, ತೋಟಗಾರಿಕೆ, ಕಸೂತಿ ಮತ್ತು ರೇಷ್ಮೆಹುಳ ಸಾಕಣೆ, ತಕಲಿಯಲ್ಲಿ ನೂಲು ಸುತ್ತುವುದು ಮೊದಲಾದವನ್ನು ಕಲಿಸಲಾಗುತ್ತಿತ್ತು. ಅವರು ಮಂಗಳೂರು, ತೋಕೂರು, ಬೋಳೂರು, ದಡ್ಡಲಕಾಡು, ಜೆಪ್ಪು, ಅತ್ತಾವರ, ತಲಪಾಡಿ, ಉಳ್ಳಾಲ, ಮೂಲ್ಕಿ, ಉಡುಪಿ, ಬನ್ನಂಜೆ, ನೇಜಾರು, ಪುತ್ತೂರು ಮುಂತಾದ ಕಡೆ ಸ್ಥಾಪಿಸಿದ ಶಾಲೆಗಳನ್ನು ಹಲವು ವರ್ಷಗಳ ಕಾಲ ಸ್ವಂತವಾಗಿ ನಡೆಸಿಕೊಂಡು ಬಂದರು.

ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಕುದ್ಮುಲ್ ರಂಗರಾಯರು ಸಕ್ರಿಯರಾಗಿದ್ದ ದಿನಗಳಲ್ಲಿ ಕಾರ್ನಾಡು ಸದಾಶಿವರಾಯರೂ ಅವರೊಂದಿಗೆ ಕೈಜೋಡಿಸಿದ್ದರು. ಅವರು ನಡೆಸುತ್ತಿದ್ದ ಸಮಾಜ ಸೇವಾ ಚಟುವಟಿಕೆಗಳಲ್ಲಿ ಕೆಲವರಾದರೂ ಸಾಂಸ್ಕೃತಿಕ ವ್ಯಕ್ತಿಗಳು ಬೆಂಬಲ ನೀಡಿದ್ದರು. ಕನ್ನಡ ಸಾಹಿತ್ಯದ ಅಂದಿನ ನವೋದಯ ಕಾಲದಲ್ಲಿ ಮುಂಬೈನಲ್ಲಿ ಕ್ರಿಯಾಶೀಲರಾಗಿದ್ದ ಹಟ್ಟಿಯಂಗಡಿ ನಾರಾಯಣರಾಯರು ತಮ್ಮ 'ಕೊಂಕಣಿ ಚೊ ಮೂಲಾದರ್ಶು' ಎಂಬ ಕೊಂಕಣಿ ಕೃತಿಯಮಾರಾಟದಿಂದ ಬರುವ ಹಣವನ್ನು ಮಂಗಳೂರಿನ ಡಿಪ್ರೆಸ್ಡ್ ಕ್ಲಾಸಸ್ ಮಿಷನ್‌ಗೆ ಕೊಡಬೇಕೆಂದು ತಿಳಿಸಿದ್ದರು.

ರಂಗರಾಯರ ಒತ್ತಡದ ಕಾರಣ ಜಿಲ್ಲಾ ಬೋರ್ಡು ಮತ್ತು ಮಂಗಳೂರು ಪುರಸಭೆಯಲ್ಲಿ ದಲಿತರಿಗೆ ಪ್ರಾತಿನಿಧ್ಯ ದೊರೆಯುವಂತಾಯಿತು. ದಲಿತರಲ್ಲಿ ಸಹಕಾರ ಪ್ರವೃತ್ತಿ ಬೆಳೆಯಲು ಕೋರ್ಟ್‌ಹಿಲ್ ಆದಿದ್ರಾವಿಡ ಸಹಕಾರ ಸಂಘವನ್ನು ಅವರು ಶೇಡಿಗುಡ್ಡೆಯಲ್ಲಿ ಸ್ಥಾಪಿಸಿದರು. ಅನಾಥ ಮಹಿಳೆಯರಿಗಾಗಿ, ಬಾಲ ವಿಧವೆಯರಿಗಾಗಿ ಆಶ್ರಮಗಳನ್ನು ತೆರೆದರು. ಈ ಆಶ್ರಮಗಳಲ್ಲಿ ಜಾತಿಭೇದವಿಲ್ಲದೆ ಎಲ್ಲ ಜಾತಿಯ ಅನಾಥ, ವಿಧವೆಯರನ್ನು ಸೇರಿಸಿ ಅವರಿಗೆ ರಕ್ಷಣೆ ಹಾಗೂ ಜೀವನೋಪಾಯ ಮಾರ್ಗಗಳನ್ನು ಕಲ್ಪಿಸಿಕೊಟ್ಟರು.

ರಂಗರಾಯರು ದಲಿತರ ಏಳಿಗೆಯ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾಗ ಅದನ್ನು ಮಡಿವಂತರು ಸಹಿಸಿಕೊಳ್ಳಲಿಲ್ಲ. ಅವರಿಗೆ ಸಾರಸ್ವತ ಸಮಾಜದ ದೇವಾಲಯಗಳಲ್ಲಿ ಪ್ರವೇಶ ಇರಲಿಲ್ಲ. ಮೇಲುವರ್ಗದವರ ಚಿತಾವಣೆಯಿಂದ ಕ್ಷೌರಿಕರು ಕೂಡಾ ರಂಗರಾಯರನ್ನು ಬಹಿಷ್ಕರಿಸಿದರು. ಅಗಸರೂ ಬಟ್ಟೆಗಳನ್ನು ಮಡಿ ಮಾಡಲು ನಿರಾಕರಿಸಿದರು. ರಂಗರಾಯರ ಹೆಣ್ಣು ಮಕ್ಕಳನ್ನು ಸಾರ್ವಜನಿಕವಾಗಿ ಅಪಮಾನ ಮಾಡುವ ಬೆದರಿಕೆಗಳು ಬರತೊಡಗಿದವು. ರಂಗರಾಯರು ರಸ್ತೆಯಲ್ಲಿ ನಡೆಯುವಾಗ ಅಪಮಾನಿಸುವ ಘಟನೆಗಳೂ ನಡೆಯುತ್ತಿದ್ದವು.

ತಾವು ಕಟ್ಟಿದ ಎಲ್ಲ ಸಂಸ್ಥೆಗಳನ್ನು ಆರ್ಥಿಕ ಅಡಚಣೆಯ ಕಾರಣ ಸರ್ಕಾರಕ್ಕೆ ಹಾಗೂ ಭಾರತಸೇವಾಸಂಘಕ್ಕೆ ವಹಿಸಿಕೊಟ್ಟ ನಂತರ ರಂಗರಾಯರು ಅಧ್ಯಾತ್ಮದತ್ತ ಒಲವು ಹರಿಸಿದರು. ಸನ್ಯಾಸ ಸ್ವೀಕರಿಸಲು ನಿರ್ಧರಿಸಿದರು. ತಮ್ಮ ಸಮಾಜ ಸೇವೆಗಾಗಿ ಬ್ರಿಟಿಷ್ ಸರ್ಕಾರ ನೀಡಿದ್ದ ರಾವ್ ಸಾಹೇಬ್ ಬಿರುದಿನ ಪದಕ ಹಾಗೂ ಸೇವಾ ದಾಖಲೆಯ ಪತ್ರಗಳನ್ನು ಸನ್ಯಾಸ ಸ್ವೀಕಾರ ಸಮಾರಂಭದ ಹೋಮಕುಂಡದಲ್ಲಿ ಅಗ್ನಿಗೆ ಸಮರ್ಪಿಸಿದರು.

ಅಸ್ಪೃಶ್ಯ ಸಮುದಾಯದಲ್ಲಿಯೆ ಅತಿ ಹಿಂದುಳಿದಿದ್ದ ತೋಟಿ ಪಂಗಡದವರು ತಮ್ಮ ಪಾರ್ಥಿವ ಶರೀರವನ್ನು ಸ್ಮಶಾನಕ್ಕೆ ಒಯ್ಯಬೇಕು ಎಂಬುದು ರಂಗರಾಯರ ಕೊನೆಯ ಆಸೆಯಾಗಿತ್ತು. "ಈ ಪಂಗಡದವರಿಗೆ ಜೀವಿತಕಾಲದಲ್ಲಿ ಹೆಚ್ಚಿನ ಸೇವೆ ಮಾಡಲು ಸಾಧ್ಯವಾಗಲಿಲ್ಲ. ಕೊನೆಗೆ ಅವರ ಸ್ಪರ್ಶದಿಂದಲಾದರೂ ನಮ್ಮ ಆತ್ಮಕ್ಕೆ ಚಿರಶಾಂತಿ ಲಭಿಸೀತು" ಎಂಬ ಹಿರಿಯಾಸೆಯನ್ನು ಅವರು ತಮ್ಮ ಉಯಿಲಿನಲ್ಲಿ ವ್ಯಕ್ತಪಡಿಸಿದ್ದರು. ರಂಗರಾಯರು ೧೯೨೮ನೇ ಇಸವಿ ಜನವರಿ ೩೦ರಂದು (೩೦ ವರ್ಷಗಳ ನಂತರ ಅದೇ ದಿನ ಗಾಂಧೀಜಿ ಅವರು ಹುತಾತ್ಮರಾದರು) ಪರಂಧಾಮ ಸೇರಿದಾಗ ದಲಿತರೇ ಅವರನ್ನು ಅತ್ತಾವರದ ಬಾಬುಗುಡ್ಡೆಯ ರುದ್ರಭೂಮಿಯಲ್ಲಿ ಅತ್ಯಂತ ಭಕ್ತಿಯಿಂದ ಅಂತ್ಯಸಂಸ್ಕಾರ ನಡೆಸಿದರು.

ತಮ್ಮ ಜೀವಿತ ಕಾಲದಲ್ಲಿ ದಲಿತನೊಬ್ಬ ಎಸ್ಸೆಸ್ಸೆಲ್ಸಿ ಉತ್ತೀರ್ಣನಾಗಬೇಕು ಎಂಬುದು ಅವರ ಆಸೆಯಾಗಿತ್ತು. "ನಮ್ಮ ವಿದ್ಯಾಸಂಸ್ಥೆಯಲ್ಲಿ ಕಲಿತ ದಲಿತ ಯುವಕ ಪದವೀಧರನಾಗಿ ಉನ್ನತ ಉದ್ಯೋಗವನ್ನು ಪಡೆದು ಅವನದೇ ಆದ ಕಾರಿನಲ್ಲಿ ಹೋಗುತ್ತಿರುವುದನ್ನು ನಾನು ಕಣ್ಣಾರೆ ಕಾಣಬೇಕು. ಆತನ ಕಾರಿನಿಂದ ಏಳುವ ಧೂಳು ನನ್ನ ನೆತ್ತಿಗೆ ಬಿದ್ದಾಗ ನನ್ನ ಬದುಕು ಸಾರ್ಥಕವಾಗುತ್ತದೆ" ಎಂಬ ಹಿರಿಯಾಸೆಯನ್ನೂ ಪ್ರಕಟಿಸಿದ್ದರು. ಈ ಎರಡೂ ಆಸೆಗಳು ಅವರ ಜೀವಿತ ಕಾಲದಲ್ಲಿ ಈಡೇರಲಿಲ್ಲ.

ದಲಿತರ ಏಳಿಗೆಯ ವಿಚಾರದಲ್ಲಿ ಐತಿಹಾಸಿಕವಾದ ಕಾಳಜಿಯನ್ನು ತಾಳಿ ಅದರಂತೆ ನಡೆದುಕೊಂಡಿದ್ದ ವಿಭೂತಿ ಪುರುಷ ಕುದ್ಮುಲ್ ರಂಗರಾಯರು. ನಾಡಿನ ಇತರ

ಭಾಗಗಳಂತೆಯೇ ಮೇಲು ಕೀಳಿನ ಜಾತಿ ಉಪಜಾತಿಗಳ ಜಟಿಲಜಡಕಿನಲ್ಲಿ ಪ್ರತ್ಯೇಕ ಜಗತ್ತಿನಂತೆ ಉಳಿದಿರುವ ಕರಾವಳಿ ಸಮಾಜದಲ್ಲಿ ಇಂಥ ಮಹಾನ್ ವ್ಯಕ್ತಿ ಇದ್ದಿರಲು ಸಾಧ್ಯವೇ ಎಂಬ ಬೆರಗು ಮೂಡುತ್ತದೆ. ಅವರ ಮಾನವೀಯ ಕಾಳಜಿ ಹಾಗೂ ಸೇವಾಪರತೆಯ ಸಂಕೇತಗಳಾಗಿ ಮಂಗಳೂರಿನಲ್ಲಿ ಅವರ ನೆನಪಿನ ದಲಿತ ವಿದ್ಯಾರ್ಥಿನಿಲಯಗಳು ಇಂದಿಗೂ ಕ್ರಿಯಾಶೀಲವಾಗಿವೆ.



## ಲೇಖಕರ ಪರಿಚಯ

**ಲಕ್ಷ್ಮಣ ಕೊಡಸೆ** ಅವರು ೧೯೫೩ ಎಪ್ರಿಲ್ ೨೫ರಂದು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಕೊಡಸೆ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ಕರಿಯನಾಯ್ಕ, ತಾಯಿ ಭರ್ವಮ್ಮ. ಹೊಸನಗರ ತಾಲೂಕಿನ ರಿಪ್ಪನ್ ಪೇಟೆಯ ಸರಕಾರಿ ಪ್ರೌಢಶಾಲೆ, ಬೆಂಗಳೂರಿನ ರೇಣುಕಾಚಾರ್ಯ ಕಾಲೇಜು, ಸೆಂಟ್ರಲ್ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರಗಳಲ್ಲಿ ಶಿಕ್ಷಣ ಪಡೆದರು. ಪ್ರಜಾವಾಣಿ ಪತ್ರಿಕೆಯ ಮುಖ್ಯ ವರದಿಗಾರರಾಗಿ, ಉಪಸಂಪಾದಕರಾಗಿ, ಸುದ್ದಿ ವಿಭಾಗದ ಮುಖ್ಯಸ್ಥರಾಗಿ, ಸಹಾಯಕ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಯಕ್ಷಗಾನ ಮತ್ತು ಛಾಯಾಗ್ರಹಣ ಅವರ ಆಸಕ್ತಿಯ ಕ್ಷೇತ್ರ. ಬಲಿ ಮತ್ತು ಮೈತ್ರಿ ಎಂಬಿವು ಅವರ ಪ್ರಕಟಿತ ಕಥಾಸಂಕಲನಗಳು. ಪಯಣ, ಭೂಮಿ ಹುಣ್ಣಿಮೆ, ಪಾಡು, ಹಾಲಪ್ಪ, ನೆರಳು, ಪಾಲು ಇವರ ಕಾದಂಬರಿಗಳು. ಮೆಲುಕು, ಗೆದ್ದವರು, ಅಜಲು, ಆಗು–ಹೋಗು ಪತ್ರಿಕಾ ಬರಹಗಳ ಸಂಕಲನಗಳು. ಕ್ರಿಸ್ತಾಂಜಲಿ ಎನ್ನುವುದು ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯರ ಜತೆಗೂಡಿ ಸಂಪಾದಿಸಿದ ಕವನ ಸಂಕಲನ. ಕರ್ನಾಟಕ ಮಾಧ್ಯಮ ಅಕಾಡೆಮಿ ಗೌರವ ಮತ್ತು ಮಂಗಳೂರಿನ ಸಂದೇಶ ಪ್ರತಿಷ್ಠಾನದ ಗೌರವ ಪುರಸ್ಕಾರಗಳನ್ನು ಅವರು ಪಡೆದಿದ್ದಾರೆ.

### ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಕುದ್ಮುಲ್ ರಂಗರಾಯರು ಪ್ರಾರಂಭಿಸಿದ ಸಾಮಾಜಿಕ ಜಾಗೃತಿ ಐತಿಹಾಸಿಕವಾಗಿಯೂ ಮಹತ್ವದ್ದೆನಿಸಲು ಕಾರಣವೇನು?

2 ಕುದ್ಮುಲ್ ರಂಗರಾವ್ ಅವರ ಯಾವ ಕಾರ್ಯವು ಗಾಂಧೀಜಿಯವರಿಗೆ ಪ್ರೇರಣೆ ನೀಡಿತ್ತು?

3 ಅಸ್ಪೃಶ್ಯರ ಬದುಕಿನ ಸುಧಾರಣೆಗಾಗಿ ಶ್ರಮಿಸಲು ಕುದ್ಮುಲ್ ರಂಗರಾಯರಿಗೆ ಪ್ರೇರಣೆ ನೀಡಿದ ಘಟನೆ ಯಾವುದು?

4 ಕುದ್ಮುಲ್ ರಂಗರಾಯರಿಗಿದ್ದ ಎರಡು ಆಸೆಗಳು ಯಾವುವು?

5 ದಲಿತರ ಏಳಿಗೆಗಾಗಿ ಕೆಲಸ ಮಾಡುವಾಗ ಕುದ್ಮುಲ್ ರಂಗರಾಯರು ಎದುರಿಸಿದ ತೊಂದರೆಗಳೇನು?

NT-151-9-KANNADA-10-AT-VOL.1

### ಸಮರ್ಥಿಸಿ ಬರೆಯಿರಿ

- ಕುದ್ಮುಲ್ ರಂಗರಾಯರು 'ದೀನದಲಿತರ ಬಂಧು' ಎನ್ನುವುದನ್ನು ಪಾಠದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.

### ಭಿತ್ತಿಪತ್ರ ತಯಾರಿಸಿರಿ

- ನಾಡು–ನುಡಿ ಪ್ರೇಮವನ್ನು ವ್ಯಕ್ತಪಡಿಸುವ ಹೇಳಿಕೆಗಳನ್ನು ಸಂಗ್ರಹಿಸಿರಿ. ಅವುಗಳನ್ನು ಉಪಯೋಗಿಸಿ ಭಿತ್ತಿಪತ್ರ ತಯಾರಿಸಿರಿ.

### ವ್ಯಕ್ತಿಪರಿಚಯ ಬರೆಯಿರಿ.

- ನಿಮ್ಮೂರಿನಲ್ಲಿರುವ ಸಮಾಜ ಸೇವಕರು ಅಥವಾ ಮಾಜಿ ಸೈನಿಕರ ಸಂದರ್ಶನ ನಡೆಸಿ ವ್ಯಕ್ತಿಪರಿಚಯ ತಯಾರಿಸಿರಿ.

### ವಾಕ್ಯರಚಿಸಿರಿ.

ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆದು ಅವುಗಳಲ್ಲಿ ಗುಣಸಂಧಿಯಾಗುವ ಪದಗಳನ್ನು ಉಪಯೋಗಿಸಿಕೊಂಡು ವಾಕ್ಯಗಳನ್ನು ರಚಿಸಿರಿ.

- ದುಃಖೋದ್ರಿಕ್ತ, ದೇವರೊಬ್ಬನೆ, ಕಂಬನಿ, ಗ್ರಹಣೇಂದ್ರಿಯ, ಶೌರ್ಯೋನ್ನತ, ಬರಗಾಲ, ಗಂಧದೆಣ್ಣೆ, ದಲಿತೋದ್ಧಾರ, ಹಿಡಿಂಬೇಶ್ವರ, ಪಂಚೇಂದ್ರಿಯ

# ಅರ್ಥಕೋಶ

## ಅಂ

ಅಂಕ - ಮಡಿಲು
ಅಂಗರಕ್ಷಕ - ಮೈಗಾವಲಿನವ
ಅಂಚಲ - ಅಂಚು, ಸೆರಗು
ಅಂಜನ - ಕಪ್ಪು, ಕಾಡಿಗೆ
ಅಂಜನಾಚಲ - ಅಂಜನವೆಂಬ ಪರ್ವತ
ಅಂಬರ - ಆಕಾಶ
ಅಂಬರಂಬರಂ - ಆಕಾಶದವರಗೆ
ಅಂಬುಜ - ತಾವರೆ
ಅಂಬುಜೋದರ - ತಾವರೆಯನ್ನು ಹೊಟ್ಟೆಯಲ್ಲಿ ಧರಿಸಿರುವವನು (ಶ್ರೀಕೃಷ್ಣ)
ಅಂತರ - ವ್ಯತ್ಯಾಸ
ಅಂತರಿಸದೆ - ಮರೆಮಾಚದೆ, ಮುಚ್ಚಿಡದೆ
ಅಂತಃಕರಣ - ಮನಸ್ಸು

## ಅ

ಅಖಿಳ - ಸಮಸ್ತ, ಸಂಪೂರ್ಣ, ಎಲ್ಲ
ಅಗುಂದಲೆ - ಹೆಚ್ಚು, ಅತಿಶಯ
ಅರ್ಘ್ಯ - ದೇವತೆಗಳಿಗೂ ಪೂಜ್ಯರಿಗೂ ಕೈ ತೊಳೆಯಲು ಕೊಡುವ ನೀರು
ಅಡಕು - ಒಂದರ ಮೇಲೊಂದು ಪೇರಿಸು, ರಾಶಿಹಾಕು
ಅಡಚಣೆ - ಅಡ್ಡಿ, ತೊಂದರೆ
ಅಡರ್ಪು - ಆಸರೆ
ಅಡ್ಡಣಿಗೆ - ಊಟದ ತಟ್ಟೆ
ಅಡಿ - ಪಾದ, ಪಾದದ ಸುತ್ತಳತೆ
ಅಣುಗ - ಪ್ರೀತಿಪಾತ್ರನಾದ
ಅಣ್ಮು - ಪರಾಕ್ರಮ
ಅಧಮ - ಕೆಟ್ಟ, ಹೀನ
ಅಧರ - ತುಟಿ
ಅಧ್ವರ ಹಯ - ಯಜ್ಞಾಶ್ವ, ಅಶ್ವಮೇಧ ಯಾಗದ ಕುದುರೆ
ಅತಿಕ್ರಮಿಸು - ಮೀರು
ಅನಲ - ಬೆಂಕಿ
ಅನಂತ - ಕೊನೆ ಇಲ್ಲದವ (ಶ್ರೀಕೃಷ್ಣ)
ಅನಕ - ಅಷ್ಟರವರೆಗೆ, ಅಷ್ಟರಲ್ಲಿ
ಅನಿತರಲ್ಲಿ - ಅಷ್ಟರಲ್ಲಿ
ಅನುಕೂಲೆ - ನೆರವನ್ನು ನೀಡುವವಳು, ಒಪ್ಪಿಕೊಳ್ಳುವವಳು, ಅನುಸರಿಸುವವಳು
ಅನುಗೊಳಿಸು - ಸಿದ್ಧಗೊಳಿಸು
ಅನ್ನೆಗಂ - ಅಷ್ಟರಲ್ಲಿ
ಅಪರಸಮಯ - ಅನುಚಿತವಾದ ಕಾಲ, ಅಶುಭ ಸಮಯ
ಅಪ್ಪರೇ - ಆಗುತ್ತಾರೆಯೇ
ಅಪಾತ್ರ - ಅಯೋಗ್ಯ
ಅಪ್ಪುದಂ - ಆಗುವುದನ್ನು
ಅಪ್ರತಿಭ - ದಿಕ್ಕು ತೋಚದ, ದಿಗ್ಭ್ರಮೆಗೊಂಡ
ಅಭಿಮುಖ - ಎದುರು
ಅಮೃತರಾಗಿ - ಸಾವು ಗೆದ್ದವರಾಗಿ, ಚಿರಂಜೀವಿಯಾಗಿ
ಅಮಲ - ನಿರ್ಮಲ, ಕೊಳೆಯಿಲ್ಲದ
ಅಯ - ಶುಭಕರವಾದ ವಿಧಿ
ಅರವಟಿಗೆ - ಬಾಯಾರಿದವರಿಗೆ ಧರ್ಮಾರ್ಥವಾಗಿ ನೀರು ಕೊಡುವ ಮನೆ.

ಅರಾತಿ - ವೈರಿ

ಅಱಿವು - ಜ್ಞಾನ

ಅರೆ - ಕಲ್ಲು

ಅಲ್ಲಳ್ - ಅಲ್ಲ (ಸ್ತ್ರೀಲಿಂಗ)

ಅಲೆಮಾರಿ - ಅಲೆಯುವುದೇ ಶೀಲವಾಗಿ ಉಳ್ಳವನು

ಅವನಿ - ಭೂಮಿ

ಅವನಿಯ ಅಮರರ್ - ಭೂಮಿಯಲ್ಲಿನ ದೇವತೆಗಳು (ಬ್ರಾಹ್ಮಣರು)

ಅವಾಙ್ಮಯ - ಮಾತಿನಲ್ಲಿ ವಿವರಿಸಲಾಗದ

ಅಳಲು - ದುಃಖ

ಅಳವು - ಸಾಮರ್ಥ್ಯ

ಅಳಿಪು - ಬಯಸು, ಕಾಮಿಸು

ಅಳಿಯು - ನಾಶವಾಗು

ಅಳ್ತಿ - ಪ್ರೀತಿ, ಸಂತೋಷ, ನಂಬಿಕೆ

ಅಳುಕು - ಭಯ, ಹೆದರು, ಅಂಜು

ಅಳ್ಳೆ - ಪಕ್ಕೆಲುಬು

## ಆ

ಆಂತು - ಹಿಡಿದು, ಧರಿಸು

ಆಖ್ಯ - ಹೆಸರಿರುವ, ಪ್ರಸಿದ್ಧವಾದ

ಆಗು - ಲಾಭ, ಜಯ

ಆಜಿ - ಯುದ್ಧ

ಆಡಂಬರ - ಮೆರೆತ, ಉಬ್ಬರ, ಗುಡುಗು

ಆರ್ತರು - ಕಷ್ಟಕ್ಕೆ ಸಿಲುಕಿದವರು

ಆದಂ - ಅತಿಶಯ

ಆನ್ - ನಾನು

ಆಱದು - ಶಮನವಾಗದು

ಆರೈಸು - ಕೇಳು, ನಿರೀಕ್ಷಿಸು

ಆಲಸ್ಯ - ಉದಾಸೀನತೆ

ಆಲಿಸು - ಗಮನವಿಟ್ಟು ಕೇಳು

ಆಳ್ - ಸೇವಕ, ಮನುಷ್ಯ

## ಇ

ಇಂ - ಇನ್ನು

ಇಂತಿರುತಿರಲ್ಕೆ - ಹೀಗಿರಲು

ಇಂದ್ರಧನು - ಕಾಮನಬಿಲ್ಲು

ಇಂತು - ಹೀಗೆ

ಇಂದಿರೆಯರಸ - ಲಕ್ಷ್ಮಿಯ ಒಡೆಯ (ವಿಷ್ಣು)

ಇನಿಸು - ಇಷ್ಟು

ಇನ್ನೆವರಂ - ಈ ವರೆಗೂ

ಇಟ್ಟಳ - ಮನೋಹರವಾದುದು, ಸುಂದರವಾದುದು, ಸಂಭ್ರಮ

ಇರಲ್ಕೆ - ಇರಲು

ಇರುವು - ವಾಸ್ತವ

ಇಳುವರಿ - ಉತ್ಪಾದನೆ, ಉತ್ಪತ್ತಿ

ಇಳಾಲತಾಂಗಿ - ಭೂಮಿಯೆಂಬ ಹೆಣ್ಣು

## ಈ

ಈಳೆ - ತೊಳೆ, ಕಿತ್ತಲೆ, ಮೂಸಂಬಿ ಮುಂತಾದ ಸಣ್ಣ ಸಣ್ಣ ತೊಳೆಗಳಿರುವ ಹಣ್ಣುಗಳು.

## ಉ

ಉಂಗುಟ - ಕಾಲಿನ ಅಥವಾ ಕೈಯ ಹೆಬ್ಬೆರಳು, ಉಂಗುಷ್ಠ

ಉಗ್ಗಡಿಸು - ಗಟ್ಟಿಯಾಗಿ ಕೂಗಿ ಹೇಳು, ಹೊಗಳು

ಉಗಿ - ಸುರಿ, ಚಿಮ್ಮು

ಉಡಿ - ಮಡಿಲು

ಉಡಿಯಕ್ಕಿ - ಉಡಿಯಲ್ಲಿ ಹಾಕುವ ಅಕ್ಕಿ (ಮಡಿಲಕ್ಕಿ)

| | |
|---|---|
| ಉತ್ತೀರ್ಣ | - ತೇರ್ಗಡೆಗೊಂಡ, ದಾಟಿದ |
| ಉದಕ | - ನೀರು |
| ಉದರಪೋಷಣೆ | - ಹೊಟ್ಟೆ ತುಂಬಿಸುವುದು. |
| ಉದ್ದಂಡ | - ದರ್ಪ, ಗರ್ವ |
| ಉದ್ಭವ | - ಹುಟ್ಟಿದುದು, ತಲೆದೋರಿದುದು |
| ಉದಿಸು | - ಹುಟ್ಟು, ಮೂಡು |
| ಉದ್ರಿಕ್ತ | - ಕೋಪಗೊಂಡ |
| ಉನ್ನತ | - ಉದಾತ್ತ, ಶ್ರೇಷ್ಠ |
| ಉಪಕೃತಿ | - ಸಹಾಯ, ಉಪಕಾರ, ಬೆಂಬಲ |
| ಉಪಾಶ್ರಯ | - ಆಸರೆ, ಅವಲಂಬನ |
| ಉಯಿಲು | - ಮರಣಾನಂತರ ತನ್ನ ಸೊತ್ತು ಯಾರಿಗೆ ಸೇರಬೇಕೆಂದು ಮೊದಲೇ ಬರೆದಿಡುವ ಪತ್ರ |
| ಉಸುರಿಸು | - ಜನ್ಮತಾಳು, ಉಸಿರಾಡು |
| ಉಸ್ತುವಾರಿ | - ಮೇಲ್ವಿಚಾರಣೆ |

## ಊ

| | |
|---|---|
| ಊಳು | - ನಾಯಿ, ನರಿಗಳ ಧ್ವನಿ |
| ಊಳಿಡು | - ಕೂಗಿಕೊಳ್ಳು, ಅರಚು (ನಾಯಿ ನರಿ ಇತ್ಯಾದಿ) |

## ಎ

| | |
|---|---|
| ಎಕ್ಕಭಾಗ | - ಏಕಭಾಗ |
| ಎಕ್ಕಭಾಗೆ | - ಒಂದೇ ಭಾಗ ಉಳ್ಳವಳು |
| ಎಡೆ | - ನೈವೇದ್ಯ |
| ಎನಿಬರು | - ಎಷ್ಟು ಜನರು |
| ಎರಕ | - ಒಂದಾಗುವಿಕೆ |
| ಎಸೆಯು | - ಶೋಭಿಸು |
| ಎಳಸು | - ಬಯಸು, ಇಚ್ಛಿಸು |

## ಏ

| | |
|---|---|
| ಏಳಿಗೆ | - ಅಭಿವೃದ್ಧಿ |

## ಐ

| | |
|---|---|
| ಐತರು | - ಬರು |
| ಐಸಿರಿ | - ಸಂಪತ್ತು, ಐಶ್ವರ್ಯ |

## ಒ

| | |
|---|---|
| ಒಕ್ಕಣಿಸು | - ಹೇಳು, ವಿವರಿಸು, ವ್ಯಾಖ್ಯಾನಿಸು |
| ಒಡಲು | - ಶರೀರ, ದೇಹ |
| ಒಡಹುಟ್ಟಿದಾಟ | - ಸಹೋದರರಾಗಿ ಜೀವನ |
| ಒಡಂಬಡು | - ಒಪ್ಪು, ಅಂಗೀಕರಿಸು, ಒತ್ತಾಸೆ |
| ಒಡ್ಡೋಲಗ | - ರಾಜಸಭೆ |
| ಒದವಿಸು | - ಒದಗಿಸು |
| ಒಪ್ಪುಗುಂ | - ಒಪ್ಪುವುದು, ಶೋಭಿಸುವುದು, ಹೊಂದುವುದು |
| ಒಜಿಲ್ | - ಅತಿಶಯವಾಗಿ ಹಾಡುವುದು, ಅರಚು, ಕಿರುಚು |
| ಒರತೆ | - ನೀರಿನ ಸೆಲೆ, ನೀರಿನ ಒಸರು |
| ಒಳತೋಟಿ | - ಅಂತರಂಗದ ಹೊಯ್ದಾಟ |
| ಒಳರೇ | - ಇರುವರೇ |
| ಒಳ್ಪು | - ಒಳ್ಳೆಯತನ |

## ಕ

| | |
|---|---|
| ಕಂತುಪಿತ | - ಮನ್ಮಥನ ತಂದೆ, ವಿಷ್ಣು |
| ಕಡೆಗೋಲು | - ಮೊಸರು ಮೊದಲಾದುವುಗಳನ್ನು ಕಡೆಯುವ ಕೋಲು |
| ಕಬ್ಬ | - ಕಾವ್ಯ |
| ಕಜ್ಜ | - ಕಾರ್ಯ, ಕೆಲಸ |

ಕಟ್ಟು - ತೀಕ್ಷ್ಣವಾದ, ಎದ್ದು ಕಾಣುವ, ಕಣ್ಣಿಗೆ ಹೊಡೆಯುವ

ಕಡೆಯು - ಮಥಿಸು

ಕಣಿಹಾಕು - ಗಾಡಿಗೆ ಹೂಡಿದ ಎತ್ತುಗಳು ನೊಗಕ್ಕೂ ತಮ್ಮ ಕತ್ತಿಗೂ ಕಟ್ಟಿದ ಹಗ್ಗವನ್ನು ಜಾರಿಸುವುದು.

ಕಣ್ಗೊಳ್ಪಿನಂ - ಮನಸ್ಸನ್ನು ಸೆಳೆಯುವಂತೆ ಮನೋಹರವಾದ

ಕತ್ತಾಳೆ - ಒಂದು ಬಗೆಯ ಸಸ್ಯ, ಕಲ್ನಾರು

ಕದನ - ಯುದ್ಧ

ಕಬಳಿಸು - ನುಂಗು, ತಿನ್ನು, ಲಪಟಾಯಿಸು

ಕರ್ಮಪಾಶ - ಪಾಪದ ಕುಣಿಕೆ (ಕರ್ಮ-ಪಾಪ, ಪಾಶ-ಕುಣಿಕೆ)

ಕರ್ಮಾಂಗ - ಮಾಡತಕ್ಕ ಕೆಲಸದ ಭಾಗ

ಕರ - ಕೈ

ಕರಕಮಳ - ಕೈಗಳೆಂಬ ತಾವರೆ

ಕರಿ - ಆನೆ

ಕಲ್ತ - ಕಲಿತ

ಕವಡು - ಕಪಟ, ಮೋಸ

ಕವಡುನುಡಿ - ಕಪಟ ಮಾತು

ಕಸುಬು - ಕೆಲಸ, ಉದ್ಯೋಗ

ಕಳಭ - ಆನೆಯ ಮರಿ

ಕಳವೆ - ಭತ್ತ

ಕಳ್ಳುಬಳ್ಳಿ - ಕರುಳ ಬಳ್ಳಿ

ಕಾದಂಬಿನಿ - ಮುಗಿಲುಗಳ ಸಾಲು

ಕಾರುಣ್ಯ - ದಯೆ

ಕಾಲಪುರುಷ - ಕಾಲವೆಂಬ ಪುರುಷ, ಮರಣದೇವತೆ

ಕಾಳಕೂಟ - ಒಂದು ಬಗೆಯ ಮಹಾವಿಷ

ಕೀೞ್ಮಾಡು - ಕೀಳಾಗುವಂತೆ ಮಾಡು, ಕೆಳಗೆ ಹಾಕು, ಕಡೆಗಣಿಸು

ಕು - ಭೂಮಿ

ಕುಂಟೆ - ವ್ಯವಸಾಯದ ಒಂದು ಉಪಕರಣ

ಕುಡು - ಕೊಡು

ಕುಡುವಿನಂ - ಕೊಡುವುದು, ಕೊಡಲು

ಕುತುಪಕಾಲ - ಯಜ್ಞ, ಶ್ರಾದ್ಧಾದಿಗಳಿಗೆ ತಕ್ಕ ಕಾಲ, ಅಪರಾಹ್ನ

ಕುತ್ಸಿತ - ಕೆಟ್ಟ, ಹೀನ, ದೂಷಣೆಗೆ ಒಳಗಾದ

ಕುವಲಯ - ಭೂಮಂಡಲ, ಕನ್ನೈದಿಲೆ

ಕುವಲಯಬಾಂಧವ - ನೈದಿಲೆಯ ಬಂಧು-ಚಂದ್ರ, ರಾಜ

ಕುಳಿ - ಕೊಂಡ

ಕೂಳ್ಕುದಿ - ಅನ್ನ ಕುದಿಯುವಂತೆ ಕುದಿ, ಒಳಗೊಳಗೇ ಕುದಿಯುವಿಕೆ, ತಳಮಳ

ಕೆಮ್ಮಗೆ - ಸುಮ್ಮನೆ

ಕೆಲ - ಬದಿ, ಪಕ್ಕ

ಕೆಳದಿ - ಗೆಳತಿ

ಕೇಲಿ - ಆಟ, ಕ್ರೀಡೆ

ಕೈವಾರಿಸು - ಹೊಗಳು

ಕೊಬ್ಬು - ಸೊಕ್ಕು, ಗರ್ವ

ಕೊಳ್ - ವ್ಯಾಪಿಸು, ಸುರಿಯು

ಕೋಲು - ಬಾಣ

ಕ್ರೋಧ - ಸಿಟ್ಟು

## ಖ

ಖಂಡ - ಮೂಳೆಯಿಲ್ಲದ ಮಾಂಸ, ಚೂರು
ಖಂಡನೆ - ತಪ್ಪೆಂದು ಸಾಧಿಸು
ಖಗ - ಪಕ್ಷಿ, ಆಕಾಶಗಾಮಿ
ಖರ್ದಿ ಪುಸ್ತಕ - ಆಯವ್ಯಯಗಳನ್ನು ಬರೆದಿಡುವ ಪುಸ್ತಕ
ಖೇದ - ದುಃಖ

## ಗ

ಗಂಜಳ - ಗೋಮೂತ್ರ, ಕೆಟ್ಟವಾಸನೆ, ದುರ್ವಾಸನೆ
ಗದ್ಯಾಣ - ಒಂದು ಚಿನ್ನದ ನಾಣ್ಯ
ಗಡಚಿಕ್ಕು - ಕಿವಿಗೆ ಬಡಿಯುವ ಸ್ವರ
ಗರುಡಿ - ಗರಡಿ, ವ್ಯಾಯಾಮಶಾಲೆ, ಶಸ್ತ್ರವಿದ್ಯೆ, ಜಟ್ಟಿಕಾಳಗ ಮೊದಲಾದವುಗಳನ್ನು ಅಭ್ಯಾಸ ಮಾಡುವ ಸ್ಥಳ.
ಗಸ್ತು - ಪಹರೆ, ಕಾವಲು
ಗಾತ್ರ - ದೇಹ
ಗಾತ್ರನೆನ್ - ದೇಹದವನಾಗಿದ್ದೇನೆ
ಗಾರುಡಿಗ - ಹಾವು ಹಿಡಿಯುವ ವಿದ್ಯೆ ಕಲಿತವನು, ವಿಷವಿಳಿಸುವವ
ಗಿರಕಿ ಹೊಡೆ - ಚಕ್ರಾಕಾರದಲ್ಲಿ ಸುತ್ತು
ಗುಡಾಜ್ಯ - ಬೆಲ್ಲ ಮತ್ತು ತುಪ್ಪ
ಗುಡಾರ - ಸೈನಿಕರು ಮೊದಲಾದವರು ಉಳಿದುಕೊಳ್ಳುವುದಕ್ಕಾಗಿ ಬಟ್ಟೆಯಿಂದ ತಾತ್ಕಾಲಿಕವಾಗಿ ಕಟ್ಟಿರುವ ವಸತಿ, ಬಿಡಾರ, ಡೇರೆ
ಗುಪಿತ - ಗುಟ್ಟು, ಗುಪ್ತ, ರಹಸ್ಯ
ಗೇಯ - ಹಾಡು, ಹಾಡಲು ಯೋಗ್ಯವಾದ
ಗೋಳುಗುಟ್ಟಿಸು - ಗೋಳಾಡಿಸು, ದುಃಖಿಸುವಂತೆ ಮಾಡು

## ಘ

ಘನ - ಮೋಡ, ಶ್ರೇಷ್ಠ
ಘನವಿಪಿನ - ದಟ್ಟ ಅಡವಿ, ಗೊಂಡಾರಣ್ಯ
ಘಟ - ಕೊಡ, ಕೊಡಪಾನ
ಘಾತಿಸು - ಗಾಯಮಾಡು
ಘಾಸಿ - ದಣಿವು, ಹಿಂಸೆ, ನೋವು
ಘೋಷಣೆ - ಕೂಗಿಕೊಳ್ಳುವಿಕೆ, ಜಯಕಾರ ಮಾಡುವಿಕೆ
ಘ್ರಾಣೇಂದ್ರಿಯ - ಮೂಗು

## ಚ

ಚಕೋರ - ಬೆಳದಿಂಗಳನ್ನೇ ಸೇವಿಸಿ ಬದುಕುವುದೆಂದು ನಂಬಲಾದ ಪಕ್ಷಿ
ಚಪ್ಪಡಿ - ಹಾಸುಗಲ್ಲು, ಚಪ್ಪಟೆಯಾದ ಕಲ್ಲು
ಚರಣ - ಪಾದ
ಚರಣದುಂಗುಟದಿಂದ ಶಿರಪರಿಯಂತ- ಕಾಲ ಹೆಬ್ಬೆರಳಿನಿಂದ ತಲೆಯ ವರೆಗೆ
ಚರಣಾಬ್ಜ - ಪಾದಗಳೆಂಬ ತಾವರೆ (ಅಡಿದಾವರೆ)
ಚಲ್ಲವತ್ತರು - ಮೋಸಗಾರರು, ವಂಚಕರು, ಠಕ್ಕರು, ನಂಬಿಸಿ ಹೊಟ್ಟೆ ಹೊರೆಯುವವರು

ಚಿಂತಾಮಣಿ - ಬಯಸಿದುದನ್ನು ಕೊಡುವ ರತ್ನ
ಚಿತ್ತಜ - ಮನಸ್ಸಿನಲ್ಲಿ ಜನಿಸಿದವನು (ಮನ್ಮಥ)
ಚಿತ್ತಜಯ್ಯ - ಮನ್ಮಥನ ತಂದೆ (ಶ್ರೀಕೃಷ್ಣ)
ಚಿತಾವಣೆ - ಇತರರನ್ನು ಪ್ರೇರೇಪಿಸುವಿಕೆ, ಪ್ರಚೋದನೆ
ಚಿಲ್ಲರೆ - ಸಣ್ಣ, ಅಲ್ಪವಾದ
ಚೇಗು - ನಷ್ಟ, ಕೇಡು
ಚೋದಿಸು - ಪ್ರಚೋದಿಸು

## ಛ

ಛಂದ - ಛಂದಸ್ಸು
ಛತ್ರ - ಧರ್ಮಶಾಲೆ

## ಜ

ಜಟಿಲಜಡಕು - ಒಂದಕ್ಕೊಂದು ಹೆಣೆದುಕೊಂಡುದು, ಸಿಕ್ಕಾದುದು.
ಜಟ್ಟಿಗ - ಶೂರ, ವೀರ
ಜತನ - ಜಾಗ್ರತೆ, ಜೋಪಾನ
ಜಸ - ಯಶ, ಕೀರ್ತಿ
ಜಾಲ - ಸಮಸ್ಯೆ, ಬಲೆ
ಜಿಹ್ವೆ - ನಾಲಿಗೆ
ಜೀರ್ಣವಸ್ತ್ರ - ಶಿಥಿಲವಾದ ಬಟ್ಟೆ
ಜೀವಸತ್ವ - ಶರೀರದ ಪೋಷಣೆಗೆ ಅತ್ಯವಶ್ಯವಾದ ಆಹಾರಾಂಶ
ಜೈವಿಕ - ಜೀವಕ್ಕೆ ಸಂಬಂಧಿಸಿದ
ಜೋಡು - ಸಮ, ಸಾಮ್ಯ

## ಡ

ಡೋಲಾಯಮಾನ - ಚಂಚಲ

## ತ

ತಕಲಿ - ನೂಲನ್ನು ತೆಗೆಯುವ ಒಂದು ಉಪಕರಣ
ತಟ - ದಡ
ತಟಿನಿ - ನದಿ
ತಡಿಕೆ - ಬಿದಿರಿನ ತಟ್ಟಿ
ತಣಿಗೆ - ತಟ್ಟೆ
ತದ್ದಿನ - ಆ ದಿನ
ತಪ್ತಕಿರಣೋದಯ - ಸೂರ್ಯೋದಯ
ತರಿಯು - ಕಡಿಯು, ನಾಶಮಾಡು
ತಲಪರಿಗೆ - ನೀರು ಚಿಮ್ಮುವ ಭೂಭಾಗ
ತರುಮೂಲ - ಮರದ ಬುಡ
ತಳ್ಕಿ - ಗೊಡವೆ, ಒಡನಾಟ, ಸಂಬಂಧ
ತಾಂಡವ - ದಿಕ್ಕೆಟ್ಟ ಕುಣಿತ, ಶಿವನ ಉಗ್ರವಾದ ನರ್ತನ
ತಾನ - ಸ್ವರ ವಿಸ್ತಾರ
ತಾಪ - ಬಿಸಿ
ತಿಟ್ಟು - ದಿಣ್ಣೆ, ಏರಿ, ಎತ್ತರದ ನೆಲ
ತಿರಿಯು - ಅಲೆಯು, ತಿರುಗು, ಭಿಕ್ಷೆ ಬೇಡು
ತಿಲ - ಎಳ್ಳು
ತೀಡು - ಬೀಸು, ಸ್ಪರ್ಶಿಸು
ತೀವ್ರ - ಹರಿತ, ತೀಕ್ಷ್ಣ
ತುಂಬುವ - ಆವರಿಸುವ
ತೆಂಕಣ - ದಕ್ಷಿಣ
ತೊಂಡುತೊಳಸು - ಉದ್ಧಟತನ, ಸ್ವೇಚ್ಛಾವೃತ್ತಿ
ತೊತ್ತುತನ - ದಾಸಿತನ, ದಾಸ್ಯ

ತೊಳಗು - ಪ್ರಕಾಶಿಸು
ತೋಟಿ - ಜಾಡಮಾಲಿ
ತೋಡು - ಅಗೆ, ಹಳ್ಳವನ್ನು ಮಾಡು
ತೋರ್ದೆ - ತೋರಿಸಿದೆ
ತ್ವರೆ - ಬೇಗ
ತೋಯಜ - ನೀರಿನಲ್ಲಿ ಹುಟ್ಟಿದುದು (ಕಮಲ, ತಾವರೆ)
ತೋಯಜದಳ - ತಾವರೆಯ ಎಸಳು
ತ್ರಿದಿವ - ಸ್ವರ್ಗ
ತ್ರಿಪದಿ - ಮೂರು ಪಾದಗಳಿರುವ ಒಂದು ಪದ್ಯ ಜಾತಿ
ತೊಲೆ - ಮಾಡಿಗೆ ಆಧಾರವಾಗಿ ಗೋಡೆಗಳ ಮೇಲೆ ಅಡ್ಡವಾಗಿ ಹಾಕುವ ಮರದ ಅಡ್ಡ

## ದ

ದಂತಪ್ರಭೆ - ಹಲ್ಲಿನ ಕಾಂತಿ
ದಂಡಿಗೆ - ಪಲ್ಲಕ್ಕಿ
ದಂಡಾಪೂಪ - ಕೋಲಿನಲ್ಲಿ ಪೋಣಿಸಿದಂತಿರುವ ಒಂದು ಬಗೆಯ ತಿಂಡಿ (ಅಪ್ಪ), ಜೇನುಗೂಡು, ಕೋಲ್ಜೇನು ಗೂಡು
ದಂಧೆ - ಉದ್ಯೋಗ
ದಧಿ - ಮೊಸರು
ದರಖಾಸ್ತು - ಸಾಗುವಳಿ ಮಾಡಲು ಸರಕಾರದವರು ಕೊಡುವ ಸಾಗುವಳಿಯಾಗದಿರುವ ಭೂಮಿ
ದಹಿಸು - ಸುಡು, ಉರಿಸು
ದಳ್ಳುರಿ - ತೀವ್ರವಾಗಿ ಉರಿ, ದೊಡ್ಡ ಉರಿ.
ದಾಯಿಗ - ದಾಯಾದಿ
ದಾರುಣ - ಭಯಾನಕ, ಕಠಿಣವಾದ
ದಿಗ್ವಿಜಯ - ಎಲ್ಲ ರಾಜ್ಯಗಳನ್ನು ಜಯಿಸುವುದು
ದಿಟ - ನಿಜ
ದ್ವಿಜ - ಬ್ರಾಹ್ಮಣ
ದೀನ್ - ಧರ್ಮ
ದೀವಟಿಗೆ - ದೊಂದಿ, ಪಂಜು
ದುರುಳ - ಕೆಟ್ಟವನು, ನೀಚ
ದುರ್ಲಭ - ಅಪರೂಪವಾದುದು, ಪಡೆಯಲು ಅಸಾಧ್ಯವಾದುದು
ದುಶ್ಶಕುನ - ಕೆಟ್ಟ ಸೂಚನೆ
ದೇಸಿ - ಪರಂಪರಾಗತವಾಗಿ ಆಯಾ ದೇಶಕ್ಕೆ ಸಂಬಂಧಿಸಿ ಬಂದ ಆಚಾರ, ಸಂಸ್ಕೃತಿ
ದೊರೆ - ಸಮಾನ, ಅರಸು
ದ್ರವ್ಯ - ವಸ್ತು, ಪದಾರ್ಥ

## ಧ

ಧಕ್ಕೆ - ಅಪಾಯ, ಹೊಡೆತ
ಧನುಶರಾಳಿ - ಬಿಲ್ಲು ಮತ್ತು ಬಾಣಗಳ ಸಮೂಹ

## ನ

ನನ್ನಿ - ಸತ್ಯ
ನನೆಯಂಬು - ಪುಷ್ಪಬಾಣ
ನಯ - ನೀತಿ, ರೀತಿ
ನರ - ಅರ್ಜುನ, ಮನುಷ್ಯ
ನಭ - ಆಕಾಶ
ನರಪ್ರಾಣಿ - ಮನುಷ್ಯ ಜೀವಿ
ನವೋದನ - ಹೊಸ ಅನ್ನ
ನಾರಿಕೇಳ - ತೆಂಗಿನಕಾಯಿ

| | |
|---|---|
| ನಿರ್ಝರ | - ಬೆಟ್ಟದ ಮೇಲಿನಿಂದ ಹರಿಯುವ ಝರಿ |
| ನಿತ್ಯಸತ್ಯ | - ಶಾಶ್ವತ, ಹುಟ್ಟು ಸಾವುಗಳಿಲ್ಲದುದು |
| ನಿಯತಿ | - ನಿಯಮ, ವಿಧಿ |
| ನಿಯುಕ್ತಿ | - ಹುದ್ದೆ, ಅಧಿಕಾರ, ನೇಮಕ |
| ನಿಱಿಸು | - ಸ್ಥಾಪಿಸು, ನೆಲೆಗೊಳಿಸು |
| ನಿಱಿಪಂತು | - ಸ್ಥಾಪಿಸುವ ಹಾಗೆ |
| ನಿರ್ವಾಣ | - ಮೋಕ್ಷ, ಕೈವಲ್ಯ |
| ನಿಷ್ಪಕ್ಷಪಾತ | - ಯಾವ ಪಕ್ಷವನ್ನು ವಹಿಸದೆ ಸಮಭಾವದಿಂದ ಇರುವಿಕೆ, ಸಮದೃಷ್ಟಿ |
| ನೀರವ | - ನಿಶ್ಶಬ್ದ, ಮೌನ |
| ನೀರುಣಿಸು | - ನೀರುಕುಡಿಸು |
| ನೀಳ್ದು | - ಎತ್ತರವಾಗಿ, ಉದ್ದವಾಗಿ |
| ನುಡಿಗೊಳ್ಳದಿರ್ | - ಮಾತನ್ನು ಕೇಳಬೇಡ, ಮಾತನ್ನು ತೆಗೆದುಕೊಳ್ಳಬೇಡ |
| ನೂಲತೋಡಾಗು | - ನೂಲಿನ ಎಳೆಗಳು ಹಾಸುಹೊಕ್ಕಾಗಿ ಹೊಂದಿಕೊಳ್ಳುವಂತೆ ಹೊಂದಿಕೊಳ್ಳುವುದು. |
| ನೆಗಱ್ತೆ | - ಪ್ರಸಿದ್ಧಿ |
| ನೆರವು | - ಸಹಾಯ |
| ನೆರೆ | - ಹೆಚ್ಚು, ಚೆನ್ನಾಗಿ |
| ನೇಮ | - ವ್ರತ, ಅನುಮತಿ |
| ನೊರೆಹಾಲು | - ಆಗತಾನೇ ಹಿಂಡಿದ ಹಾಲು |

## ಪ

| | |
|---|---|
| ಪಂಜ | - ಸಿಂಹ ಬೆಕ್ಕು ಮುಂತಾದ ಪ್ರಾಣಿಗಳ ಉಗುರು ಸಹಿತವಾದ ಅಂಗಾಲು |
| ಪಚ್ಚೆ | - ಒಂದು ಸುಗಂಧ ಸಸ್ಯ, ಹಸಿರು |
| ಪಡಿಯರ | - ಸೇವಕ, ಬಾಗಿಲು ಕಾಯುವವ |
| ಪಡೆಮಾತು | - ಸುದ್ದಿ, ಪ್ರಸಿದ್ಧವಾದ ಮಾತು, ಕೀರ್ತಿ |
| ಪಡಿನುಡಿ | - ಪ್ರತ್ಯುತ್ತರ |
| ಪದ | - ಪಾದ |
| ಪಯೋದಧಿ | - ಹಾಲು ಮತ್ತು ಮೊಸರು |
| ಪರಂಧಾಮ | - ಶ್ರೇಷ್ಠವಾದ ನೆಲೆ, ಸ್ವರ್ಗ, ವೈಕುಂಠ |
| ಪರಭಾರೆ | - ತನ್ನ ವಶದಲ್ಲಿರುವ ಆಸ್ತಿ, ವಸ್ತು ಮೊದಲಾದುವುಗಳನ್ನು ಬೇರೆಯವರಿಗೆ ಒಪ್ಪಿಸುವುದು, ವಹಿಸಿಕೊಡುವುದು. |
| ಪರಮ | - ಶ್ರೇಷ್ಠ |
| ಪರಾಙ್ಮುಖ | - ಮುಖವನ್ನು ತಿರುಗಿಸಿದ, ವಿಮುಖ |
| ಪರಿಚರ್ಯೆ | - ಸೇವೆ, ಪೂಜೆ, ಊಳಿಗ |
| ಪರಿಯಂತ | - ತನಕ |
| ಪರಿವೆ | - ಗೊಡವೆ, ಗಮನ |
| ಪರೆ | - ಹಬ್ಬು, ವ್ಯಾಪಿಸು |
| ಪಸರಿಸು | - ವ್ಯಾಪಿಸು, ಹರಡು |
| ಪಸುರ್ | - ಹಸುರು |
| ಪಳ್ಳಿರ್ | - ತಂಗು, ನಿರ್ವಸಿತನಂತೆ ನೆಲಸು |
| ಪಳ್ಳಿರಲ್ಕೆ | - ತಂಗಲು, ವಾಸಿಸಲು, ನಿರ್ವಸಿತರಿಗೆ ನೆಲೆಸಲು |
| ಪಾಂಸು | - ಧೂಳು |
| ಪಾಗಾರ | - ಸುತ್ತುಗೋಡೆ, ಪ್ರಾಕಾರ |

ಪಾರ್ಥಿವ ಶರೀರ - ಭೌತಿಕವಾದ ದೇಹ, ಕಳೇಬರ
ಪಾರ್ - ನಿರೀಕ್ಷಿಸು
ಪಾರ್ದು - ನಿರೀಕ್ಷಿಸಿ
ಪಾರಂಪರಿಕ - ಪರಂಪರೆಯಿಂದ ಬಂದಿರುವ
ಪಾಸುಂಪೊಕ್ಕುಂಪರೆದು - ಹಾಸುಹೊಕ್ಕಾಗಿ ವ್ಯಾಪಿಸಿ, (ಉದ್ದಕ್ಕೂ ಅಡ್ಡಕ್ಕೂ)
ಪಿಂಡ - ತೀರಿಹೋದ ಹಿರಿಯರಿಗೆ ವರ್ಷಕ್ಕೊಮ್ಮೆ ಶ್ರಾದ್ಧದಲ್ಲಿ ಅರ್ಪಿಸುವ ಅನ್ನದ ಉಂಡೆ.
ಪಿಂತಿರಿಸಿ - ಹಿಂದೆ ಕುಳ್ಳಿರಿಸಿ
ಪಿರಿಯರುಂ - ಹಿರಿಯರೂ
ಪುದು (ಪುದುಪು) - ಹೊಂದಿಕೆ, ಸೇರುವಿಕೆ
ಪುದುವಲ್ಲಳ್ - ಹೊಂದಿಕೊಳ್ಳುವವಳಲ್ಲ
ಪೀಠಾಗ್ರ - ಸಿಂಹಾಸನದ ತುದಿ, ಮೇಲ್ಭಾಗ
ಪುಸಲಾಯಿಸು - ಸವಿಮಾತುಗಳಿಂದ ಮನ ಒಲಿಸು
ಪೂರಕ - ಧಾನ್ಯ ತುಂಬುವ ಚೀಲ
ಪೆಂಡಿರ್ - ಸ್ತ್ರೀಯರು, ಹೆಂಡತಿಯರು
ಪೆಂಪು - ಕೀರ್ತಿ, ಹಿರಿಮೆ
ಪೆರತು - ಬೇರೆ
ಪೊರ್ದಲೀಯೆ - ಹೊಂದಲು ಬಿಡೆನು, ಪಡೆಯಲು ಬಿಡೆನು
ಪೊಡಮಡು - ನಮಸ್ಕರಿಸು
ಪೊಡೆವಟ್ಟು - ನಮಸ್ಕರಿಸಿ
ಪೊರಡು - ಹೊರಡು
ಪೊರೆ - ಸಂಬಂಧ, ರಕ್ಷಣೆ
ಪೋದವರನ್ - ಹೋದವರನ್ನು
ಪ್ರಳಯ - ನಾಶ
ಪ್ರಾತ್ಯಕ್ಷಿಕೆ - ಕಣ್ಣಿಗೆ ಕಾಣಿಸುವಂತೆ ತೋರಿಸುವುದು
ಪ್ರೇರಣೆ - ಮುನ್ನುಗ್ಗುವಂತೆ ಮಾಡುವಿಕೆ, ಪ್ರಚೋದನೆ
ಪೈತೃಕ - ಪಿತೃವಿಗೆ ಮಾಡುವ ಶ್ರಾದ್ಧ, ತಿಥಿ

## ಫ

ಫರ್ಲಾಂಗ್ - ಅಳತೆಯ ಒಂದು ಮಾನ (201.164 ಮೀಟರ್)

## ಬ

ಬಂಡು - ಜೇನು, ಮಧು
ಬಂಜೆ - ಬರಡು, ಮಕ್ಕಳನ್ನು ಪಡೆಯದವಳು
ಬಗೆ - ರೀತಿ, ಮನಸ್ಸು
ಬತೇರಿ - ಕೋಟೆಯ ಮೇಲೆ ತೋಪು ಇಡುವ ದಿನ್ನೆ
ಬಟ್ಟೆ - ದಾರಿ
ಬಟ್ಟೆಯಿನೆ - ದಾರಿಯಿಂದ
ಬರಂ - ವರೆಗೆ
ಬರವು - ಆಗಮನ, ಬರುವಿಕೆ
ಬಲ್ಗಂಬ - ಶಕ್ತಿಶಾಲಿಯಾದ ಕಂಬ
ಬಲಿಯು - ಬೆಳೆಯು, ಭದ್ರವಾಗು, ಗಟ್ಟಿಯಾಗು
ಬಸುರು - ಹೊಟ್ಟೆ
ಬಹಿಷ್ಕಾರ - ಧಾರ್ಮಿಕ ಅಥವಾ ಸಾಮಾಜಿಕ ದೃಷ್ಟಿಯಿಂದ ತಪ್ಪು ಮಾಡಿದ ವ್ಯಕ್ತಿಯನ್ನು ಜಾತಿ, ದೇಶ, ಸಮಾಜ ಮೊದಲಾದವುಗಳಿಂದ ಹೊರಹಾಕುವುದು, ತಿರಸ್ಕರಿಸುವುದು.

ಬೞಿಯಟ್ಟು - ದೂತನ ಮೂಲಕ ಸುದ್ದಿಯನ್ನು ಕಳುಹಿಸು, ಕರೆ ಕಳುಹಿಸು

ಬೞಲಿಸು - ಆಯಾಸಪಡಿಸು

ಬಾಡ - ಗ್ರಾಮ, ಹಳ್ಳಿ

ಬಿಜಯಂಗೆಯ್ಯೆಂ - ಹೊರಟುಹೋಗಿ

ಬಿಡದಿ - ಅತಿಥಿಗಳ ಬಿಡಾರಕ್ಕೆಂದು ತೆರವು ಮಾಡಿದ ಮನೆ, ಬಿಡಾರ

ಬಿತ್ತರ - ವಿಸ್ತಾರ

ಬಿನ್ನಣ - ವಯ್ಯಾರ, ನೈಪುಣ್ಯ

ಬಿಸವಂದ - ಆಶ್ಚರ್ಯ, ಸೋಜಿಗ, ಅಚ್ಚರಿ

ಬೆಡಗು - ಸೌಂದರ್ಯ, ಸೊಬಗು

ಬೆದರು - ಹೆದರು

ಬೆಲೆಯಾಳು(ಳ್) - ಸೇವಕ

ಬೆಸುಗೆ - ಜೋಡಣೆ, ಒಂದಾಗುವಿಕೆ

ಬೆಳ್ಳ - ದಡ್ಡ, ಪೆದ್ದ, ಏನೂ ಅರಿಯದವನು

ಬೇೞ್ಪುದು - ಬೇಡುವುದು

ಬುರುಜು - ಕೋಟೆಯ ಪ್ರಾಕಾರದ ಮೇಲೂ ಗೋಪುರದ ತುದಿಯಲ್ಲಿಯೂ ಕಟ್ಟುವ ವರ್ತುಲಾಕಾರದ ಕಟ್ಟಡ, ಗುಮ್ಮಟ

ಬೆಸನ - ಕೆಲಸ, ಕಾರ್ಯ

ಬೆಸಗೊಂಡೊಡೆ - ಕೇಳಿದಾಗ

ಬೆಸಸಲ್ - ಹೇಳಲು

ಬೆಸಸು - ಹೇಳು

ಬೆನ್ನೀರ್ - ಬಿಸಿಯಾದ ನೀರು

## ಭ

ಭಾಗ - ರಾಜ್ಯಭಾಗ, ಭೂಬಾಗ

ಭಾರ್ಗವ - ಪರಶುರಾಮ

ಭಿಕ್ಷು - ಬೌದ್ಧ ಸನ್ಯಾಸಿ

ಭುವನ - ಜಗತ್ತು, ಪ್ರಪಂಚ

ಭೂರಿನೇತ್ರ - ಅನೇಕ ಕಣ್ಣುಳ್ಳವನು (ಇಂದ್ರ)

## ಮ

ಮಂತ್ರಮುಗ್ಧ - ವಶೀಕರಣಕ್ಕೆ ಒಳಗಾದವನು

ಮಂದಾಗ್ನಿ - ಹೆಚ್ಚು ಉರಿಯಿಲ್ಲದ ಬೆಂಕಿ

ಮಂದಾಸನ - ದೇವರ ವಿಗ್ರಹವನ್ನು ಇಡುವ ಮರ ಅಥವಾ ಲೋಹದ ತಟ್ಟೆ

ಮಕುಟಧಾರಣ - ಕಿರೀಟವನ್ನು ಧರಿಸಿಕೊಳ್ಳುವುದು

ಮಗುೞ್ದುಂ - ಪುನಃ

ಮಡಿವಂತ - ಸಂಪ್ರದಾಯವನ್ನು ಪಾಲಿಸುವವನು, ಆಚಾರವಂತ

ಮದಿರೆ - ಅಮಲೇರಿಸುವ ಪೇಯ, ಮದ್ಯ

ಮಧು - ಜೇನು

ಮಧುಮೇಹ - ಸಕ್ಕರೆ ಕಾಯಿಲೆ

ಮಥಿಸು - ಕಡೆಯು

ಮನಂಗೊಳ್ - ಮನಸ್ಸನ್ನು ಸೆಳೆ, ಆಕರ್ಷಿಸು

ಮನಕತ - ಮನಸ್ತಾಪ

ಮನ್ನಣೆ - ಗೌರವ

ಮನೆವಾರ್ತೆ - ತನ್ನ ಸಂಸಾರ, ಮನೆಗೆಲಸ, ಮನೆಯ ಸುದ್ದಿ

ಮರುಗ - ಒಂದು ಬಗೆಯ ಸುವಾಸನೆಯ ವನಸ್ಪತಿ, ಪುದೀನ
ಮಳೆಬಿಲ್ಲು - ಕಾಮನಬಿಲ್ಲು
ಮಾಟಗಾರ - ಇಂದ್ರಜಾಲ ವಿದ್ಯೆ ಬಲ್ಲವ
ಮಾಣಿಕ್ಯ - ಕೆಂಪು ಹರಳು, ನವರತ್ನಗಳಲ್ಲಿ ಒಂದು
ಮಾನವೀಯ - ಮನುಷ್ಯತ್ವದಿಂದ ಕೂಡಿದ
ಮಾನಸರ್ - ಮನುಷ್ಯರು
ಮಾಮರ - ಮಾವಿನ ಮರ
ಮಾಯಾಜಾಲ - ಮೋಸದ ಬಲೆ
ಮಾರಣ ಹೋಮ - ಹಗೆಯನ್ನು ಕೊಲ್ಲಲು ಮಾಡುವ ಒಂದು ವಿಧಿ
ಮಿಕ - ಬೇಟೆಯ ಪ್ರಾಣಿ
ಮಿರುಗು - ಪ್ರಕಾಶಿಸು
ಮುಂತಿರಿಸು - ಮುಂದಿಟ್ಟುಕೊಳ್ಳು
ಮುಕುಳಿತ - ಮುಚ್ಚಿದ
ಮುಖಕಿಡೆ - ಬಾಯಿಗೆ ಎರೆಯಲು, ಮುಖಕ್ಕೆ ಹಿಡಿಯಲು
ಮುಗುಳು - ಮೊಗ್ಗು
ಮುಗ್ಗಟ್ಟು - ತೊಂದರೆ, ಕೊರತೆ
ಮುಡಿವಾಳ - ಪರಿಮಳದ ಬೇರುಳ್ಳ ವನಸ್ಪತಿ, ಲಾವಂಚ
ಮುನ್ನಮೆ - ಮೊದಲೆ
ಮುನಿಸು - ಸಿಟ್ಟು, ಕೋಪ, ವೈರ
ಮುನ್ನಿನ - ಹಿಂದಿನ
ಮೂತಿ - ಮುಖ
ಮೂರ್ತ - ನಿರ್ದಿಷ್ಟ ಆಕಾರವುಳ್ಳ
ಮೂದಲಿಸು - ಹೀಯಾಳಿಸು
ಮೃಗರಾಜ ಕಿಶೋರ - ಸಿಂಹದ ಮರಿ
ಮೈಯಲಸಿದಂತೆ - ದೇಹಕ್ಕೆ ಆಲಸ್ಯವಾದಂತೆ
ಮೊರೆತ - ಅಬ್ಬರ, ದೊಡ್ಡಧ್ವನಿ, ಮೊಳಗು
ಮೋಹಿತ - ಮೋಹಕ್ಕೆ ಒಳಗಾದವ

## ಯ

ಯಾಂತ್ರಿಕ - ಏಕತಾನವಾದ
ಯುಷ್ಮತ್ - ನಿನ್ನ

## ರ

ರವ - ಶಬ್ದ, ಧ್ವನಿ
ರಸವಶನಾಗು - ಮೈಮರೆಯು
ರಸೆ - ಭೂಮಿ
ರಹದಾರಿ - ಪರವಾನಿಗೆ, ಅನುಮತಿ ಪತ್ರ
ರಾಜತೆ - ದೊರೆತನ, ಪ್ರಭುತ್ವ
ರುದ್ರಭೂಮಿ - ಶಿವನ ತಾಣ, ಸ್ಮಶಾನ, ಶ್ಮಶಾನ
ರೂವಾರಿ - ಶಿಲ್ಪಿ
ರೂಢಿ - ಭೂಮಿ, ನೆಲ, ಸಂಪ್ರದಾಯ
ರೇಗಾಡು - ಸಿಟ್ಟುಗೊಳ್ಳು
ರೋದನ - ಪ್ರಲಾಪ, ಅಳು

## ಲ

ಲಲಾಟ - ಹಣೆ
ಲಾಂಛನ - ಗುರುತು, ಚಿಹ್ನೆ
ಲೋಕತ್ರಯ - ಮೂರುಲೋಕ (ಸ್ವರ್ಗ, ಮರ್ತ್ಯ, ಪಾತಾಳ)

## ವ

ವಂದಿ - ಹೊಗಳು ಭಟ
ವಕಾಲತ್ತು - ಇನ್ನೊಬ್ಬರ ಪರವಾಗಿ ವಾದಿಸುವವನು, ಪಕ್ಷ ವಹಿಸುವಿಕೆ
ವಟಗುಟ್ಟು - ಗುಣುಗುಡು
ವದನ - ಮುಖ, ಬಾಯಿ
ವದನಾರವಿಂದ - ಮುಖವೆಂಬ ತಾವರೆ

ವನಜಾಕ್ಷ - ತಾವರೆಯಂತೆ ಕಣ್ಣುಳ್ಳವನು (ಶ್ರೀಕೃಷ್ಣ)
ವನಧಿ - ಸಮುದ್ರ
ವರ - ಶ್ರೇಷ್ಠ, ಆಶೀರ್ವಾದ
ವಾಡಿಕೆ - ರೀತಿ, ಕ್ರಮ
ವಾರಿ - ನೀರು
ವಾರಿಜಾಕ್ಷ - ತಾವರೆಯಂತಹ ಕಣ್ಣುಳ್ಳವನು (ಕೃಷ್ಣ
ವಾರುಣಿ - ಹೆಂಡ, ಕಳ್ಳು
ವಾರಿಜಾಸನಪಿತ - ಬ್ರಹ್ಮನ ತಂದೆ (ವಿಷ್ಣು, ಕೃಷ್ಣ)
ವಿದ್ದೆ - ವಿದ್ಯೆ
ವಿದ್ಯಮಾನ - ವಾಸ್ತವ ಸಂಗತಿ
ವಿಧಾಯಕ - ರಚನಾತ್ಮಕವಾದ, ನಿರ್ಣಾಯಕ
ವಿಧಿಸು - ಆಜ್ಞಾಪಿಸು, ಆದೇಶಿಸು, ನಿಯಮಿಸು
ವಿಪ್ರ - ಬ್ರಾಹ್ಮಣ
ವಿಪಿನ - ಕಾಡು
ವಿಭ್ರಮೆ - ಭ್ರಾಂತಿ, ತಬ್ಬಿಬ್ಬು
ವಿಭೂತಿ ಪುರುಷ - ಮಹಾಪುರುಷ, ಮಹಿಮಾಶಾಲಿ
ವಿಷಮ - ದುಃಖಕರವಾದ
ವೀಚಿ - ಸಣ್ಣ ಅಲೆ, ತರಂಗ
ವೈವಾಹ - ವಿವಾಹ
ವ್ಯಾಕುಳ - ಚಿಂತೆ
ವ್ಯಾಧ - ಬೇಡ, ಬಿಯದ
ವ್ರೀಹಿ - ಭತ್ತ, ಅಕ್ಕಿ, ಗೋಧಿ

### ಶ

ಶರ್ಕರ - ಸಕ್ಕರೆ
ಶಕುನ - ಒಳಿತು ಕೆಡುಕುಗಳ ಸೂಚನೆ
ಶಶ - ಮೊಲ
ಶಶಿ - ಚಂದ್ರ
ಶಾಕ - ತರಕಾರಿ
ಶಾಲಿ - ಭತ್ತ
ಶಾಲ್ಯನ್ನ - ಅಕ್ಕಿಯ ಅನ್ನ, ಒಂದು ಜಾತಿಯ ಭತ್ತ
ಶ್ರಾದ್ಧ - ಪಿತೃಗಳಿಗೆ ಶಾಸ್ತ್ರೋಕ್ತವಾಗಿ ಮಾಡುವ ಕರ್ಮ
ಶೌರ್ಯಮದಾಡಂಬರ - ಶೌರ್ಯದ ಮದದ ಉಬ್ಬರ

### ಸ

ಸಂಗ - ಸಹವಾಸ, ಸ್ನೇಹ
ಸಂದ - ಪ್ರಸಿದ್ಧ
ಸಂತಾಪ - ದುಃಖ
ಸಂದಿಗ್ಧ - ಜಟಿಲವಾದ
ಸಕುತ್ಸಿತ - ಕೆಡದ, ಹಾಳಾಗದ
ಸಗ್ಗ - ಸ್ವರ್ಗ
ಸಜ್ಜನ - ಕುಲವಧು, ಕುಲನಾರಿ, ಪತಿವ್ರತೆ, ಹೆಂಡತಿ
ಸಜ್ಜೆ - ಹಾಸಿಗೆ, ಮಂಚ, ಶಯ್ಯಾ
ಸಟೆ - ಸುಳ್ಳು, ಮೋಸ
ಸತ್ಪಾತ್ರ - ಯೋಗ್ಯನಾದ ವ್ಯಕ್ತಿ
ಸದ್ದ್ರವ್ಯ - ಸುವಸ್ತು
ಸದ್ವಂಶ - ಉತ್ತಮ ವಂಶ
ಸಮಗ್ರ - ಸಂಪೂರ್ಣ, ಪರಿಪೂರ್ಣ
ಸರ - ದನಿ, ಸ್ವರ
ಸರಸಿ - ಕೊಳ
ಸಲಿಲ - ನೀರು
ಸಲೆ - ಚೆನ್ನಾಗಿ, ಅತಿಯಾಗಿ
ಸಾಂಬ್ರಾಣಿ - ದೊಡ್ಡಪತ್ರೆ, ಒಂದು ಔಷಧೀಯ ಸಸ್ಯ

ಸಿಂಗಿ - ವಿಷಜಂತು, ಒಂದು ಬಗೆಯ ಘೋರವಾದ ವಿಷ
ಸಿಂಚಿಸು - ಚಿಮುಕಿಸು
ಸಿಡಿಲ್ - ಕಿಡಿಕಿಡಿಯಾಗು, ಕನಲು
ಸಿಡಿಲ್ದು - ಕನಲಿ, ಕಿಡಿಕಿಡಿಯಾಗಿ
ಸಿಂಧುತನೂಜ - ನದಿಯ ಮಗ, ಗಂಗೆಯ ಮಗ (ಭೀಷ್ಮ)
ಸಿಗ್ಗು - ನಾಚಿಕೆ
ಸೀಗುರಿ - ಚಾಮರ
ಸೀಮಿತ - ಮಿತಿಗೆ ಒಳಪಟ್ಟ
ಸುಜನತೆ - ಸದ್ಗುಣ, ಸೌಜನ್ಯ
ಸುರನದಿ - ದೇವನದಿ, ಗಂಗೆ
ಸುರನದಿಯ ಜನಕ - ಗಂಗೆಯ ತಂದೆ (ವಿಷ್ಣು)
ಸುರೆ - ಮದ್ಯ, ಕಳ್ಳು
ಸುಸ್ತಿ - ಚಕ್ರಬಡ್ಡಿ
ಸೂತ್ರ - ನಿಯಮ, ನಿಬಂಧನೆ, ನೂಲು, ಹಗ್ಗ
ಸೂಸು - ಚಿಮುಕಿಸು, ಪ್ರೋಕ್ಷಿಸು, ಚೆಲ್ಲು, ಎರಚು
ಸೆಳೆಯು - ಎಳೆಯು
ಸೇದೆ - ಆಯಾಸ, ದಣಿವು
ಸೇಸೆ - ಮಂಗಳಾಕ್ಷತೆ, ಮಂತ್ರಾಕ್ಷತೆ
ಸೈಪು - ಪುಣ್ಯ
ಸೈರಣೆ - ಸಹನೆ
ಸೊದೆ - ಅಮೃತ, ಸುಧಾ
ಸೋಗಿಲು - ಮಡಿಲು
ಸೌಸವ - ಪರಿಮಳ, ಕಂಪು, ಸುವಾಸನೆ
ಸ್ವಚ್ಛಂದ - ಕಟ್ಟುಪಾಡಿಲ್ಲದ
ಸ್ವಾದುಫಲ - ರುಚಿಯಾದ ಹಣ್ಣು
ಸ್ನಿಗ್ಧ - ಮೃದುವಾದುದು, ಕೋಮಲವಾದುದು

## ಹ

ಹಂತಿ - ಸಾಲು, ಶ್ರೇಣಿ
ಹಂದರ - ಚಪ್ಪರ
ಹನನ - ಕೊಲೆ, ವಧೆ, ನಾಶ
ಹರಗು - ಹರಡು
ಹರದ - ವ್ಯಾಪಾರಿ
ಹರದಾರಿ - ಮೂರು ಮೈಲುಗಳ ದೂರದ ಅಳತೆ
ಹರಿ - ಕೃಷ್ಣ
ಹರಿಣ - ಜಿಂಕೆ
ಹಲಧರ - ನೇಗಿಲನ್ನು ಆಯುಧವಾಗಿ ಹಿಡಿದವನು (ಬಲರಾಮ)
ಹಾಲಾಹಲ - ತೀಕ್ಷ್ಣವಾದ ವಿಷ, ಸಮುದ್ರ ಮಥನದ ಕಾಲದಲ್ಲಿ ಉದ್ಭವವಾದ ಮಹಾವಿಷ
ಹಾಯ್ಕು - ಹಾಕು
ಹಿಂಜು - ಜಾಳಾಗು
ಹೀನಾಯ - ಕೀಳಾದ, ಅವಮರ್ಯಾದೆಗೊಳಗಾದ, ಅವಮಾನಿತನಾದ
ಹುಸಿ - ಸುಳ್ಳು
ಹೂಂಕರಣ - ಹೂಂ ಎಂಬ ಧ್ವನಿ, ಅಬ್ಬರ
ಹೋರು - ಜಗಳಮಾಡು

# ಭಾರತದ ಸಂವಿಧಾನ

**ಭಾಗ IV ಕ**

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.